ಸೋಮವಾರ, ಫೆಬ್ರುವರಿ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 36 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪ್ರತಿಭಟನೆ
ಬಂಡೀಪುರ ಅರಣ್ಯದಲ್ಲಿ ರಾತ್ರಿ ವೇಳೆ ವಾಹನ ಸಂಚಾರ ಸಂಪೂರ್ಣ ನಿಷೇಧಕ್ಕೆ ಒತ್ತಾಯಿಸಿ ಗಂಧದ ಗುಡಿ ಪ್ರತಿಷ್ಠಾನ ಮೈಸೂರಿನಲ್ಲಿ ಭಾನುವಾರ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಯುವತಿ

ಆಳ-ಅಗಲ
'ಇಲ್ಲಿ ಹಸಿವಿನಿಂದ ಸಾಯುವುದಕ್ಕಿಂತ ಅಲ್ಲಿ ಸಾಯುವುದು ಉತ್ತಮ'

7 ಸಾವಿರ ಸಹಾಯಕ ಪ್ರಾಧ್ಯಾಪಕರ ನೇಮಕ: ಡಾ.ಎಂ.ಸಿ. ಸುಧಾಕರ್ 6
ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯ: ಡಿ.ಕೆ. ಶಿವಕುಮಾರ್
ಟ್ಯಾಕ್ಸಿ: ಏಕರೂಪದ ದರ ನಿಗದಿ 6
'ಅನ್ಯಾಯದ ವಿರುದ್ಧ ಧ್ವನಿಯೆತ್ತದೆ ವಿಧಿ ಇಲ್ಲ' 7

ಬಗರ್ ಹುಕುಂ ಅರ್ಜಿಗಳ ತ್ವರಿತ ವಿಲೇವಾರಿಗೆ ಗಡುವು: ಕಂದಾಯ ಇಲಾಖೆ ಸುತ್ತೋಲೆ

'ಅನರ್ಹ'ರ ಜಮೀನು ವಶಕ್ಕೆ ಸಜ್ಜು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯ ಸಕ್ರಮ (ಬಗರ್ ಹುಕುಂ) ಕೋರಿರುವ 9.29 ಲಕ್ಷ ಅರ್ಜಿಗಳ ವಿಲೇವಾರಿಗೆ ಗಡುವು ವಿಧಿಸಿರುವ ಕಂದಾಯ ಇಲಾಖೆ, 'ಅನರ್ಹ' ಅರ್ಜಿದಾರರ ವಶದಲ್ಲಿರುವ ಜಮೀನುಗಳನ್ನು ಸ್ವಾಧೀನಕ್ಕೆ ಪಡೆಯಲು ಮುಂದಾಗಿದೆ.

ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವಂತೆ ಕೋರಿ ಕರ್ನಾಟಕ ಭೂ ಕಂದಾಯ ಕಾಯ್ದೆಯ ನಮೂನೆ 50, ನಮೂನೆ 53 ಮತ್ತು ನಮೂನೆ 57ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಸುತ್ತೋಲೆ ಹೊರಡಿಸಿದ್ದಾರೆ.

'ಪ್ರಾಥಮಿಕ ಹಂತದ ಪರಿಶೀಲನೆ ಪೂರ್ಣಗೊಳಿಸಿ ಅರ್ಜಿಗಳನ್ನು ಬಗರ್ ಹುಕುಂ ಸಮಿತಿಯ ಮುಂದೆ ಮಂಡಿಸಬೇಕು. ಸಮಿತಿಯು ಗುರುತಿಸಿದ ಅನರ್ಹ ಅರ್ಜಿಯನ್ನು ಜಿಲ್ಲಾಧಿಕಾರಿಯು ಒಂದು ತಿಂಗಳೊಳಗೆ ತಿರಸ್ಕರಿಸಬೇಕು. ಅಂತಹ ಅರ್ಜಿದಾರರ ವಶದಲ್ಲಿರುವ ಜಮೀನುಗಳನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಿದ್ದಾರೆ.

'ಅನಧಿಕೃತ ಸಾಗುವಳಿಯನ್ನು ಬಗರ್ ಹುಕುಂ ಅಡಿಯಲ್ಲಿ ಸಕ್ರಮಗೊಳಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿ ತಿರಸ್ಕೃತವಾದರೆ ಅಂತಹ ಜಮೀನುಗಳನ್ನು ಸರ್ಕಾರದ ಸ್ವಾಧೀನಕ್ಕೆ ಪಡೆಯಬೇಕು ಎಂಬ ಅಂಶ ಭೂ ಕಂದಾಯ ಕಾಯ್ದೆಯಲ್ಲೇ ಇದೆ. ಈವರೆಗೆ ಅದನ್ನು ಸಮರ್ಪಕವಾಗಿ ಜಾರಿಗೊಳಿಸಿರಲಿಲ್ಲ. ಈ ಬಾರಿ ಕಾಯ್ದೆ ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇವೆ' ಎಂದು ಕಟಾರಿಯಾ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ ವಿಶೇಷ

ಗೋಮಾಳ, ಮೀಸಲು ಅರಣ್ಯ, ದೇವರ ಕಾಡು, ಗುಂಡು ತೋಪು, ಕೆರೆಯಂಗಳ, ಫೂಟ್ ಖರಾಬು, ಸ್ಮಶಾನ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಿ, ಆ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಹೊಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಅಕ್ರಮ ತಡೆಗೆ ಬಿಗಿ ಕ್ರಮ: ಬಗರ್ ಹುಕುಂ ಅರ್ಜಿಗಳ ವಿಲೇವಾರಿಯಲ್ಲಿ ಅಕ್ರಮ ತಡೆಗೆ ಡಿಜಿಟಲ್ ತಂತ್ರಜ್ಞಾನದ ಬಳಕೆಗೆ ಒತ್ತು ನೀಡಲಾಗಿದೆ. ನಮೂನೆ 50, 53 ಮತ್ತು 57ರಡಿ ಸ್ವೀಕೃತವಾಗಿರುವ ಅರ್ಜಿಗಳ ಪಟ್ಟಿಗಳನ್ನು ಡಿಜಿಟಲೀಕರಣ ಮಾಡಿ, ಹೊಸ ಹೆಸರು ಸೇರಿಸಲಾಗದಂತೆ 'ಲಾಕ್' ಮಾಡಲಾಗಿದೆ.

ಅನಧಿಕೃತ ಸಾಗುವಳಿದಾರರ ಆಧಾರ್ ಇ-ಕೆವೈಸಿ ಮತ್ತು ಸಾಗುವಳಿ ಜಮೀನಿನ ವಿಸ್ತೀರ್ಣ ಹಾಗೂ ಗಡಿಯನ್ನು ಬಗರ್ ಹುಕುಂ ಮೊಬೈಲ್ ಆ್ಯಪ್ ಬಳಸಿ ಜಿಯೋ ಫೆನ್ಸಿಂಗ್ ಮಾಡುವಂತೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

6ನೇ ಪುಟ ನೋಡಿ



- ಬಗರ್ ಹುಕುಂ ಸಮಿತಿ ವಾರಕ್ಕೆ ಕನಿಷ್ಠ ಒಂದು ಸಭೆ ನಡೆಸುವುದು ಕಡ್ಡಾಯ
- ಪ್ರತಿ ತಾಲ್ಲೂಕಿಗೆ ಇಬ್ಬರು ಭೂಮಾಪಕರ ನಿಯೋಜನೆ
- ಜಮೀನುಗಳಿಗೆ ಸಂಪರ್ಕ ಕಲ್ಪಿಸಲು 20 ಅಡಿ ಅಗಲದ ಬಂಡಿ ದಾರಿ ಕಡ್ಡಾಯ
- ಮಂಜೂರಾದ ಜಮೀನನ್ನು 25 ವರ್ಷಗಳವರೆಗೆ ಪರಭಾರೆ ಮಾಡದಂತೆ ಷರತ್ತು
- ಜಮೀನು ಲಭ್ಯವಿಲ್ಲದಿದ್ದರೆ ಅರ್ಜಿ ತಿರಸ್ಕರಿಸಲು ಜಿಲ್ಲಾಧಿಕಾರಿಗೆ ಅಧಿಕಾರ

ಪಿಟಿಸಿಎಲ್ ಕಾಯ್ದೆಯೂ ಅನ್ವಯ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಸರ್ಕಾರಿ ಜಮೀನುಗಳಲ್ಲಿ ಮಾಡುತ್ತಿರುವ ಅನಧಿಕೃತ ಸಾಗುವಳಿಯನ್ನು ಬಗರ್ ಹುಕುಂ ಅಡಿಯಲ್ಲಿ ಸಕ್ರಮಗೊಳಿಸುವಾಗ ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) (ಕೆಲವು ಭೂಮಿಗಳ ವರ್ಗಾವಣೆ ನಿಷೇಧ- ಪಿಟಿಸಿಎಲ್) ಕಾಯ್ದೆಯಡಿ ಪರಭಾರೆ ನಿಷೇಧದ ಷರತ್ತು ವಿಧಿಸುವಂತೆ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

9.29 ಲಕ್ಷ — ಬಾಕಿ ಇರುವ ಅರ್ಜಿಗಳು

54 ಲಕ್ಷ ಎಕರೆ — ಮಂಜೂರಾತಿ ಕೋರಿರುವ ವಿಸ್ತೀರ್ಣ

3 ಲಕ್ಷ ಎಕರೆ — ಲಭ್ಯವಿರುವ ಅಂದಾಜು ವಿಸ್ತೀರ್ಣ

ಕ್ರಿಮಿನಲ್ ಪ್ರಕರಣದ ಎಚ್ಚರಿಕೆ

ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಹಿಂದೆ ಬಗರ್ ಹುಕುಂ ಅರ್ಜಿಗಳ ವಿಲೇವಾರಿಯಲ್ಲಿ ಅಕ್ರಮ ನಡೆದಿರುವುದು ಪತ್ತೆಯಾಗಿದೆ. ಕೆಲವು ಅಧಿಕಾರಿಗಳ ಬಂಧನವೂ ಆಗಿದೆ. ಈ ಬಾರಿ ಅಂತಹ ಪ್ರಕರಣ ಮರುಕಳಿಸಿದರೆ ಕ್ರಿಮಿನಲ್ ಪ್ರಕರಣ ದಾಖಲಿಸುವ ಎಚ್ಚರಿಕೆಯನ್ನೂ ಕಂದಾಯ ಇಲಾಖೆ ನೀಡಿದೆ. 'ಅಕ್ರಮ ಎಸಗಿದರೆ ಕಾನೂನು ಕ್ರಮ ಜರುಗಿಸುತ್ತೇವೆ ಎಂಬ ಎಚ್ಚರಿಕೆಯನ್ನು ಸುತ್ತೋಲೆಯಲ್ಲೇ ನೀಡಿದ್ದೇವೆ. ಬಗರ್ ಹುಕುಂ ಅರ್ಜಿಗಳ ವಿಲೇವಾರಿಯಲ್ಲಿ ಕಿಂಚಿತ್ತು ಅಕ್ರಮವಾದರೂ ಸಹಿಸುವುದಿಲ್ಲ ಎಂದು ಸಚಿವರು ಈಗಾಗಲೇ ಸ್ಪಷ್ಟವಾಗಿ ತಿಳಿಸಿದ್ದಾರೆ' ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಹೇಳಿದರು.



ಜಾಗೃತಿ ಜಾಥಾ
ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಆರೋಗ್ಯ ಇಲಾಖೆಯು ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾ, ಸಂಕಲ್ಪ ಚೇಸ್ ಕ್ಯಾನ್ಸರ್ ಫೌಂಡೇಶನ್ ಹಾಗೂ ನವೋದಯನ್ಸ್ ಇನ್ ಬೆಂಗಳೂರು ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕ್ಯಾನ್‌ವಾಕ್' ಕ್ಯಾನ್ಸರ್ ಜಾಗೃತಿ ಜಾಥಾಕ್ಕೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು – ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್ 2

ಬೇಹುಗಾರಿಕೆ: ರಾಯಭಾರ ಕಚೇರಿ ಸಿಬ್ಬಂದಿ ಸೆರೆ



ಲಖನೌ (ಪಿಟಿಐ): ರಷ್ಯಾದ ಮಾಸ್ಕೊದಲ್ಲಿರುವ ಭಾರತದ ರಾಯಭಾರ ಕಚೇರಿಯಲ್ಲಿ ಕೆಲಸಕ್ಕಿದ್ದ ಭಾರತದ ಪ್ರಜೆಯನ್ನು, ಪಾಕಿಸ್ತಾನದ ಐಎಸ್‌ಐ ಪರ ಬೇಹುಗಾರಿಕೆ ನಡೆಸಿದ ಆರೋಪದಲ್ಲಿ ಬಂಧಿಸಲಾಗಿದೆ.

ಉತ್ತರ ಪ್ರದೇಶದ ಹಾಪುರ ಜಿಲ್ಲೆಯ ಶಾ ಮೊಹಿಯುದ್ದೀನ್ ಗ್ರಾಮದ ಸತೇಂದ್ರ ಸಿವಾಲ್ ಎಂಬಾತನನ್ನು ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಅಧಿಕಾರಿಗಳು ಬಂಧಿಸಿದ್ದಾರೆ ಎಂದು ಭಾನುವಾರ ಹೊರಡಿಸಿದ ಅಧಿಕೃತ ಪ್ರಕಟಣೆ ತಿಳಿಸಿದೆ.

2021ರಿಂದಲೂ ರಾಯಭಾರ ಕಚೇರಿಯ ಭದ್ರತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಸಿವಾಲ್‌ನನ್ನು ಮೀರತ್‌ನಲ್ಲಿರುವ ಎಟಿಎಸ್ ಅಧಿಕಾರಿಗಳು ತನಿಖೆಗಾಗಿ ಸಮನ್ಸ್ ನೀಡಿ ಕರೆಸಿಕೊಂಡಿದ್ದರು.

'ವಿಚಾರಣೆ ವೇಳೆ ಸಮಂಜಸ ಉತ್ತರಗಳನ್ನು ನೀಡದ ಆತ ಬಳಿಕ ತಪ್ಪು ಒಪ್ಪಿಕೊಂಡಿದ್ದಾನೆ' ಎಂದು ಅಧಿಕಾರಿಗಳು ಹೇಳಿದ್ದಾರೆ. ಲಖನೌ ಎಟಿಸಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ ಬಳಿಕ ಆತನನ್ನು ಬಂಧಿಸಲಾಗಿದೆ. ಐಎಸ್‌ಐ ಗೂಢಚಾರಿಕೆ ಜಾಲದ ಮೂಲಕ, ಭಾರತದ ರಕ್ಷಣಾ ಸಚಿವಾಲಯದ ರಹಸ್ಯ ದಾಖಲೆಗಳನ್ನು ಸಿವಾಲ್ ಸೋರಿಕೆ ಮಾಡುತ್ತಿರುವ ಸುಳಿವು ಎಟಿಎಸ್‌ಗೆ ಲಭಿಸಿತ್ತು. ಇದರಿಂದ ಆತನ ಮೇಲೆ ನಿಗಾ ಇರಿಸಿತ್ತು.

ಸಂಪುಟ ಸಭೆಗೆ ಮಾಹಿತಿ ನೀಡಿದ್ದ ಸಿ.ಎಸ್: ಸಿ.ಎಂ ಗರಂ

1.37 ಲಕ್ಷ ಕಡತ ಬಾಕಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಮುಖ್ಯಮಂತ್ರಿಯವರ ನೇರ ಉಸ್ತುವಾರಿಯಲ್ಲಿರುವ ಆರ್ಥಿಕ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸೇರಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 1.37 ಲಕ್ಷಕ್ಕೂ ಹೆಚ್ಚು ಕಡತಗಳು ವಿಲೇವಾರಿಗೆ ಬಾಕಿ ಇವೆ.

ಹೆಚ್ಚಿನ ಸಂಖ್ಯೆಯಲ್ಲಿ ಕಡತಗಳು ಬಾಕಿ ಇರುವುದು ಗೊತ್ತಾಗುತ್ತಿದ್ದಂತೆಯೇ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ತಕ್ಷಣ ವಿಲೇವಾರಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಚಿವಾಲಯದಲ್ಲಿಯೇ ಕಡತಗಳು ವಿಲೇವಾರಿ ಆಗುತ್ತಿಲ್ಲ ಎಂದು ಕೆಲವು ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅದರ ಬೆನ್ನಲ್ಲೆ, 39 ಇಲಾಖೆಗಳಲ್ಲಿ ಸಾವಿರಾರು ಕಡತಗಳು ವಿಲೇವಾರಿಯಾಗದೆ ಉಳಿದಿರುವ ಮಾಹಿತಿ ಬಹಿರಂಗವಾಗಿದೆ.

2023ರ ನವೆಂಬರ್ 30ರ ಅಂತ್ಯಕ್ಕೆ ಒಟ್ಟು 1,55,795 ಕಡತಗಳು ಬಾಕಿ ಇದ್ದವು. ಡಿಸೆಂಬರ್ ಮತ್ತು ಜನವರಿ ಈ ಎರಡು ತಿಂಗಳಲ್ಲಿ ಹೊಸದಾಗಿ 35,036 ಕಡತಗಳನ್ನು ತೆರೆಯಲಾಗಿದೆ. ಈ ಅವಧಿಯಲ್ಲಿ 52,935 ಕಡತಗಳನ್ನು ಮುಕ್ತಾಯಗೊಳಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆಯೊಂದರಲ್ಲೇ 16 ಸಾವಿರಕ್ಕೂ ಹೆಚ್ಚು ಕಡತಗಳು ಬಾಕಿ ಇವೆ. ಕಂದಾಯ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಡಿಪಿಎಆರ್, ಗೃಹ, ವಾಣಿಜ್ಯ ಮತ್ತು ಕೈಗಾರಿಕೆ, ಲೋಕೋಪಯೋಗಿ, ಅರಣ್ಯ, ಆರ್ಥಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಜಲಸಂಪನ್ಮೂಲ, ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆಯಲ್ಲಿ ತಲಾ 5 ಸಾವಿರಕ್ಕೂ ಹೆಚ್ಚು ಕಡತಗಳು ವಿಲೇವಾರಿಗಾಗಿ ಕಾದಿವೆ.

ಸಚಿವಾಲಯದ ಇಲಾಖೆಗಳಲ್ಲಿ ಇ-ಕಚೇರಿ, ಸಚಿವಾಲಯ ವಾಹಿನಿಯಲ್ಲಿ ಬಾಕಿ ಇರುವ ಕಡತಗಳ ತ್ವರಿತ ವಿಲೇವಾರಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು ಫೆಬ್ರುವರಿ 1ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಷಯ ಮಂಡಿಸಿದ್ದರು.

6ನೇ ಪುಟ ನೋಡಿ

ಅತೀ ಹೆಚ್ಚು ಕಡತಗಳು ಬಾಕಿ ಇರುವ ಇಲಾಖೆಗಳು

ಇಲಾಖೆ	ಒಟ್ಟು ಕಡತಗಳು
ನಗರಾಭಿವೃದ್ಧಿ	16,155
ಕಂದಾಯ	13,632
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	9,990
ಡಿಪಿಎಆರ್	8,267
ಗೃಹ	7,976
ವಾಣಿಜ್ಯ ಮತ್ತು ಕೈಗಾರಿಕೆ	7,297
ಲೋಕೋಪಯೋಗಿ	7,135

ಜ. 30ರ ಅಂತ್ಯಕ್ಕೆ 39 ಇಲಾಖೆಗಳಲ್ಲಿ ಬಾಕಿ ಕಡತಗಳು

ಕಡತಗಳು	ಒಟ್ಟು
ಭೌತಿಕ (ಎಫ್‌ಎಂಎಸ್)	43,404
ಇ-ಆಫೀಸ್	94,492
ಒಟ್ಟು	1,37,896

ಸಚಿವೆ ಆತಿಶಿಗೆ ಪೊಲೀಸರ ನೋಟಿಸ್

ನವದೆಹಲಿ (ಪಿಟಿಐ): ಎಎಪಿ ಶಾಸಕರ ಖರೀದಿಗೆ ಬಿಜೆಪಿ ಯತ್ನಿಸುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿಯ ಅಪರಾಧ ವಿಭಾಗದ ಪೊಲೀಸರು ದೆಹಲಿಯ ಹಣಕಾಸು ಸಚಿವೆ ಆತಿಶಿ ಅವರಿಗೆ ಭಾನುವಾರ ನೋಟಿಸ್ ನೀಡಿದ್ದಾರೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೂ ಪೊಲೀಸರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಶನಿವಾರ ನೋಟಿಸ್ ನೀಡಿದ್ದರು. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಧನಸಹಾಯ: ಲೋಕಾಯುಕ್ತಕ್ಕೆ ಕಲಾವಿದರ ದೂರು

ಶಿಫಾರಸಿಗಿಂತ ಅಧಿಕ ಹಣ

• ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಧನಸಹಾಯ' ಯೋಜನೆಯಡಿ 2022–23ನೇ ಸಾಲಿನಲ್ಲಿ ಕೆಲ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಜಿಲ್ಲಾ ಸಮಿತಿಯ ಶಿಫಾರಸಿಗಿಂತ ಅಧಿಕ ಅನುದಾನವನ್ನು ಬಿಡುಗಡೆ ಮಾಡಿದೆ.



ನಾಡಿನ ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ, ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ, ನೋಂದಾಯಿತ ಸಂಘ–ಸಂಸ್ಥೆಗಳು ಏರ್ಪಡಿಸುವ ಕಾರ್ಯಕ್ರಮಗಳಿಗೆ ಸರ್ಕಾರ ನಿಯಮಿತವಾಗಿ ಅನುದಾನ ಒದಗಿಸುತ್ತಿದೆ. ಈ ಅನುದಾನ ಪಡೆಯಲು ನೋಂದಾಯಿತ ಸಂಘ–ಸಂಸ್ಥೆಗಳು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ, ನಡೆಸಿರುವ ಕಾರ್ಯಕ್ರಮಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ವಿವರ ಸೇರಿದಂತೆ ಅಗತ್ಯ ದಾಖಲಾತಿಗಳ ಸ್ಕ್ಯಾನ್ ಪ್ರತಿಗಳನ್ನು ಒದಗಿಸಬೇಕು. ಇಲಾಖೆಯ ವಲಯ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಸಮಿತಿಯು ಸಂಘ–ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಅಗತ್ಯ ಅನುದಾನಕ್ಕೆ ಶಿಫಾರಸು ಮಾಡಲಿದೆ. ಆದರೆ, ಕಳೆದ ಸಾಲಿನಲ್ಲಿ ಜಿಲ್ಲಾ ಸಮಿತಿ ಶಿಫಾರಸು ಮಾಡಿದ ಅನುದಾನಕ್ಕಿಂತ ಹೆಚ್ಚಿನ ಅನುದಾನ ಕೆಲ ಸಂಘ–ಸಂಸ್ಥೆಗಳಿಗೆ ಇಲಾಖೆ ಮಂಜೂರು ಮಾಡಿದೆ.

6ನೇ ಪುಟ ನೋಡಿ

ಭೌತಿಕವಾಗಿ ದಾಖಲೆಗಳ ಸಲ್ಲಿಕೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2023–24ನೇ ಸಾಲಿನ ಧನಸಹಾಯ ಪ್ರಕ್ರಿಯೆ ನಡೆಸುತ್ತಿದೆ. ಕಳೆದ ಡಿ.13ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸೇವಾ ಸಿಂಧು ಪೋರ್ಟಲ್‌ನಲ್ಲಿ ಆಮಂತ್ರಣ ಪತ್ರಿಕೆ, ವರದಿ ಪ್ರಕಟವಾದ ಪತ್ರಿಕಾ ತುಣುಕು ಹಾಗೂ ಫೋಟೊಗಳ ಸಲ್ಲಿಕೆಗೆ ಅವಕಾಶ ನೀಡಿರಲಿಲ್ಲ. ಬಳಿಕ ಅವಕಾಶ ನೀಡಿದ್ದರಿಂದ ಕಲಾವಿದರು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅಗತ್ಯ ದಾಖಲಾತಿ ಸಲ್ಲಿಸಿದ್ದರು. ಇಷ್ಟಾಗಿಯೂ ಇಲಾಖೆಯ ಸಹಾಯಕ ನಿರ್ದೇಶಕರು ಕಾರ್ಯಕ್ರಮ ನಡೆಸಿರುವ ಬಗ್ಗೆ ಭೌತಿಕವಾಗಿ ಆಮಂತ್ರಣ ಪತ್ರಿಕೆ, ಪತ್ರಿಕಾ ತುಣುಕು ಹಾಗೂ ಫೋಟೊಗಳನ್ನು ಸಲ್ಲಿಸಲು ಸೂಚಿಸಿರುವುದು ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರ ಅಸಮಾಧಾನಕ್ಕೆ ಕಾರಣವಾಗಿದೆ.

ಧನಸಹಾಯಕ್ಕಾಗಿ ಸರ್ಕಾರವು ಪ್ರತಿವರ್ಷ ₹15 ಕೋಟಿಯಿಂದ ₹20 ಕೋಟಿ ಖರ್ಚು ಮಾಡುತ್ತಿದೆ. ರಾಜ್ಯದಲ್ಲಿ 7 ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿದ್ದರೂ, ಅರ್ಜಿ ಅಲ್ಲಿಸುವ 4 ಸಾವಿರಕ್ಕೂ ಅಧಿಕ ಸಂಘ–ಸಂಸ್ಥೆಗಳಲ್ಲಿ 900ರಿಂದ ಸಾವಿರ ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ.

‘ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆಗೆ ಆದ್ಯತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಯಾನ್ಸರ್ ಕಾಯಿಲೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ ರೋಗವನ್ನು ಸುಲಭವಾಗಿ ವಾಸಿ ಮಾಡಬಹುದಾಗಿದೆ. ಆದ್ದರಿಂದ ಕ್ಯಾನ್ಸರ್ ತಪಾಸಣೆಗೆ ಆದ್ಯತೆ ನೀಡಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಆರೋಗ್ಯ ಇಲಾಖೆಯು ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾ, ಸಂಕಲ್ಪ ಚೇಸ್ ಕ್ಯಾನ್ಸರ್ ಫೌಂಡೇಶನ್ ಹಾಗೂ ನವೋದಯನ್ಸ್ ಇನ್ ಬೆಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ‘ಕ್ಯಾನ್‌ವಾಕ್’ಗೆ ಚಾಲನೆ ನೀಡಿ, ಮಾತನಾಡಿದರು. ಈ ಜಾಗೃತಿ ನಡಿಗೆಯಲ್ಲಿ 12 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು.

‘ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ (ಶೇ 28 ರಷ್ಟು) ಹಾಗೂ ಪುರುಷರಲ್ಲಿ ಶ್ವಾಸಕೋಶ ಕ್ಯಾನ್ಸರ್ (ಶೇ 10 ರಷ್ಟು) ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ’ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಜಾಗೃತಿ ಕೊರತೆ: ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಡಾ.ರಾಜಶೇಖರ್ ಸಿ. ಜಾಕ, ‘ಆರೋಗ್ಯವನ್ನು ಕಾಪಾಡಿಕೊಳ್ಳಲು ಪ್ರತಿನಿತ್ಯ ಒಂದು ಗಂಟೆ ವಾಕಿಂಗ್ ಮಾಡಬೇಕು. ಕ್ಯಾನ್ಸರ್ ಪೀಡಿತರಲ್ಲಿ ಹಲವರು ಆತ್ಮವಿಶ್ವಾಸ ಕಳೆದುಕೊಂಡು, ತಮ್ಮ ಜೀವನ ಅಂತ್ಯವಾಯಿತು ಅಂದುಕೊಳ್ಳುತ್ತಾರೆ. ಆದ್ದರಿಂದ ಕ್ಯಾನ್ಸರ್ ಕಾಯಿಲೆ ಬಗ್ಗೆ ಜನರಲ್ಲಿನ ಭಯವನ್ನು ಹೋಗಲಾಡಿಸಬೇಕಿದೆ. ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಕೂಡ ಸಾಮಾನ್ಯ ಕಾಯಿಲೆಗಳಲ್ಲಿ ಒಂದಾಗಿದೆ’ ಎಂದು ಹೇಳಿದರು.

ಕಂಠೀರವ ಕ್ರೀಡಾಂಗಣದಲ್ಲಿ ಪ್ರಾರಂಭವಾದ ‘ಕ್ಯಾನ್‌ವಾಕ್’ ಜಾಗೃತಿ ನಡಿಗೆ, ಹಡ್ಸನ್ ವೃತ್ತ, ವಿಧಾನಸೌಧ, ಕೇಂದ್ರ ಅಂಚೆ ಕಚೇರಿ, ಇನ್ಫೆಂಟ್ರಿ ರಸ್ತೆ ಮೂಲಕ ಕಂಠೀರವ ಕ್ರೀಡಾಂಗಣದಲ್ಲಿ ಮುಕ್ತಾಯವಾಯಿತು. 5 ಕಿ.ಮೀ. ನಡಿಗೆಯಲ್ಲಿ ಚಲನಚಿತ್ರ ನಟರಾದ ಪ್ರೇಮ್, ಅಭಿಜಿತ್, ನಟಿ ಕಾರುಣ್ಯ ರಾಮ್, ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ನವೀನ್ ಭಟ್ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

ಪುರಂದರದಾಸರ, ತ್ಯಾಗರಾಜರ ಆರಾಧನಾ ಮಹೋತ್ಸವ: ಸಾನ್ನಿಧ್ಯ: ಅದ್ವಯನಂದೇಂದ್ರ ಸರಸ್ವತಿ ಸ್ವಾಮೀಜಿ, ಅಭಿನವ ರಾಮಾನುಜಾಚಾರ್ಯ ಸ್ವಾಮೀಜಿ, ವಿದ್ಯಾವಲ್ಲಭ ಮಾಧವತೀರ್ಥ ಶ್ರೀಪಾದ ಸ್ವಾಮೀಜಿ, ಅಧ್ಯಕ್ಷತೆ: ಅನೂಪ್ ಅಯ್ಯಂಗಾರ್, ಉಪಸ್ಥಿತಿ: ಪಾವಗಡ ಪ್ರಕಾಶ್ ರಾವ್, ಆಯೋಜನೆ: ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಆವರಣ, ಮಲ್ಲೇಶ್ವರ, ಸಂಜೆ 4ರಿಂದ

ಕನ್ನಡ ಪರಿಚಾರಕರಿಗೆ ಅಭಿನಂದನೆ: ಅಭಿನಂದಿಸುವವರು: ಮನು ಬಳಿಗಾರ್, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಉಪಸ್ಥಿತಿ: ಕೆ.ಎಸ್. ಪ್ರಭುಸ್ವಾಮಿ, ಕೆ.ಎಸ್. ಎಂ. ಹುಸೇನ್, ಎಚ್.ಕೆ. ಸುರೇಶ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ಹೋಟೆಲ್ ಉಡುಪಿ ಅತಿಥ್ಯ, ಚಾಮರಾಜಪೇಟೆ, ಸಂಜೆ 5.30

‘ಪುಣ್ಯಶ್ರೀ ನಾಟಕೋತ್ಸವ, ಪುಣ್ಯಶ್ರೀ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ರಂಗಸ್ವಾಮಿ, ಅತಿಥಿಗಳು: ಬನಶಂಕರಿ ಅಂಗಡಿ, ವಿಠ್ಠಲ ಕೊಪ್ಪದ, ಪ್ರಶಸ್ತಿ ಪುರಸ್ಕೃತರು: ರಾಜಶೇಖರ ಎ., ಎ.ಬಿ. ರಾಮಚಂದ್ರಪ್ಪ, ‘ಸ್ವರ್ಣಮೂರ್ತಿ’ ನಾಟಕ ಪ್ರದರ್ಶನ: ರಚನೆ: ಆ.ನ. ಕೃಷ್ಣರಾಯರು, ನಿರ್ದೇಶನ: ಹಾಪ್‌ಕಾಮ್ಸ್ ವೆಂಕಟೇಶ, ಆಯೋಜನೆ: ಏಕಲವ್ಯ ಫೌಂಡೇಶನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6ರಿಂದ

ಪುರಂದರದಾಸರ ಪುಣ್ಯದಿನ ಮಹೋತ್ಸವ: ಹರಿದಾಸ ಮಂಜರಿ: ಶ್ರೀವತ್ಸಾ ಕಶ್ಯಪ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಪ್ರವಚನ ವಾಹಿನಿ: ‘ಪ್ರಹ್ಲಾದ ರಾಜರ ನರಸಿಂಹ ಸ್ತೋತ್ರ’ ಕುರಿತು ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಪಾದಚಾರಿ ಮಾರ್ಗ ಸರಿಪಡಿಸಿ

ಮೈಸೂರು ರಸ್ತೆಯ ಗೋಪಾಲನ್ ಮಾಲ್ ಎದುರು ಇರುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಪೇವರ್ಸ್ ಕಿತ್ತುಹೋಗಿದ್ದು, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗಿದೆ. ಈ ಮಾರ್ಗದಲ್ಲಿ ಪ್ರತಿನಿತ್ಯ ನೂರಾರು ಜನ ಓಡಾಡುತ್ತಾರೆ. ಆದರೆ, ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ಜನ ಮೈಸೂರು ಮುಖ್ಯರಸ್ತೆಯಲ್ಲಿ ಹಾದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮಾರ್ಗ ದುರಸ್ತಿಗೊಳಿಸುವಂತೆ ಬಿಬಿಎಂಪಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಪಾದಚಾರಿ ಮಾರ್ಗ ದುರಸ್ತಿಗೊಳಿಸಬೇಕು.

ಕೆ. ಸುಧಾಕರ್, ಮೈಸೂರು ರಸ್ತೆ



ಗೋಪಾಲನ್ ಮಾಲ್ ಎದುರಿನ ಪಾದಚಾರಿ ಮಾರ್ಗ ಹಾಳಾಗಿರುವುದು.

ಮ್ಯಾನ್‌ಹೋಲ್ ದುರಸ್ತಿಗೊಳಿಸಿ

ಹುಳಿಮಾವಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಮ್ಯಾನ್‌ಹೋಲ್ ಹಾಳಾಗಿದ್ದು, ಮುಖ್ಯರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಪ್ರತಿನಿತ್ಯ ರಸ್ತೆಯ ಮೇಲೆ ಚರಂಡಿ ನೀರು ಹರಿಯುವುದರಿಂದ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದಾಗಿ ವಾಹನ ಸವಾರರ ಸಂಚಾರಕ್ಕೆ ಅನನುಕೂಲವಾಗಿದೆ. ಜೊತೆಗೆ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ, ಈ ಮ್ಯಾನ್‌ಹೋಲ್ ಅನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ನೀಡಬೇಕು.

ಲಕ್ಷ್ಮೀನಾರಾಯಣ ಅಯ್ಯಂಗಾರ್, ಹುಳಿಮಾವು



ಮ್ಯಾನ್‌ಹೋಲ್ ಹಾಳಾಗಿ ರಸ್ತೆಯ ಮೇಲೆ ಹರಿಯುತ್ತಿರುವ ಚರಂಡಿ ನೀರು

ಬಾಗಿದ ಮರ ತೆರವುಗೊಳಿಸಿ

ಶಂಕರಪಾಳ್ಯದ ಮುನೇಶ್ವರ ಸ್ವಾಮಿ ದೇವಸ್ಥಾನದ ಬಳಿ ಇರುವ ಆಲದ ಮರವೊಂದು ರಸ್ತೆಯ ಮೇಲೆ ಬಾಗಿದೆ. ಈ ಮರದ ಬೇರು ಮೇಲೆ ಬಂದಿದ್ದು, ರಸ್ತೆಯ ಮೇಲೆ ಬೀಳುವ ಆತಂಕವಿದೆ. ಅನಾಹುತವಾಗುವ ಮುನ್ನ ಇದನ್ನು ತೆರವುಗೊಳಿಸಬೇಕು. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಲಾಗಿದೆ.

ಮಂಜುನಾಥ್, ಶಂಕರಪಾಳ್ಯ



ಶಂಕರಪಾಳ್ಯ ಮುನೇಶ್ವರ ದೇವಸ್ಥಾನದ ಬಳಿ ಇರುವ ಮರ ರಸ್ತೆಗೆ ಬಾಗಿರುವುದು.

ಕುಡಿಯುವ ನೀರು ಪೂರೈಕೆ ಮಾಡಿ

ಜೆ.ಪಿ. ನಗರ 7ನೇ ಹಂತದಲ್ಲಿರುವ ನಟರಾಜ ಬಡಾವಣೆಯ ನಿವಾಸಿಗಳಿಗೆ ಕಳೆದ ಒಂದು ತಿಂಗಳಿಂದ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಈ ಬಗ್ಗೆ ಜನವರಿ 11ರಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ನಡೆಸುವ ನೀರಿನ ಅದಾಲತ್‌ನಲ್ಲಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ದೂರಿನ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಸರಿಯಾಗಿ ಸ್ಪಂದಿಸುತ್ತಿಲ್ಲ. ವಾರದಲ್ಲಿ ಎರಡು ಬಾರಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಹಣ ನೀಡಿ ಖರೀದಿಸುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳು ಕೂಡಲೇ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು.

ಶೇಷಾದ್ರಿ ಬಿ.ಸಿ., ನಟರಾಜ ಬಡಾವಣೆ

ಕಲೆ ದೇಶಹಿತದ ಮಾಧ್ಯಮವಾಗಲಿ: ಮೋಹನ್ ಭಾಗವತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಕಲೆಗಳಿಗೆ ಸತ್ಯಂ ಶಿವಂ ಸುಂದರಂ ಆದರ್ಶ. ಇದರ ಆಧಾರದಲ್ಲಿ ಜಗತ್ತಿನಲ್ಲಿ ಭಾರತೀಯ ಕಲಾ ವಿಮರ್ಶೆ ನಡೆಯಬೇಕು. ದೇಶ ಹಿತಕ್ಕಾಗಿ ಮತ್ತು ಸಮಾಜವನ್ನು ಒಗ್ಗೂಡಿಸುವುದಕ್ಕಾಗಿ ಕಲೆಯು ಮಾಧ್ಯಮವಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದರು.

ಸಂಸ್ಕಾರ ಭಾರತಿ ವತಿಯಿಂದ ನಗರದ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ನಡೆದ ಅಖಿಲ ಭಾರತೀಯ ಕಲಾಸಾಧಕ ಸಂಗಮದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.

‘ಕಲೆಯು ಸಮಾಜಕ್ಕೆ ಸಂಸ್ಕಾರ, ಸಮರಸವನ್ನು ನೀಡುತ್ತದೆ. ನಮ್ಮ ಚರಿತ್ರೆಯ ಉದಾಹರಣೆ ನೀಡುವುದರ ಮೂಲಕ ಜಗತ್ತಿನ ಜನರಿಗೆ ಜೀವನ ಪಾಠವನ್ನು ಹೇಳಬೇಕು’ ಎಂದು ಆಶಿಸಿದರು.



ಅಖಿಲ ಭಾರತೀಯ ಕಲಾಸಾಧಕ ಸಂಗಮದ ಸಮಾರೋಪ ಸಮಾರಂಭದಲ್ಲಿ ಆಯೋಧ್ಯೆಯ ಬಾಲರಾಮನ ವಿಗ್ರಹ ಕೆತ್ತಿದ್ದ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಗೌರವಿಸಿದರು. ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬಹಳಷ್ಟು ಕಲಾವಿದರು ಪ್ರಾಮಾಣಿಕವಾಗಿ ಸಾಧನೆ ಮಾಡುತ್ತಾರೆ. ಅದು ವೈಯಕ್ತಿಕ ಸಾಧನೆಗೆ ಸೀಮಿತವಾಗಿರುತ್ತದೆ. ಸಾಮಾಜಿಕ ಜೀವನದಲ್ಲಿ ಕಲೆಯ ಪಾತ್ರವೇನು ಎಂಬ ಪ್ರಶ್ನೆ ಕಲಾವಿದರಲ್ಲಿ ಮೂಡಬೇಕು ಎಂದು ಹೇಳಿದರು.

ಆರ್‌ಎಸ್‌ಎಸ್ ಸ್ಥಾಪನೆಯಾಗುವುದಕ್ಕಿಂತ 5 ವರ್ಷ ಮೊದಲೇ ಕೇಶವ ಬಲಿರಾಂ ಹೆಡ್ಗೆವಾರ್ ಈ ದೇಶದ ಬಗ್ಗೆ ಸ್ಪಷ್ಟ ಚಿತ್ರಣವನ್ನು ಕಾಂಗ್ರೆಸ್ ಮುಂದೆ ಇಟ್ಟಿದ್ದರು. ವಿದರ್ಭ ಕಾಂಗ್ರೆಸ್ ಮುಖಂಡರೂ ಆಗಿದ್ದ ಅವರು ಮಹಾತ್ಮ ಗಾಂಧೀಜಿಯವರ ಮುಂದೆ ಎರಡು ಬೇಡಿಕೆಗಳನ್ನು ಇಟ್ಟಿದ್ದರು. ದೇಶದಲ್ಲಿ ಸಂಪೂರ್ಣ ಗೋಹತ್ಯೆ ನಿಷೇಧವಾಗಬೇಕು. ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರಕಿಸಿಕೊಡಬೇಕು ಎಂಬುದು ಬೇಡಿಕೆಗಳಾಗಿದ್ದವು ಎಂದು ತಿಳಿಸಿದರು.

‘ನಮಗೆ ಶಕ್ತಿ ಇದೆ ಎಂದು ಎಲ್ಲದಕ್ಕೂ ನಾವೇ ಮೈದಾನಕ್ಕೆ ಇಳಿಯುವಂತಾಗಬಾರದು. ಕ್ಯಾಪ್ಟನ್ ಯಾರನ್ನು ಸೂಚಿಸುತ್ತಾರೋ ಅವರೇ ಇಳಿಯುವ ಮನಃಸ್ಥಿತಿ ಬೆಳೆಸಿಕೊಳ್ಳಬೇಕು’ ಎಂದು ಕಾರ್ಯಕರ್ತರಿಗೆ ಸಲಹೆ ನೀಡಿದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀಶ್ರೀ ರವಿಶಂಕರ ಗುರೂಜಿ ಮಾತನಾಡಿ, ‘ಪುರಾತನವೂ ನಿತ್ಯ ನೂತನವೂ ಆಗಿರುವ ಸನಾತನ ಧರ್ಮ ನಮ್ಮದು. ಜೀವನದಲ್ಲಿ ಶಕ್ತಿ, ಭಕ್ತಿ, ಯುಕ್ತಿ ಮತ್ತು ಮುಕ್ತಿ ಇದ್ದಾಗ ಸಾಧನೆ ಸಾಧ್ಯ. ದೇಶ ಭಕ್ತಿ ಮತ್ತು ದೈವಭಕ್ತಿ ಬೇರೆಯಲ್ಲ. ಒಂದೇ ನಾಣ್ಯದ ಎರಡು ಮುಖಗಳು’ ಎಂದು ಪ್ರತಿಪಾದಿಸಿದರು.

ಸಂಸ್ಕಾರ ಭಾರತಿ ಅಖಿಲ ಭಾರತೀಯ ಅಧ್ಯಕ್ಷ ವಾಸುದೇವ ಕಾಮತ್, ಉಪಾಧ್ಯಕ್ಷರಾದ ಮೈಸೂರು ಮಂಜುನಾಥ್, ಹೇಮಲತಾ, ನಿತೀಶ್, ಅಶ್ವಿನ್ ಎಂ. ದಳವಿ ಉಪಸ್ಥಿತರಿದ್ದರು.

ವಾಹನ ನೀಡಿದವರಿಗೆ 'ಬಿಸಿ' ಮುಟ್ಟಿಸುತ್ತಿರುವ ಸಂಚಾರ ಪೊಲೀಸರು

ಮಕ್ಕಳ 'ಕೈ'ಗೆ ಬೈಕ್ ಕೊಟ್ಟವರಿಗೆ ಕೇಸ್

• ಆದಿತ್ಯ ಕೆ.ಎ.

ಬೆಂಗಳೂರು: ಪ್ರತಿಷ್ಠಿತ ಶಾಲೆ ಹಾಗೂ ಪಿಯು ಕಾಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಕೈಗೆ ಸುಲಭವಾಗಿ ಬೈಕ್ ಹಾಗೂ ವಾಹನಗಳು ಸಿಗುತ್ತಿದ್ದು, ಇದರಿಂದ ಶಾಲೆ–ಕಾಲೇಜುಗಳ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಹಾಗೂ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ.

ಶಾಲಾ ಕಾಲೇಜು ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿರುವ ಸಂಚಾರ ವಿಭಾಗದ ಪೊಲೀಸರು, ವಾಹನ ನೀಡಿದವರ ವಿರುದ್ಧ ಭಾರತೀಯ ಮೋಟಾರು ವಾಹನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು 'ಬಿಸಿ' ಮುಟ್ಟಿಸುವ ಕೆಲಸ ಮಾಡುತ್ತಿದ್ದಾರೆ.

ಪೋಷಕರೇ ಮಕ್ಕಳಿಗೆ ವಾಹನಗಳನ್ನು ನೀಡುತ್ತಿದ್ದು, ಮಕ್ಕಳ ಜೀವದ ಜೊತೆಗೆ ಚೆಲ್ಲಾಟ ಆಡುತ್ತಿದ್ದಾರೆ. ಇದು ನಗರದ ಸಂಚಾರ ವಿಭಾಗದ ಪೊಲೀಸರಿಗೂ ತಲೆನೋವು ತರಿಸಿದೆ.

> **ಆರಂಭಿಕವಾಗಿ ಪೋಷಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗುತ್ತಿದೆ. ತಪ್ಪು ಮರುಕಳಿಸಿದರೆ ಡಿಎಲ್, ಆರ್‌ಸಿ ರದ್ದತಿಗೆ ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗುವುದು.**
> **ಕುಲದೀಪ್ ಕುಮಾರ್ ಆರ್. ಜೈನ್,**
> ಡಿಸಿಪಿ, ಪೂರ್ವ ವಿಭಾಗ (ಸಂಚಾರ)

ಅಲ್ಲದೇ ಮಕ್ಕಳು ಬೈಕ್ ಓಡಿಸುವ ವೇಗವು ಭಯ ಹುಟ್ಟಿಸುತ್ತಿದೆ ಎಂದು ಪೊಲೀಸರು ಆತಂಕ ವ್ಯಕ್ತಪಡಿಸುತ್ತಾರೆ. ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ವಾಹನ ಚಲಾಯಿಸಿ ಸಂಚಾರ ವಿಭಾಗದ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ.

'ಪೂರ್ವ ವಿಭಾಗದ ಕಬ್ಬನ್ ಪಾರ್ಕ್, ಹಲಸೂರು ಗೇಟ್, ಹೈಗ್ರೌಂಡ್ಸ್, ಅಶೋಕನಗರ, ವಿಲ್ಸನ್ ಗಾರ್ಡನ್, ಸದಾಶಿವನಗರ ಸುತ್ತಮುತ್ತಲಿನ ಸಂಚಾರ ಠಾಣೆ ವ್ಯಾಪ್ತಿಯ ಶಾಲೆ–ಕಾಲೇಜುಗಳಿಗೆ ವಿದ್ಯಾರ್ಥಿಗಳು ಬೈಕ್‌ನಲ್ಲಿ ಬರುತ್ತಿರುವುದನ್ನು ಗಮನಿಸಲಾಗಿದೆ. ಕೆಲವು ಶಾಲೆಗಳಲ್ಲಿ ಬೈಕ್‌ನಲ್ಲಿ ಬಂದರೂ ಶಾಲಾ ಆಡಳಿತ ಮಂಡಳಿ ಯಾವುದೇ ಶಿಸ್ತು ಕ್ರಮ ಕೈಗೊಳ್ಳುತ್ತಿಲ್ಲ. ಬುದ್ಧಿಮಾತನ್ನೂ ಹೇಳುತ್ತಿಲ್ಲ' ಎಂದು ಪೊಲೀಸರು ಹೇಳುತ್ತಾರೆ.

'ಕೆಲಸಕ್ಕೆ ತೆರಳುವ ದಂಪತಿಗಳು ಮಕ್ಕಳಿಗೆ ಬೈಕ್ ಹಾಗೂ ಕಾರು ನೀಡುತ್ತಿದ್ದಾರೆ. ಮಕ್ಕಳೇ ವಾಹನ ಚಲಾಯಿಸಿಕೊಂಡು ಶಾಲೆಗೆ ತೆರಳುತ್ತಿದ್ದಾರೆ. ಮಕ್ಕಳು ಹೆಲ್ಮೆಟ್ ಸಹ ಧರಿಸದೆ ಬೈಕ್‌ನಲ್ಲಿ ಬರುತ್ತಿದ್ದಾರೆ. ಕೆಲವು ಶಾಲೆಗಳಲ್ಲಿ ಬೈಕ್ ತರುವುದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ನೀಡುತ್ತಿಲ್ಲ. ಅಂತಹ ಶಾಲೆಗಳಿಗೆ ರಸ್ತೆ ಬದಿಯ ಪಾರ್ಕಿಂಗ್ ಸ್ಥಳಗಳಲ್ಲಿ ಬೈಕ್ ನಿಲುಗಡೆ ಮಾಡಿ, ವಿದ್ಯಾರ್ಥಿಗಳು ಶಾಲೆಗೆ ತೆರಳುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಪೊಲೀಸರು ಹೇಳುತ್ತಾರೆ.

'ಈ ಸಂಬಂಧ ನಮಗೆ ಸಾಕಷ್ಟು ದೂರುಗಳು ಬಂದಿದ್ದು, ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ನಿಯಮ ಉಲ್ಲಂಘಿಸುತ್ತಿರುವ ಪ್ರಕರಣಗಳು ಪಿಯು ಕಾಲೇಜುಗಳ ಸುತ್ತಮುತ್ತಲೇ ಹೆಚ್ಚು ಪತ್ತೆಯಾಗುತ್ತಿವೆ. ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡುವಂತೆ ಕಾಲೇಜು ಆಡಳಿತ ಮಂಡಳಿಗೂ ಮನವಿ ಮಾಡಲಾಗಿದೆ' ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದರು.

'ಜನವರಿ 21 ಶಾಲೆಗಳ ಬಳಿ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ಅಂದು ಅತಿ ವೇಗ, ಸಂಚಾರ ನಿಯಮ ಉಲ್ಲಂಘಿಸಿದ್ದವರ ವಿರುದ್ಧ 510ಕ್ಕಿಂತಲೂ ಹೆಚ್ಚಿನ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು. ಫೆ.2ರಂದು ನಡೆದ ಕಾರ್ಯಾಚರಣೆಯಲ್ಲಿ 1,896 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಇವುಗಳಲ್ಲಿ ಬಾಲಕರೂ ಬೈಕ್ ಹಾಗೂ ವಾಹನ ಚಲಾಯಿಸುತ್ತಿರುವ ಪ್ರಕರಣಗಳು ಕೂಡ ಇವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ಕಾರ್ಯಾಚರಣೆ

ಉಲ್ಲಂಘನೆ	ದಾಖಲಾದ ಪ್ರಕರಣಗಳ ಸಂಖ್ಯೆ	ಸಂಗ್ರಹಿಸಲಾದ ದಂಡದ ಮೊತ್ತ
ಹೆಲ್ಮೆಟ್ ರಹಿತ ಸವಾರಿ	1,279	₹6,39,500
ಬೈಕ್‌ನಲ್ಲಿ ಮೂವರ ಸವಾರಿ	85	₹42,500
ಪ್ರವೇಶವಿಲ್ಲದ ರಸ್ತೆಗಳಲ್ಲಿ ಸವಾರಿ	455	₹2,27,500
ಫುಟ್‌ಪಾತ್‌ನಲ್ಲಿ ಸವಾರಿ	77	₹38,500
ಒಟ್ಟು	1,896	₹9,48,000

ಸಾಕುನಾಯಿ ವಿಚಾರಕ್ಕೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನ್ ಬಿಮಾ ನಗರದ ಮನೆಯೊಂದರಲ್ಲಿ ಸಾಕುನಾಯಿ ವಿಚಾರಕ್ಕೆ ಮನೆ ಮಾಲೀಕರು ಹಾಗೂ ಭೋಗ್ಯಕ್ಕೆ ವಾಸವಿದ್ದವರ ನಡುವೆ ಗಲಾಟೆ ನಡೆದು, ಪರಸ್ಪರ ಹಲ್ಲೆ ಮಾಡಿಕೊಂಡಿದ್ದಾರೆ.

ಪ್ರಕರಣವು ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ರಾಜೀ ಸಂಧಾನದ ಮೂಲಕ ಸುಖಾಂತ್ಯವಾಗಿದೆ.

ಪಂಜಾಬ್‌ನ ಪೂಜಾ ಅವರು ಕುಟುಂಬದೊಂದಿಗೆ ಜೀವನ್ ಬಿಮಾ ನಗರದ ಪ್ರಮೀಳಾ ಅವರ ಮನೆಯನ್ನು ಭೋಗ್ಯಕ್ಕೆ ಪಡೆದು ವಾಸವಾಗಿದ್ದರು. ಭೋಗ್ಯ ಮಾಡಿಕೊಳ್ಳುವ ವೇಳೆ 'ಮನೆಯಲ್ಲಿ ನಾಯಿ ಸಾಕುವಂತೆ ಇಲ್ಲ' ಎಂದು ಮಾಲೀಕರು ಹೇಳಿದ್ದರೂ ಪೂಜಾ ನಾಯಿ ಸಾಕಿದ್ದರು. ಇದೇ ವಿಚಾರವಾಗಿ ಫೆ.2ರ ತಡರಾತ್ರಿ ಎರಡು ಕುಟುಂಬಗಳು ಹೊಡೆದಾಡಿಕೊಂಡಿದ್ದವು ಎಂದು ಪೊಲೀಸರು ಹೇಳಿದರು.

ಪ್ರಮೀಳಾ ಹಾಗೂ ಅವರ ಸಹಚರರ ವಿರುದ್ಧ ಪೊಲೀಸ್ ಠಾಣೆಗೆ ಪೂಜಾ ದೂರು ನೀಡಿದ್ದರು. ಇದರ ಬೆನ್ನಲ್ಲೇ ಪ್ರಮೀಳಾ ಅವರು ಬಾಡಿಗೆದಾರರಾದ ಪೂಜಾ ವಿರುದ್ಧ ದೂರು ನೀಡಲು ಬಂದಿದ್ದರು. ಆಗ ಪೊಲೀಸರು ಎರಡೂ ಕಡೆಯವರನ್ನು ಕರೆಸಿ ವಿಚಾರಣೆ ನಡೆಸಿದರು. ನಂತರ, ಇಬ್ಬರು ದೂರನ್ನು ವಾಪಸ್ ಪಡೆದರು. 'ಎರಡು ಕಡೆಯವರಿಂದಲೂ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಕೆ.ಎಸ್. ಪ್ರತಿಮಾ ಕೊಲೆ ಪ್ರಕರಣ

ಆರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ ಅವರ ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಪೊಲೀಸರು, ಆರೋಪಿ ಕಿರಣ್ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ.

ದೊಡ್ಡಕಲ್ಲಸಂದ್ರದ ಕುವೆಂಪು ನಗರದ ಪ್ರತಿಮಾ ಅವರ ನಿವಾಸಕ್ಕೆ ನ.4ರಂದು ರಾತ್ರಿ ನುಗ್ಗಿದ್ದ ಆರೋಪಿ, ಕೊಲೆ ಮಾಡಿ ಪರಾರಿಯಾಗಿದ್ದ. ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇನ್‌ಸ್ಪೆಕ್ಟರ್ ಎನ್.ಜಗದೀಶ್ ಅವರು ತನಿಖಾಧಿಕಾರಿಯಾಗಿ ನೇಮಕಗೊಂಡಿದ್ದರು. ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ನಗರದ 2ನೇ ಎಸಿಎಂಎಂ ನ್ಯಾಯಾಲಯಕ್ಕೆ 600 ಪುಟಗಳ ಆರೋಪಪಟ್ಟಿ ಸಲ್ಲಿಸಲಾಗಿದೆ.

ಕಿರಣ್ ನೀಡಿದ್ದ ಸ್ವಇಚ್ಛಾ ಹೇಳಿಕೆ, 70 ಮಂದಿ ಸಾಕ್ಷಿದಾರರ ಹೇಳಿಕೆ, ಸಿ.ಸಿ.ಟಿ.ವಿ. ಕ್ಯಾಮೆರಾದ ದೃಶ್ಯಾವಳಿ, ಸಾಂದರ್ಭಿಕ ಸಾಕ್ಷ್ಯ, ಡಿಜಿಟಲ್ ಸಾಕ್ಷ್ಯಾಧಾರ ಸಹಿತ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೆಳ್ತಂಗಡಿ: 42 ಸಿಮ್ ಕಾರ್ಡ್ ಖರೀದಿಸಿದ್ದ ನಾಲ್ವರ ಬಂಧನ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮದ ತೋಟತ್ತಾಡಿಯಲ್ಲಿ ಬೇರೆಯವರ ಹೆಸರುಗಳಲ್ಲಿ 42 ಮೊಬೈಲ್ ಸಿಮ್ ಕಾರ್ಡ್ ಖರೀದಿಸಿ ಬೆಂಗಳೂರಿಗೆ ತೆರಳಲು ಸಿದ್ಧವಾಗಿದ್ದ ನಾಲ್ವರು ಆರೋಪಿಗಳನ್ನು ಧರ್ಮಸ್ಥಳ ಪೊಲೀಸರು ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ವಶಕ್ಕೆ ಪಡೆಯಲಾದ ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ.

'ನೆರಿಯ ಗ್ರಾಮದ ಗುಂಪಕಲ್ಲು ನಿವಾಸಿ ರಮೀಝ್, ಬಂಟ್ವಾಳ ತಾಲ್ಲೂಕು ಬಡಗ ಕಜೆಕಾರ್ ಗ್ರಾಮದ ಪಾಂಡವರಕಲ್ಲು ನಿವಾಸಿ ಅಕ್ಬರ್ ಅಲಿ, ಬೆಳ್ತಂಗಡಿಯ ಸಂಜಯನಗರ ನಿವಾಸಿ ಮೊಹಮ್ಮದ್ ಮುಸ್ತಾಫಾ, ಪಡಂಗಡಿ ಗ್ರಾಮದ ನಿವಾಸಿ ಮಹಮ್ಮದ್ ಸಾದಿಕ್ ಬಂಧಿತರು. ಕಲ್ಮಂಜ ಗ್ರಾಮದ ನಿಡಿಗಲ್‌ನ ಬಾಲಕನನ್ನೂ ವಶಕ್ಕೆ ಪಡೆಯಲಾಗಿದೆ. ನಾಲ್ವರು ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಆರೋಪಿಗಳು ಈ ಹಿಂದೆಯೂ ಇದೇ ರೀತಿ ಭಾರಿ ಸಂಖ್ಯೆಯಲ್ಲಿ ಸಿಮ್ ಕಾರ್ಡ್ ಖರೀದಿಸಿದ್ದರು ಎಂದು ಗೊತ್ತಾಗಿದೆ.

ಕ್ರೀಡಾ ಕೋಟಾ: ಮೀಸಲಾತಿ ಹೆಚ್ಚಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಇಲಾಖೆಯ ಉದ್ಯೋಗಾವಕಾಶದಲ್ಲಿ ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿಯಿದ್ದು, ಆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಆಲೋಚನೆಯಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ 12ನೇ ಅಖಿಲ ಭಾರತ ಪೊಲೀಸ್ ಆರ್ಚರಿ ಚಾಂಪಿಯನ್‌ಷಿಪ್‌ನ ಸಮಾರೋಪ ಸಮಾರಂಭದಲ್ಲಿ ಭಾನುವಾರ ಭಾಗವಹಿಸಿ ಅವರು ಮಾತನಾಡಿದರು.

'ಕ್ರೀಡೆ ಹಾಗೂ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಮೀಸಲಾತಿ ಹೆಚ್ಚಿಸುವುದು ಅಗತ್ಯ. 2022–23ನೇ ಸಾಲಿನಲ್ಲಿ ಕ್ರೀಡಾ ಕೋಟಾದ ಅಡಿ ಕಾನ್‌ಸ್ಟೆಬಲ್‌ಗೆ 80 ಮಂದಿ, ಪಿಎಸ್‌ಐಗೆ 20 ಮಂದಿ ಆಯ್ಕೆಗೊಂಡಿದ್ದರು' ಎಂದರು.

'ರಾಜ್ಯ ಪೊಲೀಸ್ ತಂಡವು ಸೇರಿದಂತೆ ದೇಶದ ನಾನಾ ರಾಜ್ಯಗಳ 24 ಪೊಲೀಸ್ ತಂಡಗಳು ಈ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದವು. ರಾಜ್ಯ ಪೊಲೀಸ್ ಇಲಾಖೆಯು ಮೊದಲ ಬಾರಿಗೆ ಅಖಿಲ ಭಾರತ ಆರ್ಚರಿ ಚಾಂಪಿಯನ್‌ಶಿಪ್ ಆಯೋಜಿಸಿದೆ. ಇದರಲ್ಲಿ 436 ಸ್ಪರ್ಧಿಗಳು ಪಾಲ್ಗೊಂಡಿದ್ದರು. ವಿವಿಧ ವಿಭಾಗದಲ್ಲಿ ಚಿನ್ನ, ಬೆಳ್ಳಿ, ಕಂಚು ಸೇರಿದಂತೆ 174 ಪದಕಗಳನ್ನು ವಿತರಿಸಲಾಗಿದೆ.



ವಿಜೇತರಾದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟ್ರೋಫಿ ವಿತರಿಸಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಸಚಿವರಾದ ಜಿ.ಪರಮೇಶ್ವರ, ರಾಮಲಿಂಗಾರೆಡ್ಡಿ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಪಾಲ್ಗೊಂಡಿದ್ದರು.

ಅಮನ್‌ಗೆ 6, ರಜತ್‌ಗೆ 5 ಪದಕ

ಪೊಲೀಸ್ ಇಲಾಖೆ ಆಯೋಜಿಸಿದ್ದ ಅಖಿಲ ಭಾರತ ಪೊಲೀಸ್ ಆರ್ಚರಿ ಚಾಂಪಿಯನ್‌ಷಿಪ್‌ನ ಮಹಿಳಾ ವಿಭಾಗದಲ್ಲಿ ರಾಜಸ್ಥಾನದ ಅಮನ್ ದೀಪ್ ಕೌರ್ ಹಾಗೂ ಪುರುಷ ವಿಭಾಗದಲ್ಲಿ ರಜತ್ ಚೌಹಾಣ್ ಅವರು ಚಾಂಪಿಯನ್ ಆಗಿ ಹೊರಹೊಮ್ಮಿದರು.

ಅಮನ್ ದೀಪ್ ಕೌರ್ ಅವರು ನಾಲ್ಕು ಚಿನ್ನ ಸೇರಿದಂತೆ ಒಟ್ಟು 6 ಪದಕ ಹಾಗೂ ರಜತ್ 5 ಚಿನ್ನದ ಪದಕ ಪಡೆದುಕೊಂಡು ಬೀಗಿದರು.

ಸಮಗ್ರ ಚಾಂಪಿಯನ್ ವಿಭಾಗ (ಪುರುಷರು): ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ ತಂಡ (20 ಪದಕ, ಮೊದಲ ಸ್ಥಾನ). ಅಸ್ಸಾಂ ರೈಫಲ್ಸ್ ತಂಡ (16 ಪದಕ, 2ನೇ ಸ್ಥಾನ) ಹಾಗೂ ರಾಜಸ್ಥಾನ ತಂಡ (8 ಪದಕ, ಮೂರನೇ ಸ್ಥಾನ).

ಸಮಗ್ರ ಚಾಂಪಿಯನ್ ವಿಭಾಗ (ಮಹಿಳೆಯರು): ಮಹಿಳೆಯರ ವಿಭಾಗದಲ್ಲಿ ಬಾರ್ಡರ್ ಸೆಕ್ಯೂರಿಟಿ ಪೊಲೀಸ್ (ಬಿಎಸ್‌ಎಫ್) ತಂಡ (14 ಪದಕ, ಮೊದಲ ಸ್ಥಾನ). ರಾಜಸ್ಥಾನ (14 ಪದಕ, 2ನೇ ಸ್ಥಾನ) ಹಾಗೂ ಅಸ್ಸಾ ರೈಫಲ್ಸ್ (7 ಪದಕ, 3ನೇ ಸ್ಥಾನ) ಗಳಿಸಿವೆ.

ವೈದಿಕ ಪದ್ಧತಿಯಿಂದ ಶೂದ್ರರು 2ನೇ ದರ್ಜೆ ನಾಗರಿಕರು: ಸಚಿವ ಎಚ್‌.ಸಿ. ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕನಕಧಾಮ ಪೀಠದ ಈಶ್ವರಾನಂದ ಸ್ವಾಮೀಜಿ ಅವರು ಭೇಟಿ ನೀಡಿದ ನಂತರ ಬಾಗೂರು ಚನ್ನಕೇಶವ ದೇವಸ್ಥಾನ ತೊಳೆದು ಶುಚಿಗೊಳಿಸಿದ ಘಟನೆಗೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿರುವುದಾಗಿ ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಹೇಳಿದರು.

ಭಾನುವಾರ ತಾಲ್ಲೂಕಿನ ಹೂಲಗೇರಾದಲ್ಲಿನ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಅವರು ಪಟ್ಟಣದಲ್ಲಿ ಸುದ್ದಿಗಾರರ ಬಳಿ ಮಾತನಾಡಿ, ಇಂಥ ಘಟನೆ ನಡೆದಿದ್ದರೆ ಅದು ಖಂಡನೀಯ ಅಷ್ಟೇ ಅಲ್ಲ; ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಜಾತಿ ಪದ್ಧತಿಯನ್ನು ಜೀವಂತವಾಗಿರಿಸಿದಂತಾಗುತ್ತದೆ ಎಂದು ಖೇದ ವ್ಯಕ್ತಪಡಿಸಿದರು.

ರಾಮನಿಗೆ ಬಂಗಲೆ, ಶ್ರಮಿಕರಿಗೆ ಟೆಂಟ್

ಹಿಂದುತ್ವ–ಮೆಲೋಡಿ ಆ್ಯಂಡ್ ಮೈಲ್‌ಸ್ಟೋನ್' ಪುಸ್ತಕ ಬಿಡುಗಡೆ • ವಿಜ್ಞಾನ ಲೇಖಕ ನಾಗೇಶ ಹೆಗಡೆ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಯೋಧ್ಯೆಯಲ್ಲಿ ಟೆಂಟ್‌ನಲ್ಲಿದ್ದ ರಾಮನನ್ನು ಭವ್ಯ ಬಂಗಲೆಯಲ್ಲಿ ಕೂರಿಸಿ, ಶ್ರಮ ಜೀವಿಗಳನ್ನು ಟೆಂಟ್‌ನಲ್ಲಿ ಇರಿಸಿ ವಿಜೃಂಭಿಸುತ್ತಿದ್ದೇವೆ. ಇದು ಇವತ್ತಿನ ವ್ಯಂಗ್ಯವಾಗಿದ್ದು, ಇದಕ್ಕೆ ವಿಜ್ಞಾನಿಗಳು ಸಹಾಯ ಮಾಡುತ್ತಿರುವುದು ದೊಡ್ಡ ಕ್ರೌರ್ಯ' ಎಂದು ವಿಜ್ಞಾನ ಲೇಖಕ ನಾಗೇಶ ಹೆಗಡೆ ಅಸಮಾಧಾನ ವ್ಯಕ್ತಪಡಿಸಿದರು.

ನವಕರ್ನಾಟಕ ಪ್ರಕಾಶನ ಮತ್ತು ಮಾ–ಲೆ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಜಿ. ರಾಮಕೃಷ್ಣ ಅವರ 'ಹಿಂದುತ್ವ–ಮೆಲೋಡಿ ಆ್ಯಂಡ್ ಮೈಲ್‌ಸ್ಟೋನ್' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.


'ಅಯೋಧ್ಯೆಯಲ್ಲಿ ಭವ್ಯವಾದ ದೇವಾಲಯ ನಿರ್ಮಾಣವಾಗಿದೆ. ಅಲ್ಲಿ ಅಂಗಡಿಗಳ ನಿರ್ಮಾಣಕ್ಕೆ ಜಮೀನು ಸಾಕಾಗುವುದಿಲ್ಲ ಎಂಬ ಕಾರಣಕ್ಕೆ ಅಕ್ಕಪಕ್ಕದ ರೈತರ ಮೇಲೆ ದಬ್ಬಾಳಿಕೆ ಮಾಡಿ, ಜಮೀನುಗಳನ್ನು ಬಿಡಿಸಿಕೊಳ್ಳಲಾಗುತ್ತಿದೆಯಂತೆ. ಅವರಿಗೆ ಬದುಕಲು ಸ್ಥಳವಿಲ್ಲವೆಂದು ಟೆಂಟ್‌ಗಳನ್ನು ಹಾಕುತ್ತಿದ್ದಾರಂತೆ. ಇದು ನಮ್ಮ ವಿಪರ್ಯಾಸ' ಎಂದು ಬೇಸರ ವ್ಯಕ್ತಪಡಿಸಿದರು.

'ರಾಮನವಮಿ ದಿನದಂದು ಅಲ್ಲಿನ ಶ್ರೀರಾಮನ ವಿಗ್ರಹದ ಹಣೆಯ ಮೇಲೆ ಸೂರ್ಯನ ಬೆಳಕು ಬರುವಂತೆ ಎಲೆಕ್ಟ್ರಾನಿಕ್ ಉಪಕರಣವನ್ನು ಅಳವಡಿಸುತ್ತಿದ್ದಾರೆ. ಇಲ್ಲಿನ ಗವಿಗಂಗಾಧರೇಶ್ವರ ದೇವಸ್ಥಾನದ ರೀತಿಯಲ್ಲಿ ಸಹಜವಾಗಿ ಅಲ್ಲಿ ಸೂರ್ಯನ ಬೆಳಕು ವಿಗ್ರಹದ ಮೇಲೆ ಬೀಳುವುದಿಲ್ಲ. ಹೇಗಾದರೂ ಮಾಡಿ ಬೆಳಕು ತರಿಸಬೇಕೆಂದು ಕ್ರಮವಹಿಸಿದ್ದಾರೆ. ವಿಜ್ಞಾನಿಗಳು ಹಾಗೂ ಎಂಜಿನಿಯರ್‌ಗಳ ಬುದ್ಧಿಶಕ್ತಿ ಆ ಕಡೆ ವಾಲುತ್ತಿರುವುದು ನಮ್ಮ ದುರಂತ. ವರ್ಷವಿಡೀ ರಾಮನ ವಿಗ್ರಹವನ್ನು ಕತ್ತಲೆಯಲ್ಲಿ ಇರಿಸಿ, ಒಂದು ದಿನ ಕೃತಕ ಬೆಳಕನ್ನು ವಿಗ್ರಹದ ಮೇಲೆ ಹರಿಸಲಾಗುತ್ತದೆ. ನಾವು ದಿನವಿಡೀ ಹೊರಗಡೆ ಓಡಾಡುತ್ತೇವೆ. ನಮಗೆ ಸೂರ್ಯನ ಬೆಳಕು ಸಹಜವಾಗಿ ದೊರೆಯುವುದರಿಂದ ವಿಟಮಿನ್ ಡಿ ಸಿಗುತ್ತದೆ' ಎಂದು ವ್ಯಂಗ್ಯವಾಡಿದರು.

'ಕಳೆದ 10–12 ವರ್ಷಗಳಿಂದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷರು ಉಪಗ್ರಹದ ಪ್ರತಿಕೃತಿ ಹಾಗೂ ವಿಜ್ಞಾನಿಗಳ ಪಟಾಲಂ ಹಿಡಿದುಕೊಂಡು, ತಿರುಪತಿ, ಕೊಲ್ಲೂರು ಸೇರಿ ವಿವಿಧ ದೇವಾಲಯಗಳಿಗೆ ತೆರಳುತ್ತಿದ್ದಾರೆ. ಒಬ್ಬ ಮಹಾಶಯ ಹರಕೆ ಹೊತ್ತು, ತುಲಾಭಾರವನ್ನೂ ಮಾಡಿಕೊಂಡಿದ್ದಾನೆ. ಸಂವಿಧಾನದ ವಿರುದ್ಧವಾಗಿ, ಬಹಿರಂಗವಾಗಿ ದೇವರಿಗೆ ಹರಕೆ ತೀರಿಸುವುದು ವೈರುಧ್ಯ. ವೈಜ್ಞಾನಿಕತೆಯ ನಡುವೆ ಮೂಢನಂಬಿಕೆ ಪ್ರದರ್ಶನ ನಮ್ಮ ದೇಶದಲ್ಲಿ ಮಾತ್ರ ಕಾಣಿಸುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಹಾಗೂ ಕೃತಿಯ ಲೇಖಕ ಜಿ. ರಾಮಕೃಷ್ಣ, 'ವಿಜ್ಞಾನದ ಬಗ್ಗೆ ಕಾಳಜಿ ಕಡಿಮೆಯಾಗುತ್ತಿದೆ. ವೈಜ್ಞಾನಿಕ ವಿಚಾರ ಧಾರೆಗಳನ್ನು ಹೆಚ್ಚು ಹೆಚ್ಚು ಪ್ರಸಾರ ಮಾಡಬೇಕು' ಎಂದರು.

'ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸ್ಮಾರಕ ಉಪನ್ಯಾಸ'ದಡಿ 'ವಿಜ್ಞಾನದ ಸಂಸ್ಕೃತಿ–ವಿಕೃತಿ' ಎಂಬ ವಿಷಯದ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಎಂ.ಆರ್.ಎನ್. ಮೂರ್ತಿ ಮಾತನಾಡಿದರು.



ಕಾರ್ಯಕ್ರಮದಲ್ಲಿ ನಾಗೇಶ ಹೆಗಡೆ (ಎಡದಿಂದ ಎರಡನೆಯವರು) ಅವರು ಜಿ. ರಾಮಕೃಷ್ಣ (ಎಡಗಡೆಯವರು) ಅವರ 'ಹಿಂದುತ್ವ– ಮೆಲೋಡಿ ಆ್ಯಂಡ್ ಮೈಲ್‌ಸ್ಟೋನ್' ಪುಸ್ತಕ ಬಿಡುಗಡೆ ಮಾಡಿದರು. ಎಂ.ಆರ್‌.ಎನ್‌. ಮೂರ್ತಿ ಮತ್ತು ನಿವೃತ್ತ ಬ್ಯಾಂಕ್ ಅಧಿಕಾರಿ ನಟರಾಜ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- ಪುಸ್ತಕ: 'ಹಿಂದುತ್ವ–ಮೆಲೋಡಿ ಆ್ಯಂಡ್ ಮೈಲ್‌ಸ್ಟೋನ್'
- ಲೇಖಕ: ಜಿ. ರಾಮಕೃಷ್ಣ
- ಪುಟಗಳು: 128
- ಬೆಲೆ: ₹ 175
- ಪ್ರಕಾಶನ: ನವಕರ್ನಾಟಕ

ಶಿಕ್ಷಣ ನೀತಿ ಕನ್ನಡದ ಭವಿಷ್ಯಕ್ಕೆ ಪೂರಕವಾಗಲಿ: ಸಿಂಧ್ಯ

ಬೆಂಗಳೂರು: 'ಕನ್ನಡದ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಶಿಕ್ಷಣ ನೀತಿ ರೂಪಿಸಬೇಕು' ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಮೈಕೊ ಕನ್ನಡ ಬಳಗ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರೈತ ಹೋರಾಟಗಾರ್ತಿ ಬಿ. ಅನುಸೂಯಮ್ಮ ಅವರಿಗೆ 'ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು. ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ.

'ಕೇಂದ್ರ ಸರ್ಕಾರವು ಎನ್‌ಇಪಿ ಜಾರಿ ಮಾಡಿದ್ದರಿಂದ ನಾಲ್ಕು ವರ್ಷದ ಪದವಿ ಜಾರಿಯಲ್ಲಿದೆ. ಈಗ ರಾಜ್ಯ ಸರ್ಕಾರವು ಎಸ್‌ಇಪಿ ರೂಪಿಸಿ, ಈ ಮೊದಲು ಇದ್ದಂತೆ ಮೂರು ವರ್ಷಗಳ ಪದವಿ ಜಾರಿ ಮಾಡಲು ಮುಂದಾಗಿದೆ. ಇದರಿಂದ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗುವ ಸಾಧ್ಯತೆಯಿದೆ. ಈ ಬಗ್ಗೆ ತಜ್ಞರೊಡನೆ ಚರ್ಚಿಸಿ, ಪರಿಹಾರ ಕಂಡುಕೊಳ್ಳಬೇಕು. ಈ ಕುರಿತು ಉನ್ನತ ಶಿಕ್ಷಣ ಸಚಿವರಿಗೆ ಮನವಿ ಮಾಡಿದ್ದೇನೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಬಿ. ಅನುಸೂಯಮ್ಮ ಅವರಿಗೆ 'ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ಎಡದಿಂದ) ಇಂದಿರಾ ಶರಣ ಜಮ್ಮಲದಿನ್ನಿ, 'ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್‌'ನ ಸಂಘಟನಾ ಕಾರ್ಯದರ್ಶಿ ಎಂ. ರಾಘವೇಂದ್ರ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು, ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಮತ್ತು ಪಿ.ಜಿ.ಆರ್‌. ಸಿಂಧ್ಯ ಪಾಲ್ಗೊಂಡಿದ್ದರು

ಕೇಂದ್ರೀಯ ವಿದ್ಯಾಲಯಕ್ಕೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಾಲೆಗಳಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕುತ್ತಿರುವ ಘಟನೆಗಳು ಪದೇ ಪದೇ ಮರುಕಳಿಸುತ್ತಿವೆ. ಇದೇ ರೀತಿಯ ಬೆದರಿಕೆ ಕರೆಯೊಂದು ನಾಲ್ಕು ದಿನಗಳ ಹಿಂದೆ ಯಶವಂತಪುರದ ಕೇಂದ್ರೀಯ ವಿದ್ಯಾಲಯಕ್ಕೂ ಬಂದಿದ್ದು, ಈ ಸಂಬಂಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆದರಿಕೆಯಿಂದ ಕೆಲವು ಗಂಟೆಗಳ ಕಾಲ ಶಾಲಾ ಆವರಣದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಹುಸಿ ಕರೆ ಎಂಬುದು ಗೊತ್ತಾದ ಮೇಲೆ ಆತಂಕ ದೂರವಾಗಿತ್ತು.

'ಅಂದು ಬೆಳಿಗ್ಗೆ 10.30ರ ಸುಮಾರಿಗೆ ಇ–ಮೇಲ್ ಪರಿಶೀಲಿಸಿದಾಗ ಬೆದರಿಕೆ ಪತ್ರ ಬಂದಿರುವುದು ಗೊತ್ತಾಗಿದೆ. 'ಶಾಲೆಯಲ್ಲಿ ಬಾಂಬ್ ಇಡಲಾಗಿದ್ದು, ಅದು ತಕ್ಷಣವೇ ಸ್ಫೋಟಗೊಳ್ಳಲಿದೆ. ಕಟ್ಟಡದಲ್ಲಿದ್ದವರು ಹೊರಬಂದರೆ ಅಪಾಯದಿಂದ ಪಾರಾಗಬಹುದು' ಎಂದು ಬರೆಯಲಾಗಿತ್ತು. ಪ್ರಾಂಶುಪಾಲರು ಹಾಗೂ ಸಂಸ್ಥೆಯ ಅಧಿಕಾರಿಯೊಬ್ಬರ ಇ–ಮೇಲ್ ವಿಳಾಸಕ್ಕೆ ಬೆದರಿಕೆ ಪತ್ರ ಬಂದಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಿದ್ಯಾಲಯದ ಪ್ರಾಂಶುಪಾಲರಾದ ಅಮೃತಬಾಲ ಅವರು ದೂರು ನೀಡಿದ್ದು, ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ. ಅಂದೇ ಶಾಲಾ ಆವರಣಕ್ಕೆ ಬಾಂಬ್ ನಿಷ್ಕ್ರಿಯ ದಳ ಹಾಗೂ ಬಾಂಬ್ ತಪಾಸಣೆ ದಳ ಭೇಟಿ ಪರಿಶೀಲನೆ ನಡೆಸಲಾಗಿತ್ತು. ಯಾವುದೇ ಸ್ಫೋಟಕ ಸಾಮಗ್ರಿಗಳು ಪತ್ತೆ ಆಗಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಡಿಸೆಂಬರ್‌ನಲ್ಲಿ ಬಂದಿದ್ದ ಬೆದರಿಕೆ ಕರೆಗಳ ಪ್ರಕರಣದ ತನಿಖೆಯನ್ನು ಸಿಸಿಬಿ ಪೊಲೀಸರು ನಡೆಸುತ್ತಿದ್ದಾರೆ. ಕೇಂದ್ರೀಯ ವಿದ್ಯಾಲಯಕ್ಕೆ ಬಂದಿರುವ ಇ–ಮೇಲ್‌ನ ವಿಳಾಸ ಪತ್ತೆಗೆ ಸೈಬರ್ ತಜ್ಞರ ಸಹಕಾರ ಕೋರಲಾಗಿದೆ' ಎಂದು ಪೊಲೀಸರು ಹೇಳಿದರು.

ಡಿಸೆಂಬರ್ ಮೊದಲ ವಾರ ನಗರದ 70 ಶಾಲೆಗಳಿಗೆ ಇದೇ ರೀತಿ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. ಶಾಲೆಗಳ ಆವರಣದಲ್ಲಿ ಆತಂಕ ಸೃಷ್ಟಿಯಾಗಿ, ಶಾಲೆಗಳಿಗೆ ರಜೆ ನೀಡಲಾಗಿತ್ತು. ಮಕ್ಕಳು ಆತಂಕಗೊಂಡಿದ್ದರು. ಕಾರ್ಯ ಪ್ರವೃತ್ತರಾದ ಪೊಲೀಸರು, ಶಾಲೆಗಳ ಆವರಣಗಳಲ್ಲಿ ಶೋಧ ನಡೆಸಿ ಹುಸಿ ಇ–ಮೇಲ್ ಎಂಬುದನ್ನು ಪತ್ತೆ ಹಚ್ಚಿದ್ದರು.

ಅಲ್ಲದೇ ರಾಜಭವನದಲ್ಲಿಯೂ ಬಾಂಬ್ ಇರಿಸಿರುವುದಾಗಿ ಕೋಲಾರದ ಯುವಕ ಭಾಸ್ಕರ್ ಎಂಬಾತ ಬೆದರಿಕೆ ಕರೆ ಮಾಡಿದ್ದ. ಆತನನ್ನು ಪೊಲೀಸರು ಬಂಧಿಸಿದ್ದರು. ಜ.4ರಂದು ನಗರದ ಕಸ್ತೂರಬಾ ರಸ್ತೆಯಲ್ಲಿರುವ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯಕ್ಕೂ ಬಾಂಬ್ ಬೆದರಿಕೆ ಕರೆ ಬಂದಿತ್ತು.

'ಭಾರತೀಯ ಮಾಧ್ಯಮ ಶಿಕ್ಷಣ ಮಂಡಳಿ ಅಗತ್ಯ'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಮಾಧ್ಯಮ ಶಿಕ್ಷಣ ಕ್ಷೇತ್ರದ ಸುವ್ಯವಸ್ಥಿತ ಬೆಳವಣಿಗೆಗಾಗಿ ಭಾರತೀಯ ಮಾಧ್ಯಮ ಶಿಕ್ಷಣ ಮಂಡಳಿಯ ರಚನೆ ಇಂದಿನ ತುರ್ತು ಅಗತ್ಯವಾಗಿದೆ' ಎಂದು ಭಾರತೀಯ ಸಂವಹನ ಕಾಂಗ್ರೆಸ್‌ನ ಕಾರ್ಯಕಾರಿ ಅಧ್ಯಕ್ಷ ಹಾಗೂ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ ಹೇಳಿದರು.

ನಗರದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭಾನುವಾರ ನಡೆದ 'ಭಾರತೀಯ ಸಂವಹನ ಕಾಂಗ್ರೆಸ್‌ನ (ಐಸಿಸಿ) ಸಂಸ್ಥಾಪನಾ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು.

'ಭಾರತೀಯ ಮಾಧ್ಯಮ ಶಿಕ್ಷಣದ ಇತ್ತೀಚಿನ ಪ್ರವೃತ್ತಿಗಳು ಮತ್ತು ಸವಾಲುಗಳು' ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

'ಮಾಧ್ಯಮ ಶಿಕ್ಷಣ ಸಂಸ್ಥೆಗಳು ಮತ್ತು ಮಾಧ್ಯಮಗಳ ಮಧ್ಯೆದ ಅಂತರ ಕಡಿಮೆ ಮಾಡುವ ವಿಧಾನಗಳು' ಎಂಬ ಗೋಷ್ಠಿಯಲ್ಲಿ ತ್ರಿಪುರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ವಿ.ಎಲ್‌. ಧಾರೂರ್‌ಕರ್, ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಓಂಕಾರ ಕಾಕಡೆ, ಕ್ರಿಸ್ತು ಜಯಂತಿ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಗೋಪಕುಮಾರ್, ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಸಪ್ನಾ ಭಾಗವಹಿಸಿದ್ದರು.



ಭಾರತೀಯ ಸಂವಹನ ಕಾಂಗ್ರೆಸ್‌ನ (ಐಸಿಸಿ) ಸಂಸ್ಥಾಪನಾ ದಿನಾಚರಣೆ'ಯಲ್ಲಿ ಸಂಸ್ಥೆಯ ಕಾರ್ಯಕಾರಿ ಅಧ್ಯಕ್ಷ ಬಿ.ಕೆ.ರವಿ (ಎಡದಿಂದ ಎರಡನೆಯವರು) ಸ್ಮರಣಿಕೆ ಬಿಡುಗಡೆ ಮಾಡಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಉಪೇಂದ್ರ ಪಾಡಿ, ಕೆ.ವಿ.ನಾಗರಾಜ್, ಪ್ರೆಸಿಡೆನ್ಸಿ ಕಾಲೇಜಿನ ಪ್ರಾಂಶುಪಾಲರಾದ ಸುಚಿತ್ರ ನಾಯರ್ ಹಾಗೂ ತಿರುನಲ್ವೇಲಿಯ ಎಂ.ಎಸ್‌. ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಬಾಲಸುಬ್ರಮಣಿಯನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

53) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಭಾರತದಲ್ಲಿ ಅರಣ್ಯ ಹೊಂದಿರುವ ಪ್ರದೇಶದಲ್ಲಿ ಕರ್ನಾಟಕದ ಸ್ಥಾನ ಯಾವುದು?

ಎ) 23 ಬಿ) 13
ಸಿ) 26 ಡಿ) 17

ಉತ್ತರ:– (ಬಿ) 13

2). ....ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಆಗಿದ್ದರು.

ಎ) ಸರೋಜಿನಿ ನಾಯ್ಡು ಬಿ) ವಿಜಯಲಕ್ಷ್ಮಿ ಪಂಡಿತ್
ಸಿ) ಲಕ್ಷ್ಮಿ ಸೆಹಗಲ್ ಡಿ) ಅನಿಬೆಸೆಂಟ್

ಉತ್ತರ:– (ಡಿ) ಅನಿಬೆಸೆಂಟ್

3) ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು,. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು.

ಮೇಲಿನ ಟಿಪ್ಪಣಿ ಯಾರಿಗೆ ಸರಿಹೊಂದುತ್ತದೆ?

ಎ) ನಾಲ್ವಡಿ ಕೃಷ್ಣರಾಜ ಒಡೆಯರು
ಬಿ) ಜಯಚಾಮರಾಜ ಒಡೆಯರ್
ಸಿ) ರಾಜ ಒಡೆಯರ್ ಡಿ) ಮೇಲಿನ ಯಾರೂ ಅಲ್ಲ

ಉತ್ತರ:– (ಎ) ನಾಲ್ವಡಿ ಕೃಷ್ಣರಾಜ ಒಡೆಯರು

4) ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ಯಾರು?

.ಎ) ಲಾರ್ಡ್ ಕ್ಯಾನಿಂಗ್ ಬಿ) ಲಾರ್ಡ್ ಮಿಂಟೊ
ಸಿ) ಲಾರ್ಡ್ ವಾರನ್ ಹೇಸ್ಟಿಂಗ್
ಡಿ) ಲಾರ್ಡ್ ಮೆಟ್ಕಾಫ್ ಡಿ) ಮೌಂಟ್ ಬ್ಯಾಟನ್

ಉತ್ತರ:–(ಎ) ಲಾರ್ಡ್ ಕ್ಯಾನಿಂಗ್

5) ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿ ಅದರ ಬಗ್ಗೆ ಪುಸ್ತಕವೊಂದನ್ನು ಬರೆದವರು ಯಾರು?

ಎ) ಡಾ॥ ಎಂ. ಎಸ್. ಸ್ವಾಮಿನಾಥನ್
ಬಿ) ಜವಾಹರ್ ಲಾಲ್ ನೆಹರು
ಸಿ) ಇಂದಿರಾ ಗಾಂಧಿ
ಡಿ) ಸರ್ ಎಂ. ವಿಶ್ವೇಶ್ವರಯ್ಯನವರು.

ಉತ್ತರ:– (ಡಿ) ಸರ್ ಎಂ. ವಿಶ್ವೇಶ್ವರಯ್ಯನವರು

6) ಹೊಂದಿಸಿ ಬರೆಯಿರಿ:–

ಪಟ್ಟಿ–1	ಪಟ್ಟಿ–2
(1) ನೀಲಿ ಕ್ರಾಂತಿ	ಎ) ಮೀನುಗಳ ಉತ್ಪಾದನೆ
(2) ಹಳದಿ ಕ್ರಾಂತಿ	ಬಿ) ಎಣ್ಣೆ ಬೀಜಗಳ ಉತ್ಪಾದನೆ
(3) ಬಿಳಿ ಕ್ರಾಂತಿ	ಸಿ) ಹಾಲು ಉತ್ಪಾದನೆ
(4) ಬೆಳ್ಳಿ ಕ್ರಾಂತಿ	ಡಿ) ಮಾಂಸದ ಉತ್ಪಾದನೆ
(5) ಬಂಗಾರ ಕ್ರಾಂತಿ	ಇ) ಹಣ್ಣು/ಹೂಗಳ ಉತ್ಪಾದನೆ
(6). ಕೆಂಪು ಕ್ರಾಂತಿ	ಎಫ್) ಮೊಟ್ಟೆಗಳ ಉತ್ಪಾದನೆ

ಉತ್ತರ:– 1)ಎ 2)ಬಿ 3–ಸಿ 4–ಎಫ್ 5–ಇ 6–ಡಿ

7) ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?

ಎ) ಕಾಜಿರಂಗ ನ್ಯಾಷನಲ್ ಪಾರ್ಕ್–ಅಸ್ಸಾಂ.
ಬಿ) ಹಜಾರಿಭಾಗ ನ್ಯಾಷನಲ್ ಪಾರ್ಕ್– ಬಿಹಾರ.
ಸಿ) ಗಿರ್ ನ್ಯಾಷನಲ್ ಪಾರ್ಕ್‌ಗುಜರಾತ.
ಡಿ) ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ– ಉತ್ತರಾಂಚಲ

ಉತ್ತರ:–(ಡಿ)ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ– ಉತ್ತರಾಂಚಲ

54) ಹಸಿರು ಕ್ರಾಂತಿ ಎಂದರೇನು?

ಉತ್ತರ:–. 1967–70ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರು ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ. 1967ರಲ್ಲಿ 74 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970ರ ವೇಳೆಗೆ 108 ದಶಲಕ್ಷ ಟನ್‌ಗಳಿಗೆ ಹೆಚ್ಚಿತ್ತು. ಕೇವಲ 3 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಯಿತು. ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ ಹಸಿರು ಕ್ರಾಂತಿ ಎಂದು ಹೆಸರಿಸಲಾಯಿತು.

55) ಮಣ್ಣಿನ ಸವೆತದ ಕೆಟ್ಟ ಪರಿಣಾಮಗಳು ಯಾವುವು?

ಉತ್ತರ:– ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ:–

1) ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
2) ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ಅವುಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.
4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ. ಇದರಿಂದ ಭೂ ಸವೆತ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

56) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?

ಉತ್ತರ:– ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ:–

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

REVISION and MODEL QUESTIONS

I. Select the correct option from the given choices.

1. Aquatic species are more comfortable in cold water rather than in warm water. This is due to
a) solubility of oxygen is more in warm water.
b) solubility of oxygen is more in cold water.
c) solubility of gases increases with decrease of temperature.
d) both (b) and (c).
Ans:- (d) both (b) and (c).

2. Which of the following cell was used in Apollo space programme?
a) Mercury cell b) Daniel cell
c) H_2–O_2 Fuel cell
d) Dry cell
Ans:- (c) H_2–O_2 Fuel cell

3. During electrolysis of aqueous solution of NaCl, the reaction preferred at anode is
a) $2H_2O(l) \rightarrow O_2(g) + 4H^+(aq) + 4e^-$ b) $H_2O(l) + e^- \rightarrow \frac{1}{2}H_2(g) + OH^-$
c) $Cl^-(aq) \rightarrow \frac{1}{2}Cl_2(g) + e^-$ d) $\frac{1}{2}Cl_2(g) + e^- \rightarrow Cl^-(aq)$
Ans:- c) $Cl^-(aq) \rightarrow \frac{1}{2}Cl_2(g) + e^-$

4. Order of a reaction is determined by
a) balanced chemical equation
b) unbalanced chemical reaction
c) experimental rate expression
d) thermo-chemical equation
Ans:- (c) experimental rate expression

5.Ionic character decreases in the following oxides.
a) $Mn_2O_7 > MnO_2 > MnO$ b) $MnO > MnO_2 > Mn_2O_7$
c) $Mn_2O_7 > MnO > MnO_2$ d) $MnO > Mn_2O_7 > MnO_2$
Ans:- b) $MnO > MnO_2 > Mn_2O_7$

6. The oxidation state of Fe in $[Fe(CO)_5]$ is
a) + 2 b) 0
c) + 3 d) + 5
Ans:- (b) 0

7. The gases liberated when primary alcohols react with thionyl chloride are
a) SO_2 and H_2 b) H_2 and HCl
c) SO_2 and HCl d) NO_2 and H_2
Ans:- (c) SO_2 and HCl

8. Phenol molecule is less stable than phenoxide ion because
a) phenol resonance structures have charge separation but not in phenoxide ion.
b) phenoxide ion resonance structures have charge separation but not in phenol.
c) both Phenoxide ion and phenol resonance structures have charge separation
d) both Phenoxide ion and phenol resonance structures do not have charge separation
Ans:- (a) phenol resonance structures have charge separation but not in phenoxide ion.

9. Glycerol is an example for
a) dihydric alcohol b) dihydric phenol
c) trihydric phenol d) trihydric alcohol
Ans:- (d) trihydric alcohol

10. Tollen's reagent is a
a) silver nitrate solution
b) ammonical silver nitrate solution
c) ammonium nitrate solution
d) silver chloride solution
Ans:- (b) ammonical silver nitrate solution

11. Carboxylic acids exists in dimeric form even in vapour phase due to
a) Hydrogen bond b) peptide bond
c) ionic bond d) metallic bond
Ans:- (a) Hydrogen bond

12. The state of hybridization of orbitals of Nitrogen atom in amines is;
a) sp^2 b) sp^3
c) sp d) dsp^2
Ans:-(b) sp^3

13.Benzene diazonium chloride reacts with phenol to form p-hydroxy azobenzene in
a) acidic medium b) neutral medium
c) basic medium
d) both acidic and neutral medium
Ans:- (c) basic medium

14. Thiamine is a chemical name of;
a) Vitamin A b) Vitamin B_1
c) Vitamin C d) Vitamin K
Ans:- (b) Vitamin B_1

15. The nitrogenous base adenine form hydrogen bonding with
a) Thymine b) Cytosine
c) Guanine d) None of the above
Ans:- (a) Thymine

II. Fill in the blanks by choosing the appropriate word from those given in the brackets: (phosgene, tin, hydrogen, molecularity, zinc, cellulose acetate)

16. Thesemi permeable membrane used in the reverse osmosis is ________________.
Ans:- cellulose acetate

17. The number of molecules taking part in the elementary reaction is called _______.
Ans:- molecularity

18. The non-transitional metal present in brass is ___________.
Ans:- zinc

19. The poisonous gas formed when chloroform is exposed to air and lightis ________.
Ans:- phosgene

20. Solubility of ethylamine in water is due to formation of ________bonding with water.
Ans:- hydrogen

III. Answer any three of the following. Each question carries two marks.

21. How does the boiling point of solvent varies, when a non-volatile solute is dissolved in it? Give reason.
Ans:- When a non-volatile solute is dissolved in a solvent, the boiling point of the solvent increases. This is because the solute particles interfere with the ability of the solvent particles to escape from the surface of the liquid. As a result, more heat is required to raise the temperature of the solution to its boiling point. *(Contd....)*

ಇದೀಗ ಓದು
ಮತ್ತು ಬರವಣಿಗೆಯ
ಸಮಯ. ಓದಿನ ರಜೆಯ
ಪರಿಶ್ರಮ ಹೀಗಿರಲಿ

ಕೈಬರಹದ ಅಭ್ಯಾಸವಾಗುತ್ತಿರಲಿ





ಪರೀಕ್ಷೆಯಲ್ಲಿ ಎಲ್ಲ ಉತ್ತರಗಳು ಬರುತ್ತಿದ್ದರೂ ಸಮಯ ಸಾಲಲಿಲ್ಲ ಎಂಬ ಕಾರಣವೊಂದು ವಿದ್ಯಾರ್ಥಿಗಳಲ್ಲಿ ಇದ್ದೇ ಇರುತ್ತದೆ. ಪರೀಕ್ಷೆಯ ಅವಧಿ, ಬರೆಯಬೇಕಾದ ಉತ್ತರಗಳು, ಇವೆಲ್ಲವನ್ನೂ ಯೋಜಿಸಿಯೇ ಪ್ರಶ್ನೆಪತ್ರಿಕೆಯನ್ನು ವಿನ್ಯಾಸಗೊಳಿಸಲಾಗಿರುತ್ತದೆ. ಆದರೂ ಕೆಲವರಿಗೆ ಸಮಯ ಸಾಲದು ಯಾಕೆ?

ನಿರ್ದಿಷ್ಟ ಸಮಯದಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಬೇಕಾದ ವೇಗದ ಕೊರತೆ ಅವರಲ್ಲಿ ಇರುತ್ತದೆ. ಒಂದು ಪ್ರಶ್ನೆಗೆ ಸುದೀರ್ಘವಾಗಿ ಗೊತ್ತಿರುವುದನ್ನೆಲ್ಲ ಬರೆಯುತ್ತ ಸಮಯ ವ್ಯಯ ಮಾಡಿಕೊಳ್ಳುತ್ತಾರೆ. ಗುರುಗಳೊಂದಿಗೆ 5–6 ಹಾಗೂ ಎಂಟು ಮತ್ತು ಹತ್ತು ಅಂಕಗಳ ಪ್ರಶ್ನೆಗಳಿಗೆ ಎಷ್ಟು ಬರೆಯಬೇಕು, ಏನೆಲ್ಲ ಬರೆಯಬೇಕು ಎಂಬುದನ್ನು ಮೊದಲೇ ಚರ್ಚಿಸಿ, ಗುರುತು ಹಾಕಿಕೊಂಡಿರಬೇಕು.

ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಅದೆಷ್ಟು ಪ್ರಶ್ನೆಗಳು ವಿವರಣಾತ್ಮಕವಾಗಿ ಬರುತ್ತವೆ ಎಂಬುದನ್ನು ಮೊದಲೇ ಅಭ್ಯಾಸ ಮಾಡಿಕೊಳ್ಳಬೇಕು. ಮಾದರಿ ಪ್ರಶ್ನೆ ಪತ್ರಿಕೆಗಳಿದ್ದರೆ ಆಗಾಗ ಬರೆದು ಅಭ್ಯಾಸ ಮಾಡಿಕೊಳ್ಳಬೇಕು.

ಸಮಯ ಹೊಂದಾಣಿಕೆಗೆ ಪರಿಹಾರ ಏನು?

- ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಆಗಾಗ ಬಿಡಿಸುತ್ತಿರಿ.
- ಉತ್ತರಗಳನ್ನು ಬರೆದು ಅಭ್ಯಾಸ ಮಾಡಿ
- ಬರೆಯುವಾಗ ಟೈಮರ್ ಒಂದು ಜೊತೆಗಿರಲಿ
- ಯಾವ ಪ್ರಶ್ನೆಗೆ ಎಷ್ಟು ಸಮಯ, ಎಷ್ಟು ಪದಗಳು ಎಂಬ ವಿವೇಚನೆ ಇರಲಿ
- ಯಾವ ಪ್ರಶ್ನೆ ಪತ್ರಿಕೆಯೂ ಅವಧಿ ಮೀರಿ ಬರೆಯುವಂಥದ್ದು ಇರುವುದಿಲ್ಲ ಎಂಬುದು ನೆನಪಿರಲಿ.

ಯೋಜನೆ, ಯೋಚನೆ, ಸ್ಮರಣೆ ಹಾಗೂ ಬರೆಹ ಇವುಗಳ ನಡುವೆ ಸಮತೋಲನ ತಂದರೆ ಎಲ್ಲವೂ ಸುಲಭ ಎನಿಸುವುದು.

ಓದಿನ ರಜೆ ಹೀಗಿರಲಿ


ಪರೀಕ್ಷೆಗಳು ಸಮೀಪಿಸುತ್ತಿದ್ದಂತೆ, ಶಾಲಾ ಕಾಲೇಜುಗಳಲ್ಲಿ ಓದಿನ ರಜೆ ಘೋಷಿಸಲಾಗುತ್ತದೆ. ಈ ಓದಿನ ರಜೆಯಲ್ಲಿ ಸಮಯ ಪರಿಪಾಲಿಸದಿದ್ದಲ್ಲಿ ರಜೆಯ ಉದ್ದೇಶವೇ ಈಡೇರುವುದಿಲ್ಲ.

ಓದಿನ ರಜೆ ನಿಮಗೆ ಅರ್ಥವಾಗದ ಅಥವಾ ಕಠಿಣವೆನಿಸುವ ವಿಷಯಗಳನ್ನು ಮನನ ಮಾಡಿಕೊಳ್ಳಲು ನೀಡಲಾಗುತ್ತದೆ. ಇಂಥ ಸಂದರ್ಭದಲ್ಲಿ ಶಾಲಾ ಕಾಲೇಜುಗಳಿಗೆ ಹೋಗಿ, ಸಂಬಂಧಿಸಿದ ವಿಷಯಗಳ ಶಿಕ್ಷಕರೊಂದಿಗೆ ಸಮಾಲೋಚಿಸಿ. ಶಿಕ್ಷಕರ ಬಳಿ ಹೋಗುವ ಮೊದಲೇ ಕಠಿಣವೆನಿಸುವ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳಿ ಗುಂಪು ಚರ್ಚೆ ಅಗತ್ಯವೆನಿಸಿದರೆ, ಸ್ನೇಹಿತರನ್ನೂ ಭೇಟಿಯಾಗಿ.

ಓದಿನ ರಜೆಯಲ್ಲಿ ಸಾಮಾನ್ಯವಾಗಿ ನಿದ್ದೆಗೆಟ್ಟು ಓದುವುದು, ಹಗಲಿಡೀ ಮಲಗುವುದು ಮಾಡಲಾಗುತ್ತದೆ. ಅದರ ಬದಲಿಗೆ ಸಮಯ ಪರಿಪಾಲನೆಯ ಶಿಸ್ತನ್ನು ಅಳವಡಿಸಿಕೊಂಡರೆ ಅನುಕೂಲ ಆಗುವುದು. ದೇಹದ ಜೈವಿಕ ಸಮಯವೂ ಅದಕ್ಕೇ ಹೊಂದಿಕೊಳ್ಳುವುದು. ಪರೀಕ್ಷಾ ಸಮಯದಲ್ಲಿ ನಿದ್ದೆ ಆವರಿಸದಂಥ ಅಭ್ಯಾಸದ ಸಮಯವನ್ನು ಯೋಜಿಸಿಕೊಳ್ಳಿ.

ಓದಿನ ರಜೆಯ ಸಮಯದಲ್ಲಿ ಬೆಳಗ್ಗೆ ಮತ್ತು ಇಳಿಸಂಜೆಯಲ್ಲಿ ವಾಕ್ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಇದು ಪರೀಕ್ಷಾ ಒತ್ತಡ ನಿರ್ವಹಣೆಗೆ ಸಹಾಯವಾಗುತ್ತದೆ. ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಮನೆಯಿಂದ ಆಚೆ ಓದಲು ಹೋಗುವ ಅಭ್ಯಾಸವಿದ್ದವರು, ಸಾಕಷ್ಟು ನೀರನ್ನು ತೆಗೆದುಕೊಂಡು ಹೋಗುವುದು ಮರೆಯದಿರಿ. ಮತ್ತು ನಿಯಮಿತವಾಗಿ ನೀರು ಸೇವಿಸಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಎಂ.ಎಸ್ಸಿ (ಯೋಗ ವಿಜ್ಞಾನ) ಓದುತ್ತಿದ್ದು ಮುಂದಿನ ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ.

ಹೆಸರು ಊರು ತಿಳಿಸಿಲ್ಲ.

ಪ್ರತಿ ವೃತ್ತಿಯಲ್ಲಿನ ಕಾರ್ಯಕ್ಷಮತೆಗೆ ವಿಶಿಷ್ಟವಾದ ಜ್ಞಾನ ಮತ್ತು ಕೌಶಲಗಳ ಅಗತ್ಯವಿರುತ್ತದೆ. ಹಾಗೂ, ವೃತ್ತಿಯ ಗುಣಲಕ್ಷಣಗಳಿಗೆ ಅನುಗುಣವಾಗಿ ಸ್ವಾಭಾವಿಕ ಪ್ರತಿಭೆ, ಮನೋಧೋರಣೆ, ಮೌಲ್ಯಗಳು, ಆಸಕ್ತಿ, ಅಭಿರುಚಿ ಸೇರಿದಂತೆ ವ್ಯಕ್ತಿತ್ವವಿರಬೇಕು. ಹಾಗಾಗಿಯೇ, ಕೋರ್ಸ್ ಆಯ್ಕೆಗೆ ಮುನ್ನ ವೃತ್ತಿಯೋಜನೆ ಮಾಡುವುದು ಸೂಕ್ತ.

ಯೋಗ ವಿಜ್ಞಾನ ಈಗ ಬೇಡಿಕೆಯಲ್ಲಿರುವ ಕ್ಷೇತ್ರ. ಎಂ.ಎಸ್ಸಿ (ಯೋಗ ವಿಜ್ಞಾನ)ದ ನಂತರ ಆಸ್ಪತ್ರೆಗಳು, ಪ್ರಕೃತಿ ಚಿಕಿತ್ಸಾಲಯಗಳು, ಶಾಲಾ ಕಾಲೇಜುಗಳು, ಹೋಟೆಲ್ಸ್ ಮತ್ತು ರೆಸಾರ್ಟ್ಸ್, ಅಪಾರ್ಟ್ಮೆಂಟ್ ಸಮುಚ್ಚಯಗಳು, ಆರೋಗ್ಯ ಮತ್ತು ಯೋಗ ಕೇಂದ್ರಗಳು, ಬೃಹತ್ ಸಂಸ್ಥೆಗಳು ಇತ್ಯಾದಿಗಳಲ್ಲಿ ಯೋಗ ಶಿಕ್ಷಕರು ಮತ್ತು ತರಬೇತಿದಾರರಾಗಬಹುದು. ಹಾಗೂ, ಯೋಗ ವಿಜ್ಞಾನದ ಜೊತೆಗೆ ಧ್ಯಾನ, ಆಧ್ಯಾತ್ಮ, ಪ್ರಕೃತಿ ಚಿಕಿತ್ಸೆ, ಆಹಾರ ಮತ್ತು ಪೋಷಣೆ ಇತ್ಯಾದಿ ವಿಷಯಗಳಲ್ಲಿ ಹೆಚ್ಚಿನ ಪರಿಣತಿ ಹೊಂದಿ ನಿಮ್ಮ ವೃತ್ತಿಯ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವುದು ಸೂಕ್ತ.

ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ತಜ್ಞತೆಗಾಗಿ ಮತ್ತು ಸಮಾಜದ ಒಳಿತಿಗಾಗಿ, ಸಂಶೋಧನೆಯ ಮೂಲಕ ಪಿ.ಎಚ್‌ಡಿ ಮಾಡಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/Mb4PKUb35_Q

2. ಸರ್, ನಾನು ಪಿಯುಸಿ ಓದುತ್ತಿದ್ದು ಪದವಿಯ ನಂತರ, ಯುಪಿಎಸ್‌ಸಿ ಪರೀಕ್ಷೆ ಬರೆಯುವ ಆಸೆಯಿದೆ. ವಿಜ್ಞಾನ ವಿಭಾಗದ ಯಾವ ವಿಷಯದಲ್ಲಿ ಪದವಿ ಮಾಡಿದರೆ ಸೂಕ್ತ?

ಹೆಸರು ಊರು ತಿಳಿಸಿಲ್ಲ.

ಯುಪಿಎಸ್‌ಸಿ ಮೂಲಕ ಒಬ್ಬ ದಕ್ಷ ಆಡಳಿತಗಾರರಾಗಲು ಇಂತದ್ದೇ ಪದವಿಯನ್ನು ಮಾಡಬೇಕು ಎನ್ನುವ ನಿಯಮವೇನಿಲ್ಲ. ಹಾಗಾಗಿ, ಯುಪಿಎಸ್‌ಸಿ ಪರೀಕ್ಷೆಯನ್ನು ವಿಜ್ಞಾನ ಸೇರಿದಂತೆ ಯಾವುದೇ ಪದವಿಯ ನಂತರ ಮಾಡಬಹುದು. ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಅಭಿರುಚಿಯಿರುವ ವಿಷಯಗಳು ಮತ್ತು ಯುಪಿಎಸ್‌ಸಿ ನಂತರ ನೀವು ಯಾವ ಕ್ಷೇತ್ರದಲ್ಲಿ ವೃತ್ತಿಯನ್ನು ಅನುಸರಿಸಲು ಬಯಸುತ್ತೀರಿ ಎನ್ನುವುದರ ಆಧಾರದ ಮೇಲೆ ಪದವಿ ಕೋರ್ಸ್ ಆಯ್ಕೆ ಮಾಡಬಹುದು. ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಪಶುವೈದ್ಯ ವಿಜ್ಞಾನ, ಸಂಖ್ಯಾಶಾಸ್ತ್ರ ಇತ್ಯಾದಿಗಳನ್ನು ನಿಮ್ಮ ಆದ್ಯತೆಯಂತೆ ಪರಿಗಣಿಸಬಹುದು.

ಯುಪಿಎಸ್‌ಸಿ ಮಾಡಬೇಕೆನ್ನುವ ನಿಮ್ಮ ಬಯಕೆಯ ಅನುಸಾರ ವೃತ್ತಿಯೋಜನೆಯನ್ನು ಮಾಡಿ ಪದವಿ ಕೋರ್ಸ್ ಆಯ್ಕೆ ಮಾಡುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/AwlDno1YduQ



ಬೆಂಗಳೂರಿನಲ್ಲಿ ಭಾನುವಾರ ನಡೆದ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ವಿಶೇಷ ಸರ್ವ ಸದಸ್ಯರ ಸಭೆ ಮತ್ತು ಆರ್ಯ ಈಡಿಗರ ವಧು–ವರರ ರಾಜ್ಯಮಟ್ಟದ ಸಮಾವೇಶದಲ್ಲಿ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಮಾತನಾಡಿದರು. ಉಪಾಧ್ಯಕ್ಷ ರವೀಂದ್ರ ಕುಮಾರ್, ಉಪಾಧ್ಯಕ್ಷ ಟಿ. ಶಿವಕುಮಾರ್, ರಾಜೇಂದ್ರ ಜಾಲಪ್ಪ, ಎಂ.ಕೆ. ಪ್ರೋತರಾಜ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಈಡಿಗ ಸಂಘದ ಬೈಲಾ ತಿದ್ದುಪಡಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ನೆಲೆಸಿರುವ ಹೊರ ರಾಜ್ಯಗಳ ಈಡಿಗ ಜನಾಂಗದವರಿಗೆ ಪ್ರದೇಶ ಆರ್ಯ ಈಡಿಗರ ಸಂಘ ಮತ್ತು ಜಿಲ್ಲೆಯ ಉಪ ಸಂಘಗಳಲ್ಲಿ ಸದಸ್ಯತ್ವ ನೀಡುವುದೂ ಸೇರಿದಂತೆ ಬೈಲಾಗಳಲ್ಲಿ ಕೆಲವು ಬದಲಾವಣೆ ಮಾಡುವ ತಿದ್ದುಪಡಿಗಳಿಗೆ ಪ್ರದೇಶ ಆರ್ಯ ಈಡಿಗರ ಸಂಘದ ಸರ್ವ ಸದಸ್ಯರ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಳೀಯವಾಗಿ ಅಸ್ತಿತ್ವದಲ್ಲಿರುವ ಮತ್ತು ರಚನೆಯಾಗಲಿರುವ ಈಡಿಗ ಸಂಘಗಳಿಗೆ ಕೇಂದ್ರ ಸಂಘದ ಸದಸ್ಯತ್ವ ನೀಡುವುದು, ಆಜೀವ ಸದಸ್ಯತ್ವ ಶುಲ್ಕವನ್ನು ₹ 1 ಸಾವಿರದಿಂದ ₹ 500ಕ್ಕೆ ಇಳಿಸುವುದು, ವಿಶೇಷ ಆಹ್ವಾನಿತ ಸದಸ್ಯರ ಸಂಖ್ಯೆಯನ್ನು 15ರಿಂದ 25ಕ್ಕೆ ಹೆಚ್ಚಿಸುವ ತಿದ್ದುಪಡಿಗಳಿಗೆ ಸಭೆ ಒಪ್ಪಿಗೆ ನೀಡಿದೆ.

ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳು, ಸದಸ್ಯರು ಮತ್ತು ಸಂಘದ ಸದಸ್ಯರು ಪಾಲ್ಗೊಂಡಿದ್ದರು.

ವಧು-ವರರ ಸಮಾವೇಶ: ಸರ್ವ ಸದಸ್ಯರ ಸಭೆಯ ಬಳಿಕ ಈಡಿಗ ವಧು- ವರರ ರಾಜ್ಯ ಮಟ್ಟದ ಸಮಾವೇಶ ನಡೆಯಿತು. 300ಕ್ಕೂ ಹೆಚ್ಚು ವಧು- ವರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

‘ಅನರ್ಹ’ರ ಜಮೀನು ವಶಕ್ಕೆ ಸಜ್ಜು

ಒಂದನೇ ಪುಟದಿಂದ

‘ಅರ್ಹತೆಗೆ ನಿಗದಿಪಡಿಸಿರುವ ಅವಧಿಯಲ್ಲಿ ಅರ್ಜಿದಾರರು ಸದರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿದ್ದರು ಎಂಬುದನ್ನು ಖಚಿತ ಪಡಿಸಿಕೊಳ್ಳಲು ಕರ್ನಾಟಕ ರಾಜ್ಯ ದೂರಸಂವೇದಿ ಮತ್ತು ಅನ್ವಯಿಕ ಕೇಂದ್ರದಿಂದ ಪಡೆದ ಉಪಗ್ರಹ ಚಿತ್ರಗಳ ಆಧಾರದಲ್ಲಿ ಪರಿಶೀಲನೆ ನಡೆಯಲಿದೆ. ಇದಕ್ಕಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ನೆರವನ್ನೂ ಪಡೆಯಲಾಗುವುದು’ ಎಂದು ಕಟಾರಿಯಾ ತಿಳಿಸಿದರು.

ಬಗರ್ ಹುಕುಂ ಸಮಿತಿಗಳ ಎಲ್ಲ ಸದಸ್ಯರಿಗೂ ಆಧಾರ್ ಇ-ಕೆವೈಸಿ ಜೋಡಿಸಿದ ಬಯೊಮೆಟ್ರಿಕ್ ಗುರುತು ನೀಡಲಾಗುತ್ತಿದೆ. ಅದರ ಆಧಾರದಲ್ಲೇ ಡಿಜಿಟಲ್ ಸಹಿಯನ್ನೂ ಒದಗಿಸ ಲಾಗುತ್ತದೆ. ಆಧಾರ್ ಇ-ಕೆವೈಸಿ ಮತ್ತು ಡಿಜಿಟಲ್ ಸಹಿ ದಾಖಲಿಸಿದ ಬಳಿಕವೇ ಸಭಾ ನಡವಳಿಗಳನ್ನು ದಾಖಲಿಸುವಂತಹ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಆ್ಯಪ್ ಆಧಾರಿತ ಟ್ಯಾಕ್ಸಿ, ಸಿಟಿ ಟ್ಯಾಕ್ಸಿಗಳ ಪ್ರಯಾಣ ದರ ಪರಿಷ್ಕರಣೆ

ಟ್ಯಾಕ್ಸಿ: ಏಕರೂಪದ ದರ ನಿಗದಿ

ಪ್ರಜಾವಾಣಿ ವಾರ್ತೆ



ರಾಮಲಿಂಗಾ ರೆಡ್ಡಿ

ಬೆಂಗಳೂರು: ಸಿಟಿ ಟ್ಯಾಕ್ಸಿಗಳು ಮತ್ತು ಆ್ಯಪ್ ಆಧಾರಿತ ಟ್ಯಾಕ್ಸಿಗಳು ಹವಾಮಾನದ ವ್ಯತ್ಯಾಸ ಮತ್ತು ಜನದಟ್ಟಣೆ ಅನುಗುಣವಾಗಿ ಪ್ರಯಾಣ ದರ ಏರಿಕೆ, ಇಳಿಕೆ ಮಾಡುತ್ತಿರುವುದನ್ನು ತಪ್ಪಿಸಲು ಏಕರೂಪದ ದರ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಓಲಾ, ಉಬರ್ ಸಹಿತ ಎಲ್ಲ ಟ್ಯಾಕ್ಸಿಗಳಿಗೆ ಈ ನಿಯಮ ಅನ್ವಯ ಆಗಲಿದೆ.

ಮಳೆ ಬಂದಾಗ ದರ ಹೆಚ್ಚಳ ಮಾಡುವುದು, ಜನರು ಕಚೇರಿಗೆ, ಕೆಲಸಕ್ಕೆ ತೆರಳುವ ಸಮಯದಲ್ಲಿ ದರ ಹೆಚ್ಚಿಸುವುದು, ಜನದಟ್ಟಣೆ ಕಡಿಮೆ ಇರುವ ಸಮಯದಲ್ಲಿ ಟ್ಯಾಕ್ಸಿ ಪ್ರಯಾಣ ದರ ಇಳಿಕೆ ಮಾಡಲಾಗುತ್ತಿತ್ತು. ಈ ಬಗ್ಗೆ ಅನೇಕ ದೂರುಗಳು ಬಂದಿದ್ದವು. ಅದನ್ನು ತಪ್ಪಿಸುವುದಕ್ಕಾಗಿ ಏಕರೂಪ ದರ ನಿಗದಿ ಮಾಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಲ್ಲಿಯವರೆಗೆ ಸಿಟಿ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಅಗ್ರಿಗೇಟರ್ ಟ್ಯಾಕ್ಸಿಗಳ ದರ ಬೇರೆ ಬೇರೆಯಾಗಿದ್ದವು. ಶನಿವಾರ (ಫೆ.3) ಹೊರಡಿಸಿರುವ ಅಧಿಸೂಚನೆ ಪ್ರಕಾರ ದರಗಳನ್ನು ಒಂದೇ ಮಾದರಿಯಲ್ಲಿ ನಿಗದಿಪಡಿಸಲಾಗಿದೆ. ಏಕರೂಪ ಮತ್ತು ಪರಿಷ್ಕೃತ ದರಗಳು ತಕ್ಷಣದಿಂದಲೇ ರಾಜ್ಯದಾದ್ಯಂತ (ಬೆಂಗಳೂರು ನಗರ ಒಳಗೊಂಡಂತೆ) ಅನ್ವಯವಾಗಲಿದೆ.

ಅಧಿಸೂಚನೆಯಲ್ಲಿ ಏನಿದೆ?: ವಾಹನಗಳ ಬೆಲೆಗಳನ್ನು ಆಧರಿಸಿ ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಈ ವಿಭಾಗಗಳಿಗೆ ನಿಗದಿತ ದರ ನಿಗದಿ ಮಾಡಲಾಗಿದೆ. ವೈಯಕ್ತಿಕ ಲಗೇಜ್ ದರವು 120 ಕೆ.ಜಿ. ವರೆಗೆ ಉಚಿತವಾಗಿದೆ. ನಂತರದ ಪ್ರತಿ 30 ಕಿಲೋ ಗ್ರಾಂ ವರೆಗೆ ₹ 7 ನಿಗದಿ ಮಾಡಲಾಗಿದೆ.

ಕಾಯುವಿಕೆ ದರವು ಮೊದಲ 5 ನಿಮಿಷಗಳವರೆಗೆ ಉಚಿತವಾಗಿದ್ದು, ಬಳಿಕದ ಪ್ರತಿ ನಿಮಿಷಕ್ಕೆ ₹ 1 ನೀಡ ಬೇಕಾಗುತ್ತದೆ. ರಾತ್ರಿ 12ರಿಂದ ಬೆಳಿಗ್ಗೆ 6ರವರೆಗೆ ಸಂಚರಿಸುವ ಟ್ಯಾಕ್ಸಿಗಳಿಗೆ ಶೇ 10ರಷ್ಟು ಹೆಚ್ಚುವರಿ ದರ ನಿಗದಿ ಮಾಡಲಾಗಿದೆ.

ನಗರ ಟ್ಯಾಕ್ಸಿಯವರು, ಅಗ್ರಿಗೇಟರ್‌ಗಳು ಜಿಎಸ್‌ಟಿ ಮತ್ತು ಟೋಲ್ ಶುಲ್ಕವನ್ನು ಪ್ರಯಾಣಿಕರಿಂದ ವಸೂಲಿ ಮಾಡಬಹುದು. ಸಮಯಕ್ಕೆ ಅನುಗುಣವಾಗಿ ಏರಿಕೆ ಮಾಡದೆ, ಕಿಲೋ ಮೀಟರ್ ಆಧಾರದಲ್ಲಿ ನಿಗದಿಪಡಿಸಿರುವ ದರಗಳನ್ನು ಮಾತ್ರ ವಸೂಲಿ ಮಾಡಬೇಕು. ಅಧಿಕೃತ ವಾಗಿ ಯಾವುದೇ ದರವನ್ನು ಪ್ರಯಾಣಿಕರಿಂದ ಪಡೆಯಬಾರದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಪರಿಷ್ಕೃತ ಪ್ರಯಾಣ ದರ

ವಾಹನಗಳು	ನಿಗದಿತ ದರ (ಕನಿಷ್ಠ 4 ಕಿ.ಮೀ.ವರೆಗೆ)	ನಂತರದ ಪ್ರತಿ ಕಿ.ಮೀ.ಗೆ ದರ
₹10 ಲಕ್ಷಕ್ಕಿಂತ ಕಡಿಮೆ ಮೌಲ್ಯದ ವಾಹನ	₹100	₹24
₹10 ಲಕ್ಷ - ₹15 ಲಕ್ಷದವರೆಗಿನ ಮೌಲ್ಯದ ವಾಹನ	₹115	₹28
₹15 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ವಾಹನ	₹130	₹32

ಪ್ರತ್ಯೇಕ ಅಪಘಾತ: 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ/ಮಂಡ್ಯ/ಹಾಸನ: ರಾಜ್ಯದ ವಿವಿಧೆಡೆ ಭಾನುವಾರ ನಡೆದ ಪ್ರತ್ಯೇಕ ಮೂರು ಅಪಘಾತಗಳಲ್ಲಿ ಮೂವರು ಕೂಲಿ ಕಾರ್ಮಿಕ ಮಹಿಳೆಯರು ಸೇರಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಶೇಡಬಾಳ ಬಳಿ ಕಬ್ಬು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಟ್ರಾಲಿ ಪಲ್ಟಿಯಾಗಿ, ರಸ್ತೆಬದಿ ಸಾಗುತ್ತಿದ್ದ ಕೂಲಿಕಾರ ಮಹಿಳೆಯರಾದ ಮಲವ್ವ ರಾವಸಾಬ ಐನಾಪುರೆ(65), ಚಂಪಾ ಲಕ್ಷ್ಮಣ ತಳಕಟ್ಟಿ(45) ಹಾಗೂ ಭಾರತಿ ಸತ್ಯಪ್ಪ ಘಾಟಗೆ (42) ಸ್ಥಳದಲ್ಲಿಯೇ ಮೃತಪಟ್ಟರು. ಶೇಖವ್ವ ನರಸಪ್ಪ ನರಸಾಯಿ (45) ಗಂಭೀರವಾಗಿ ಗಾಯಗೊಂಡಿದ್ದು, ಮೀರಜ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಮಹಿಳೆಯರು ಹೊಲದಲ್ಲಿ ಜೋಳ ಕೀಳುವ ಕೆಲಸಕ್ಕೆ ಹೋಗಿ, ವಾಪಸ್ ಮನೆಗೆ ಬರುವಾಗ ಘಟನೆ ನಡೆದಿದೆ. ಅಪಘಾತದಿಂದ ಮೀರಜ್- ಜಮಖಂಡಿ ರಾಜ್ಯ ಹೆದ್ದಾರಿಯಲ್ಲಿ ಕೆಲಹೊತ್ತು ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಖಾನಾಪುರ ತಾಲ್ಲೂಕಿನ ಭಂಡರಗಾಳಿ ಗ್ರಾಮದ ಬಳಿ ಭಾನುವಾರ ಬೆಳಿಗ್ಗೆ ಜೀಪು-ಬೈಕ್ ನಡುವೆ ಡಿಕ್ಕಿ ಸಂಭವಿಸಿ, ಬೈಕ್ ಸವಾರರಾದ, ತಾಲ್ಲೂಕಿನ ಬೇಕವಾಡದ ರಾಮಲಿಂಗ ಮುತಗೇಕರ್(20), ಹನುಮಂತ ಪಾಟೀಲ(19) ಮೃತಪಟ್ಟಿದ್ದಾರೆ. ‘ಅವರಿಬ್ಬರೂ ಸೈನಿಕ ತರಬೇತಿಗಾಗಿ ಬೆಳಗಾವಿ ತಾಲ್ಲೂಕಿನ ಸಂದಿಹಳ್ಳಿಗೆ ಹೊರಟಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಅಕ್ಕಿಹೆಬ್ಬಾಳು ಸಮೀಪ ಬೆಂಗಳೂರು-ಜಲಸೂರು ಹೆದ್ದಾರಿಯ ಹೇಮಾವತಿ ಸೇತುವೆ ಬಳಿ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಮಗುಚಿ ಬಿದ್ದು, ಮೂವರು ಯುವಕರು ಸ್ಥಳದಲ್ಲೇ ಸಾವಿಗೀಡಾದರು.

ಕೆ.ಆರ್. ಪೇಟೆ ಪಟ್ಟಣದ ನಿವಾಸಿ, ಭಗವಾನ್ ಅಂಗಡಿಯ ಚೇತನ್‌ಕುಮಾರ್ ಪುತ್ರ ಅನಿಕೇತ್ (21), ಅಗ್ರಹಾರದ ರಾಮಣ್ಣ ಅವರ ಪುತ್ರ ಚಿರಂಜೀವಿ (22) ಮತ್ತು ಸೋಮಶೇಖರ್ ಪುತ್ರ ಪವನ್ ಶೆಟ್ಟಿ ಮೃತರು. ಗಾಯಗಳಾಗಿದ್ದು, ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ನಾಲ್ವರು ಶನಿವಾರ ಮಧ್ಯರಾತ್ರಿ ಅಕ್ಕಿಹೆಬ್ಬಾಳು ಕಡೆಯಿಂದ ಕೆ.ಆರ್.ಪೇಟೆಯತ್ತ ಬರುತ್ತಿದ್ದರು.

ಮನೆ, ಶಾಲೆ ಆವರಣಕ್ಕೆ ನುಗ್ಗಿದ ಬಸ್: ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್, ಸಕಲೇಶಪುರ ತಾಲ್ಲೂಕಿನ ಬಾಗೆ ಗ್ರಾಮದ ಬಳಿ ಭಾನುವಾರ ಮುಂಜಾನೆ ರಾಷ್ಟ್ರೀಯ ಹೆದ್ದಾರಿ ಪಕ್ಕದ ಮನೆಯ ಗೋಡೆ ಮತ್ತು ಶಾಲಾ ಕಾಂಪೌಂಡ್‌ಗೆ ಡಿಕ್ಕಿಯಾಗಿ ವ್ಯಕ್ತಿಯೊಬ್ಬರು ಮೃತಪಟ್ಟರು. ಚನ್ನರಾಯಪಟ್ಟಣ ತಾಲ್ಲೂಕಿನ ಉದಯಪುರ ಗ್ರಾಮದ ಅಮೃತ್‌ರಾಜ್ (34) ಮೃತರು.

ಬಸ್‌ನಲ್ಲಿದ್ದ 10 ಮಂದಿ ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ‘ಬಸ್‌ನ ಆಕ್ಸಲ್ ತುಂಡಾದ ಪರಿಣಾಮ ಈ ಘಟನೆ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.



ಕಾಗವಾಡ ತಾಲ್ಲೂಕಿನ ಶೇಡಬಾಳ ಪಟ್ಟಣದ ಹತ್ತಿರ ಪಲ್ಟಿಯಾದ ಟ್ರ್ಯಾಕ್ಟರ್ ಟ್ರಾಲಿ

ಸುದ್ದಿ 2 ನಿಮಿಷ

7 ಸಾವಿರ ಸಹಾಯಕ ಪ್ರಾಧ್ಯಾಪಕರ ನೇಮಕ: ಡಾ.ಎಂ.ಸಿ. ಸುಧಾಕರ್

ಚಿಂತಾಮಣಿ (ಚಿಕ್ಕಬಳ್ಳಾಪುರ): ರಾಜ್ಯದಾದ್ಯಂತ ಪ್ರಥಮ ದರ್ಜೆ ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಏಳು ಸಾವಿರ ಮಂದಿಯನ್ನು ನೇಮಕ ಮಾಡಿಕೊಳ್ಳಲು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದ್ದಾರೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಶನಿವಾರ ನಡೆದ ಕಾಲೇಜು ಅಭಿವೃದ್ಧಿ ಸಮಿತಿ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ಕಳೆದ ಐದು ವರ್ಷದಲ್ಲಿ ವಿದ್ಯಾರ್ಥಿಗಳ ಮತ್ತು ಕಾಲೇಜುಗಳ ಸಂಖ್ಯೆ ಹೆಚ್ಚಾಗಿದೆ. ಹೊಸ ಕೋರ್ಸ್ ಆರಂಭಿಸಲಾಗಿದೆ. ಆದರೆ ಬೋಧಕ ವರ್ಗ ಮತ್ತು ಸಿಬ್ಬಂದಿಯನ್ನು ಮಾತ್ರ ನೇಮಕ ಮಾಡಿಲ್ಲ. ಹೀಗಾಗಿ ಹೆಚ್ಚಿನ ಸರ್ಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ ಎಂದರು.

ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು ಎಂದು ಸದ್ಯ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಶೀಘ್ರ ಚಾಲನೆ ದೊರೆಯಲಿದೆ ಎಂದು ಹೇಳಿದರು.



ವಿದ್ಯಾರ್ಥಿನಿಗೆ ಕಿರುಕುಳ ಕಾನ್‌ಸ್ಟೆಬಲ್ ಅಮಾನತು

ನರೇಗಲ್ (ಗದಗ ಜಿಲ್ಲೆ): ನರ್ಸಿಂಗ್ ವಿದ್ಯಾರ್ಥಿನಿಯೊಬ್ಬರಿಗೆ ವಾಟ್ಸ್‌ಆ್ಯಪ್ ಸಂದೇಶಗಳ ಮೂಲಕ ಕಿರುಕುಳ ನೀಡುತ್ತಿದ್ದ ಆರೋಪದ ಮೇಲೆ ನರೇಗಲ್ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಶಂಕರ್ ನಾಲ್ವಾರ್ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಭಾನುವಾರ ಅಮಾನತುಗೊಳಿಸಿದ್ದಾರೆ.

ವಿದ್ಯಾರ್ಥಿನಿಯು ಕಾಲೇಜಿಗೆ ತೆರಳುವ ಮಾರ್ಗದಲ್ಲಿ ಆರೋಪಿಯು ಪ್ರತಿದಿನ ಕಿರುಕುಳ ನೀಡುತ್ತಿದ್ದ. ಅಲ್ಲದೇ, ಅವರ ಮೊಬೈಲ್‌ಗೆ ನಿರಂತರ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸುತ್ತಿದ್ದರು ಎನ್ನಲಾಗಿದೆ. ಇದರಿಂದ ರೋಸಿಹೋದ ವಿದ್ಯಾರ್ಥಿನಿಯು ಕೆಲ ಸುದ್ದಿ ವಾಹಿನಿಗಳೆದುರು ಅಳಲು ತೋಡಿಕೊಂಡಿದ್ದರು. ವರದಿ ಪ್ರಸಾರವಾಗುತ್ತಿದ್ದಂತೆ ಎಸ್‌ಪಿ ಕಚೇರಿಯಿಂದ ವಿದ್ಯಾರ್ಥಿನಿಯನ್ನು ಸಂಪರ್ಕಿಸಿ ಮಾಹಿತಿ ಪಡೆದು ಇಲಾಖೆ ತನಿಖೆ ನಡೆಸಲು ಕ್ರಮ ಜರುಗಿಸಲಾಗಿದೆ.

‘ಆರೋಪಿಯನ್ನು ಅಮಾನತುಗೊಳಿಸಲಾಗಿದೆ. ಪ್ರಕರಣ ಕುರಿತು ತನಿಖೆ ನಡೆಸುವಂತೆ ಡಿವೈಎಸ್‌ಪಿ ಮತ್ತು ಸಿಪಿಐ ಅವರಿಗೆ ಸೂಚಿಸಲಾಗಿದೆ. ಈ ಬಗ್ಗೆ ಪೂರ್ಣ ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಮಾದಕ ವಸ್ತು ಸಾಗಣೆ: ಮೂವರಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮಾರಾಟಕ್ಕೆ ಮಾದಕದ್ರವ್ಯ ಸಾಗಿಸುತ್ತಿದ್ದ ಮೂವರು ಅಪರಾಧಿಗಳಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಲಯವು ತಲಾ 10 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹ 1 ಲಕ್ಷ ದಂಡ ವಿಧಿಸಿ ಶನಿವಾರ ಆದೇಶಿಸಿದೆ.

ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಅಹಮ್ಮದ್ ಕಬೀರ್ (37), ಮಹಮ್ಮದ್ ಮುಜಮಿಲ್ (37) ಹಾಗೂ ಅಬ್ದುಲ್ ಖಾದರ್ (37) ಶಿಕ್ಷೆಗೆ ಗುರಿಯಾದವರು.

2022ರ ಆಗಸ್ಟ್ 29ರಂದು ಭಾಗಮಂಡಲ- ಮಡಿಕೇರಿ ರಸ್ತೆಯಲ್ಲಿರುವ ಐ.ಬಿ.ಜಂಕ್ಷನ್ ಸಮೀಪ ಕಾರಿನಲ್ಲಿ ತೆರಳುತ್ತಿದ್ದಾಗ ಅವರನ್ನು ಬಂಧಿಸಲಾಗಿತ್ತು.

ಭಾಗಮಂಡಲ ಪೊಲೀಸ್ ಠಾಣೆಯ ಎಸ್‌ಐ ಪ್ರಿಯಾಂಕಾ, ಎಎಸ್‌ಐ ಬೆಳ್ಳಿಯಪ್ಪ, ಸಿಬ್ಬಂದಿ ಮಹದೇವಸ್ವಾಮಿ ದಾಳಿ ನಡೆಸಿ, ಅವರಿಂದ 1 ಕೆ.ಜಿ 160 ಗ್ರಾಂ. ತೂಕದ ಹ್ಯಾಶಿಷ್ ಆಯಿಲ್ ವಶಪಡಿಸಿಕೊಂಡಿದ್ದರು. ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಜಿ.ಅಶ್ವಿನಿ ವಾದಿಸಿದ್ದರು.

ಶಿಫಾರಸಿಗಿಂತ ಅಧಿಕ ಹಣ ಮಂಜೂರು

ಒಂದನೇ ಪುಟದಿಂದ

ಕಳೆದ ಸಾಲಿನಲ್ಲಿ ಜಿಲ್ಲಾ ಸಮಿತಿ ಶಿಫಾರಸು ಮಾಡಿದ ಅನುದಾನಕ್ಕಿಂತ ₹1 ಲಕ್ಷದಿಂದ ₹2 ಲಕ್ಷದವರೆಗೆ ಹೆಚ್ಚುವರಿ ಅನುದಾನವನ್ನು 20ಕ್ಕೂ ಅಧಿಕ ಸಂಸ್ಥೆಗಳಿಗೆ ಮಂಜೂರು ಮಾಡಲಾಗಿದೆ. ಇಲಾಖೆಯ ಈ ಕ್ರಮ ಕಲಾವಿದರ ಅಸಮಾಧಾನಕ್ಕೆ ಕಾರಣವಾಗಿದೆ.

ಲೋಕಾಯುಕ್ತಕ್ಕೆ ದೂರು: ಜಿಲ್ಲಾ ಸಮಿತಿ ಶಿಫಾರಸು ಮಾಡಿದ ಅನುದಾನಕ್ಕಿಂತ ಅಧಿಕ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಕಲಾವಿದರು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಜಿಲ್ಲಾ ಸಮಿತಿ ಶಿಫಾರಸು ಮಾಡಿದ ಅನುದಾನಕ್ಕಿಂತ ಹೆಚ್ಚುವರಿ ಅನುದಾನ ನೀಡಿರುವುದಕ್ಕೆ ಸೂಕ್ತ ತನಿಖೆ ನಡೆಸಬೇಕೆಂದು ಆಗ್ರಹಿಸಿ, ದಾಖಲೆಗಳನ್ನು ಸಲ್ಲಿಸಿದ್ದಾರೆ. ₹2 ಲಕ್ಷದಿಂದ ₹3 ಲಕ್ಷದವರೆಗೆ ಅನುದಾನಕ್ಕೆ ಶಿಫಾರಸು ಮಾಡಲಾಗಿದ್ದ ಸಂಘ–ಸಂಸ್ಥೆಗಳಿಗೆ, ₹5 ಲಕ್ಷದವರೆಗೆ ಅನುದಾನ ಮಂಜೂರು ಮಾಡಿರುವ ಸಂಘ–ಸಂಸ್ಥೆಗಳ ಪಟ್ಟಿಯನ್ನೂ ದೂರಿನ ಜತೆಗೆ ಒದಗಿಸಿದ್ದಾರೆ.

> **ಧನಸಹಾಯ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿಲ್ಲ. ದಾಖಲಾತಿ ಸರಿಯಿಲ್ಲ ಎಂಬ ಕಾರಣ ನೀಡಿ ಅರ್ಜಿ ತಿರಸ್ಕರಿಸಲಾಗುತ್ತಿದೆ. ಪ್ರಭಾವಿಗಳಿಗೆ ಅನುದಾನ ಸಿಗುತ್ತಿದೆ**
> **ವೈ.ಕೆ. ಮುದ್ದುಕೃಷ್ಣ,** ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ

‘ಇಲಾಖೆಯ ಈ ರೀತಿಯ ನಡೆಯಿಂದ ನಿಯಮಿತವಾಗಿ ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಿರುವ ಸಂಘ–ಸಂಸ್ಥೆಗಳು ಧನಸಹಾಯ ಯೋಜನೆಯ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿವೆ. ಪ್ರಭಾವ ಬಳಸಿದವರಿಗೆ ಅನುದಾನ ಎಂಬ ವಾತಾವರಣ ನಿರ್ಮಾಣವಾಗಿದೆ. ನಿಯಮಿತವಾಗಿ ಕಾರ್ಯಕ್ರಮ ಗಳನ್ನು ನಡೆಸಿ, ಧನಸಹಾಯಕ್ಕೆ ಅರ್ಜಿ ಸಲ್ಲಿಸಿದವರಿಗೆ ಆರ್ಥಿಕ ನೆರವಿನ ಖಚಿತತೆ ಇಲ್ಲವಾಗಿದೆ’ ಎಂದು ಕಲಾವಿದ ಜಯಸಿಂಹ ಎಸ್. ಬೇಸರ ವ್ಯಕ್ತಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರನ್ನು ಪ್ರತಿಕ್ರಿಯೆಗಾಗಿ ಸಂಪರ್ಕಿಸಲು ಯತ್ನಿಸಿದರೂ ಅವರು ಲಭ್ಯರಾಗಿಲ್ಲ.

ಜೆಡಿಎಸ್‌ನಿಂದ ಉಸ್ತುವಾರಿಗಳ ನೇಮಕ

ಬೆಂಗಳೂರು: ವಿಧಾನ ಪರಿಷತ್‌ಗೆ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ನಡೆಯಲಿರುವ ಉಪ ಚುನಾವಣೆ ಎದುರಿಸಲು ಬಿಬಿಎಂಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೂ ಜೆಡಿಎಸ್ ಉಸ್ತುವಾರಿಗಳನ್ನು ನೇಮಿಸಿದೆ.

ಎಚ್.ಎಂ. ರಮೇಶ್ ಗೌಡ ಅವರನ್ನು ಬೆಂಗಳೂರು ಶಿಕ್ಷಕರ ಕ್ಷೇತ್ರದ ಮೇಲುಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಪ್ರತ್ಯೇಕ ಉಸ್ತುವಾರಿಗಳನ್ನಾಗಿ ಭಾನುವಾರ ನೇಮಕ ಮಾಡಲಾಗಿದೆ.

ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿರುವ ಜೆಡಿಎಸ್‌ನ ಎ.ಪಿ. ರಂಗನಾಥ್ ಗೆಲುವಿಗಾಗಿ ಶ್ರಮಿಸುವಂತೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದ್ದಾರೆ.

1.37 ಲಕ್ಷ ಕಡತ ಬಾಕಿ

ಒಂದನೇ ಪುಟದಿಂದ

ಕೆಲವು ಇಲಾಖೆಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಡತಗಳು ವಿಲೇವಾರಿ ಆಗದೆ ಉಳಿದಿರುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಅಂತಹ ಇಲಾಖೆಗಳ ಕಾರ್ಯವೈಖರಿ ಬಗ್ಗೆ ಮುಖ್ಯಮಂತ್ರಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಿರುವ ವಿಷಯದ ಕುರಿತು ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಮರುದಿನವೇ (ಫೆ. 2) ಟಿಪ್ಪಣಿ ಕಳುಹಿಸಿರುವ ಮುಖ್ಯ ಕಾರ್ಯದರ್ಶಿ, ಕಡತಗಳ ವಿಲೇವಾರಿ ಆಗದಿರುವ ವಿಚಾರದಲ್ಲಿ ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿರುವುದನ್ನೂ ಉಲ್ಲೇಖಿಸಿದ್ದಾರೆ. ಖುದ್ದು ಗಮನಹರಿಸಿ, ಫೆಬ್ರುವರಿ ಅಂತ್ಯಕ್ಕೆ ಕನಿಷ್ಠ ಶೇಕಡ 10ರಷ್ಟು ಕಡತಗಳನ್ನು ವಿಲೇವಾರಿ ಮಾಡಬೇಕು ಎಂದು ಗುರಿ ನಿಗದಿಪಡಿಸಿದ್ದಾರೆ.

ಅಲ್ಲದೆ, ಎಲ್ಲ ಇಲಾಖೆಗಳ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳೊಂದಿಗೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಸಭೆ ನಡೆಸಿ, ಕಡತ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣ ಮತ್ತು ವಿಲೇವಾರಿ ಪ್ರಕ್ರಿಯೆಯಲ್ಲಿ ಏನಾದರೂ ತೊಡಕುಗಳಿವೆಯೇ ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ತ್ವರಿತವಾಗಿ ವಿಲೇವಾರಿ ಮಾಡಿ ಪ್ರಗತಿ ಸಾಧಿಸಿದ ವರದಿಯನ್ನು ಸಲ್ಲಿಸಬೇಕು ಎಂದೂ ಅವರು ಸೂಚನೆ ನೀಡಿದ್ದಾರೆ.

ಪರೀಕ್ಷಾ ವೆಚ್ಚದ ಶುಲ್ಕ: ಖಂಡನೆ

ಪ್ರಜಾವಾಣಿ ವಾರ್ತೆ



ಲೋಕೇಶ್ ತಾಳಿಕಟ್ಟೆ

ಬೆಂಗಳೂರು: ‘ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷಾ ವೆಚ್ಚದ ಶುಲ್ಕವಾಗಿ ಪ್ರತಿ ವಿದ್ಯಾರ್ಥಿಯಿಂದ ₹ 50 ಸಂಗ್ರಹಕ್ಕೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಹೊರಡಿಸಿರುವ ಸುತ್ತೋಲೆಯು ‘ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ’ಯ ವಿರೋಧಿ ನೀತಿಯಾಗುತ್ತದೆ’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಅಭಿಪ್ರಾಯಪಟ್ಟಿದೆ.


‘ಈ ಸುತ್ತೋಲೆಯನ್ನು ವಾಪಸ್ ಪಡೆಯಬೇಕು. ಈ ವಿಚಾರದಲ್ಲಿ ಮಧ್ಯಪ್ರವೇಶಿಸಿ ಶಿಕ್ಷಣ ಸಚಿವರಿಗೆ ತಿಳಿ ಹೇಳಬೇಕು. ಅಲ್ಲದೆ, ಈ ಕುರಿತು ಸಂಬಂಧಪಟ್ಟ ಸಂಘಸಂಸ್ಥೆಗಳ ಜೊತೆಗೆ ಸಭೆ ನಡೆಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿಗೆ ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಪತ್ರ ಬರೆದಿದ್ದಾರೆ

‘ಪೂರ್ವಸಿದ್ಧತಾ ಪರೀಕ್ಷಾ ವೆಚ್ಚದ ಶುಲ್ಕದ ವಿಚಾರದಲ್ಲಿ ಕಳೆದ ವರ್ಷವೇ ನಮ್ಮ ಸಂಘ ವಿರೋಧ ವ್ಯಕ್ತಪಡಿಸಿದೆ. ಶುಲ್ಕ ವಿನಾಯಿತಿಗೆ ಆಗ್ರಹಿಸಿ ಕಳೆದ ನಾಲ್ಕು ವರ್ಷದಿಂದ ಮನವಿ ಸಲ್ಲಿಸುತ್ತಲೇ ಬಂದಿದ್ದೇವೆ. 9ನೇ ತರಗತಿಯಿಂದ 10ನೇ ತರಗತಿಗೆ ಸಾವಿರಾರು ವಿದ್ಯಾರ್ಥಿಗಳು ನೋಂದಣಿಯನ್ನೇ ಮಾಡಿಕೊಳ್ಳು-ವುದಿಲ್ಲ. ಶುಲ್ಕ ಪಾವತಿಸಲಾಗದೆ ಸಾವಿರಾರು ವಿದ್ಯಾರ್ಥಿಗಳು ಪ್ರತಿ ವರ್ಷ ಪರೀಕ್ಷೆಯಿಂದ ದೂರ ಉಳಿಯುತ್ತಿರುವ ವಿಷಯವನ್ನೂ ಬಹಿರಂಗಪಡಿಸಿದ್ದೇವೆ’ ಎಂದು ಪತ್ರದಲ್ಲಿ ತಾಳಿಕಟ್ಟೆ ತಿಳಿಸಿದ್ದಾರೆ.

‘ಸರ್ಕಾರಿ ಶಾಲೆಗಳಲ್ಲಿ ಕನಿಷ್ಠ ಮೂಲಸೌಕರ್ಯಗಳಿಲ್ಲ. ಶಿಕ್ಷಕರೂ ಇಲ್ಲ. ಈ ಪರಿಸ್ಥಿತಿ ನೋಡಿ 50 ಲಕ್ಷಕ್ಕೂ ಹೆಚ್ಚು ಮಕ್ಕಳು ಗುಣಮಟ್ಟದ ಶಿಕ್ಷಣ ಬಯಸಿ ಖಾಸಗಿ ಶಾಲೆಗಳ ಕಡೆಗೆ ಮುಖ ಮಾಡಿದ್ದಾರೆ. ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾದರೆ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಆಗಲಿದೆ. ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಅವರು ಒತ್ತು ನೀಡುತ್ತಾರೆ. ಎಲ್ಲ ಮಕ್ಕಳಿಗೆ ಅಕ್ಷರ ದಾಸೋಹ ಮಾಡುತ್ತಾರೆ ಎಂಬ ನಂಬಿಕೆಯು ದಿನ ಕಳೆದಂತೆ ಹುಸಿ ಆಗುತ್ತಿರುವುದು ಆತಂಕ ಹೆಚ್ಚಿಸಿದೆ’ ಎಂದಿದ್ದಾರೆ.

ನಿಧನ ವಾರ್ತೆ

ಬೌದ್ಧ ಧರ್ಮಗುರು ಡೊಬೂಮ್



ಮುಂಡಗೋಡ: ಹಿರಿಯ ಬೌದ್ಧ ಧರ್ಮಗುರು ಎಲ್. ಟಿ. ಡೊಬೂಮ್ ತಲ್ಕು (82) ಆರು ದಿನಗಳ ಹಿಂದೆ ನಿಧನರಾಗಿದ್ದು, ಅವರ ಅಂತ್ಯಕ್ರಿಯೆ ಭಾನುವಾರ ತಾಲ್ಲೂಕಿನ ಟಿಬೆಟಿಯನ್ ಕ್ಯಾಂಪ್ ನಂ.2ರ ಲೋಸಲಿಂಗ್ ಬೌದ್ಧ ಮಂದಿರದ ಆವರಣದಲ್ಲಿ ನಡೆಯಿತು.

ಚೀನಾ ಆಕ್ರಮಣದಿಂದ ಟಿಬೆಟ್ ತೊರೆದು ಭಾರತಕ್ಕೆ ತಮ್ಮ 17ನೇ ವಯಸ್ಸಿನಲ್ಲಿಯೇ ಅವರು ಬಂದಿದ್ದರು. 1972ರಲ್ಲಿ ಬೌದ್ಧ ತತ್ವಶಾಸ್ತ್ರ ದಲ್ಲಿ ಗೆಶೆ ಆಚಾರ್ಯ ಪದವಿ ಪಡೆದುಕೊಂಡಿದ್ದರು. ದೆಹಲಿಯ ಟಿಬೆಟ್ ಹೌಸ್ ನಿರ್ದೇಶಕರಾಗಿ 30 ವರ್ಷಗಳಿಂದ ಕೆಲಸ ಮಾಡಿದ್ದರು. ಬೌದ್ಧ ಧರ್ಮೀಯರ ಪರಮೋಚ್ಛ ನಾಯಕ ದಲೈಲಾಮಾ ಅವರ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದರು. ಕಾಂಗ್ರೆಸ್ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಬೌದ್ಧಧರ್ಮದ ಕುರಿತು ಬೋಧನೆ ಮಾಡಿದ್ದರು.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

‘ಅನ್ಯಾಯದ ವಿರುದ್ಧ ಧ್ವನಿಯೆತ್ತದೆ ವಿಧಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಧ್ವನಿ ಎತ್ತದೆ ನಮಗೆ ಬೇರೆ ವಿಧಿಯೇ ಇಲ್ಲ. ದೆಹಲಿಯಲ್ಲಿ ಬುಧವಾರ (ಫೆಬ್ರುವರಿ 7) ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಬಿಜೆಪಿ ಮತ್ತು ಜೆಡಿಎಸ್ ಸಂಸದರಿಗೂ ಮನವಿ ಮಾಡುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ರಾಜ್ಯದ ಬರ ಪರಿಸ್ಥಿತಿ ಬಗ್ಗೆ ಒಂದು ದಿನವೂ ಕೇಂದ್ರ ಸರ್ಕಾರದ ಬಳಿ ಸಭೆ ಮಾಡದ ಬಿಜೆಪಿ ನಾಯಕರು ನಮ್ಮ ಸರ್ಕಾರದ ವಿರುದ್ಧ ಮಾತನಾಡುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮನಮೋಹನ್ ಸಿಂಗ್ ಅವರ ಸರ್ಕಾರ ಹೋಗಿ 10 ವರ್ಷಗಳಾಗಿವೆ. ಅವರಿಗೆ ಜ್ಞಾನ ಇರಬೇಕು. ದೇಶದಲ್ಲಿ ವಿದ್ಯಾವಂತರಿಲ್ಲದಿದ್ದರೂ ಪ್ರಜ್ಞಾವಂತರು ಇರಬೇಕು. 10 ವರ್ಷಗಳಿಂದ ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಮಾತೆತ್ತಿದರೆ ‘ಡಬಲ್ ಎಂಜಿನ್’ ಎಂದು ಹೇಳುತ್ತಿದ್ದ ಬಿಜೆಪಿಯವರು ಒಂದು ದಿನವೂ ರಾಜ್ಯದ ಬರಗಾಲದ ಬಗ್ಗೆ ಮಾತನಾಡಿಲ್ಲ’ ಎಂದು ಟೀಕಿಸಿದರು.

‘ರೈತರಿಗೆ ರಾಜ್ಯ ಸರ್ಕಾರ ಏನೂ ಕೊಟ್ಟಿಲ್ಲ ಎಂದು ಬಿಜೆಪಿಯವರು ದೂರುತ್ತಾರೆ. ಮೊದಲ ಬಾರಿಗೆ ನಮ್ಮ ಸರ್ಕಾರ ರೈತರ ಖಾತೆಗೆ ಬರ ಪರಿಹಾರವಾಗಿ ₹ 2 ಸಾವಿರ ಜಮೆ ಮಾಡಿದೆ. ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸಲು ನಾವು ದೆಹಲಿಗೆ ಹೊರಟಿದ್ದೇವೆಂದು ಈಗ ಕೇರಳದವರೂ ಹೊರಟಿದ್ದಾರೆ’ ಎಂದರು.

ಭದ್ರಾ ಮೇಲ್ದಂಡೆ: ‘ಕಳೆದ ಬಾರಿಯ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭದ್ರಾ ಮೇಲ್ದಂಡೆ ಯೋಜನೆಗೆ ₹ 5,300 ಕೋಟಿ ಕೊಡುತ್ತೇವೆಂದು ಘೋಷಿಸಿದ್ದರು. ಆದರೆ, ಈವರೆಗೂ ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ಮೆಟ್ರೊ ವಿಚಾರದಲ್ಲಿ ಏನಾದರೂ ಕ್ರಮ ಕೈಗೊಂಡಿದ್ದಾರೆಯೇ? ಅದೂ ಇಲ್ಲ’ ಎಂದು ಟೀಕಿಸಿದರು.

‘ಮೋದಿ ಗ್ಯಾರಂಟಿ ಶ್ರೇಷ್ಠ’ ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಲಾಟರಿ ಹೊಡೆದಂತೆ ಅವರು ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರ ತಂದೆಯ ಆಸ್ತಿ ಪಾಲು ಸಿಕ್ಕಂತೆ ಆ ಸ್ಥಾನ ಸಿಕ್ಕಿದೆ. ಹೀಗಾಗಿ ಅವರು ಮಾತನಾಡುತ್ತಿದ್ದಾರೆ. ನಾನು ಅವರ ಉತ್ಸಾಹಕ್ಕೆ ಧಕ್ಕೆ ತರುವುದಿಲ್ಲ. ಗ್ಯಾರಂಟಿ ಯೋಜನೆಗಳ ಬಗ್ಗೆ ಮೋದಿ ಏನೆಲ್ಲಾ ಮಾತಾಡಿದ್ದರು. ಈಗ ಗ್ಯಾರಂಟಿ ಹೆಸರಲ್ಲಿ ಪ್ರಚಾರ ಮಾಡುತ್ತಿದ್ದಾರೆ’ ಎಂದು ತಿರುಗೇಟು ನೀಡಿದರು.

ತೆರಿಗೆ ಹಂಚಿಕೆ: ಇಂದು ಸಿ.ಎಂ ಮಾಹಿತಿ

ಕೇಂದ್ರದಿಂದ ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ತೆರಿಗೆ ಪಾಲಿನ ಕುರಿತು ಸಮಗ್ರ ಮಾಹಿತಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧರಿಸಿದ್ದಾರೆ. ಈ ಉದ್ದೇಶದಿಂದ ಅವರು ವಿಧಾನಸೌಧದಲ್ಲಿ ಸೋಮವಾರ (ಫೆ.5) ಸುದ್ದಿಗೋಷ್ಠಿ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಕೇಂದ್ರಕ್ಕೆ ಅತೀ ಹೆಚ್ಚು ತೆರಿಗೆ ನೀಡುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೆ, ಅದಕ್ಕೆ ತಕ್ಕಂತೆ ಕೇಂದ್ರದಿಂದ ಅನುದಾನ ಸಿಗುತ್ತಿಲ್ಲ. 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ಮೊತ್ತವೂ ರಾಜ್ಯಕ್ಕೆ ಬಂದಿಲ್ಲ. ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವೂ ಸೇರಿದಂತೆ ಎಲ್ಲ ವಿಷಯಗಳ ಕುರಿತು ಮುಖ್ಯಮಂತ್ರಿ ಅಂಕಿಅಂಶಗಳ ಸಹಿತ ಮಾಹಿತಿ ನೀಡಲಿದ್ದಾರೆ ಎಂದೂ ಮೂಲಗಳು ಹೇಳಿವೆ.

‘ನನ್ನ ತೆರಿಗೆ ನನ್ನ ಹಕ್ಕು’ ಅಭಿಯಾನಕ್ಕೆ ಮುಖ್ಯಮಂತ್ರಿ ಬೆಂಬಲ

ಬೆಂಗಳೂರು: ‘ತೆರಿಗೆ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ’ ಎಂದು ಆರೋಪಿಸಿ ‘ಎಕ್ಸ್’ ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲಿ ‘ನನ್ನ ತೆರಿಗೆ ನನ್ನ ಹಕ್ಕು’ ಘೋಷ ವಾಕ್ಯದಡಿ ನಡೆಯುತ್ತಿರುವ ಅಭಿಯಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಕನ್ನಡಿಗರು ಬೆವರು ಸುರಿಸಿ ಕಟ್ಟುವ ತೆರಿಗೆ ನಮ್ಮವರ ಕಷ್ಟಕಾಲಕ್ಕೆ ಉಪಯೋಗಕ್ಕೆ ಬರದೆ ಉತ್ತರದ ರಾಜ್ಯಗಳ ಪಾಲಾಗುತ್ತಿದೆ. ದಕ್ಷಿಣ ಭಾರತದ ರಾಜ್ಯಗಳ ತೆರಿಗೆಯ ಋಣದಲ್ಲಿರುವ ಉತ್ತರದ ರಾಜ್ಯಗಳು ಎಂದಿಗೂ ನಮಗೆ ಮಾದರಿ ಆಗಲಾರವು. ಈ ಹುಸಿ ಕಲ್ಪನೆಯಿಂದ ಎಲ್ಲರೂ ಹೊರ ಬರಬೇಕು. ಶ್ರಮದಿಂದ ಸದೃಢ ರಾಷ್ಟ್ರ ಕಟ್ಟುತ್ತಿರುವ ಕರ್ನಾಟಕವೇ ಭಾರತಕ್ಕೆ ಮಾದರಿ’ ಎಂದಿದ್ದಾರೆ.

‘ಕೂತು ತಿನ್ನುವವನಿಗೆ ಮೃಷ್ಟಾನ್ನ ಕೊಟ್ಟು, ದುಡಿಯುವ ಮಗನಿಗೆ ಬರೆ ಎಳೆದರು ಎಂಬಂತಿದೆ ದೇಶದಲ್ಲಿ ಕನ್ನಡಿಗರ ಸ್ಥಿತಿ. ಇದು ಬದಲಾಗಲೇಬೇಕು. ನ್ಯಾಯಕ್ಕಾಗಿ ಧ್ವನಿಯೆತ್ತಿ ಅಭಿಯಾನ ನಡೆಸುತ್ತಿರುವವರ ಜೊತೆ ನಾನಿದ್ದೇನೆ. ಎಲ್ಲರ ಧ್ವನಿ ಒಟ್ಟಾದರೆ ದಿಲ್ಲಿವರೆಗೆ ಕೇಳುವುದು ಶತಸಿದ್ಧ’ ಎಂದೂ ಹೇಳಿದ್ದಾರೆ.

ರಾಜ್ಯದಲ್ಲಿ ದಾನ, ಕೇಂದ್ರದ ಬಳಿ ಭಿಕ್ಷೆ: ಮುನಿರತ್ನ ಟೀಕೆ

ತುಮಕೂರು: ‘ಕಾಂಗ್ರೆಸ್ ನಾಯಕರು ಗ್ಯಾರಂಟಿ ಹೆಸರಲ್ಲಿ ಇಲ್ಲಿ ದಾನ ಮಾಡಿ, ಕೇಂದ್ರದ ಬಳಿ ಭಿಕ್ಷೆ ಬೇಡುತ್ತಿದ್ದಾರೆ’ ಎಂದು ಶಾಸಕ ಮುನಿರತ್ನ ಟೀಕಿಸಿದರು.

‘ಗ್ಯಾರಂಟಿ ಮುಂದುವರಿಸಲು ಸರ್ಕಾರದ ಬಳಿ ಹಣವಿಲ್ಲ. ಮುಂದಿನ ಲೋಕಸಭಾ ಚುನಾವಣೆ ವೇಳೆ ಇನ್ನಷ್ಟು ಗ್ಯಾರಂಟಿ ಘೋಷಿಸಲು ಕೇಂದ್ರದಿಂದ ಹಣ ಕೇಳುತ್ತಿದ್ದಾರೆ. ಲೋಕಸಭೆ ಚುನಾವಣೆ ಬಳಿಕ ಗ್ಯಾರಂಟಿ ನಿಲ್ಲಿಸುತ್ತಾರೆ’ ಎಂದರು.

ತಾಲ್ಲೂಕಿನ ಗೂಳೂರು ಹೋಬಳಿಯ ಗೌರಿಪುರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಂದ್ರದಿಂದ ಬಂದ ಅನುದಾನ ಹಣದ ಲೆಕ್ಕ ಕೊಡದ ರಾಜ್ಯ ಸರ್ಕಾರ ಪ್ರತಿಭಟನೆ ಹೆಸರಿನಲ್ಲಿ ಚುನಾವಣೆ ನಾಟಕ ಶುರು ಮಾಡಿದೆ’ ಎಂದು ಅವರು ವಾಗ್ದಾಳಿ ನಡೆಸಿದರು. ‘ಸ್ವಾತಂತ್ರ್ಯನಂತರ ಮಹಮ್ಮದ್ ಅಲಿ ಜಿನ್ನಾ ದೇಶ ವಿಭಜನೆ ಮಾಡಿದರು. ಜಿನ್ನಾ ಪ್ರತಿರೂಪದಂತಿರುವ ಕಾಂಗ್ರೆಸ್‌ನವರು ಈಗ ದೇಶವನ್ನು ಮತ್ತೊಮ್ಮೆ ವಿಭಜಿಸಿ ಮತ್ತೊಂದು ಪಾಕಿಸ್ತಾನ ಮಾಡಲು ಹೊರಟಿದ್ದಾರೆ’ ಎಂದು ಕಿಡಿಕಾರಿದರು.

ಸಂಸದ ಡಿ.ಕೆ. ಸುರೇಶ್ ಮನೆಗೆ ಮುತ್ತಿಗೆ ಯತ್ನ



ಬೆಂಗಳೂರಿನ ಸದಾಶಿವನಗರದಲ್ಲಿರುವ ಸಂಸದ ಡಿ.ಕೆ. ಸುರೇಶ್ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೆರಿಗೆ ಹಂಚಿಕೆಯಲ್ಲಿ ನ್ಯಾಯಯುತ ಪಾಲು ಕೊಡದಿದ್ದರೆ ದಕ್ಷಿಣ ಭಾರತ ಪ್ರತ್ಯೇಕ ರಾಷ್ಟ್ರವಾಗಲಿ’ ಎಂಬ ಹೇಳಿಕೆ ನೀಡಿದ್ದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಸದಾಶಿವನಗರದಲ್ಲಿರುವ ಸುರೇಶ್ ಅವರ ನಿವಾಸದ ಬಳಿ ಭಾನುವಾರ ಬೆಳಿಗ್ಗೆ ಬಂದ ಪ್ರತಿಭಟನಕಾರರು, ಸಂಸದರ ವಿರುದ್ಧ ಘೋಷಣೆ ಕೂಗಿದರು. ಮುತ್ತಿಗೆ ಹಾಕಲು ಪ್ರಯತ್ನಿಸುತ್ತಿದ್ದಂತೆ ಲಘು ಲಾಠಿ ಪ್ರಹಾರ ನಡೆಸಿದ ಪೊಲೀಸರು, 40ಕ್ಕೂ ಹೆಚ್ಚು ಕಾರ್ಯಕರ್ತರನ್ನು ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ಪಡೆದರು.

ಅನಿಲ್ ಶೆಟ್ಟಿ, ಪ್ರಶಾಂತ್, ಸಂದೀಪ್ ರವಿ, ಪ್ರತಾಪ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ‘ಸುರೇಶ್ ದೇಶ ವಿಭಜನೆಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಅವರ ಹೇಳಿಕೆ ಖಂಡನೀಯ’ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮುತ್ತಿಗೆಗೆ ಯತ್ನಿಸಿದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಕರೆದೊಯ್ದ ಬಳಿಕ, ಮತ್ತೊಂದು ಗುಂಪು ಅರಮನೆ ಮೈದಾನದ ಗಾಯತ್ರಿ ವಿಹಾರದ ಬಳಿ ಸುರೇಶ್ ವಿರುದ್ಧ ಪ್ರತಿಭಟನೆ ನಡೆಸಿತು.

‘ಕಾರ್ಖಾನೆಯಿಂದ ಪರಿಸರ ಹಾನಿ: ಕೋರ್ಟ್‌ಗೆ ಮನವರಿಕೆ’

ಪ್ರಜಾವಾಣಿ ವಾರ್ತೆ



ಈಶ್ವರ ಖಂಡ್ರೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಪಟ್ಟಣದಲ್ಲಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಒಡೆತನದ ಸಿದ್ಧಸಿರಿ ಎಥೆನಾಲ್ ಮತ್ತು ವಿದ್ಯುತ್ ಘಟಕದ ವಾಸ್ತವ ಸ್ಥಿತಿಗತಿ ಕುರಿತು ಹೈಕೋರ್ಟ್‌ಗೆ ಇಲಾಖೆಯ ಹಿರಿಯ ಅಧಿಕಾರಿಗಳು ಮನವರಿಕೆ ಮಾಡಿಕೊಡುವರು’ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಪಟ್ಟಣದಲ್ಲಿ ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ‘ಕಾಯ್ದೆ ಕಾನೂನಿಗಿಂತಲೂ ಯಾರೂ ದೊಡ್ಡವರಿಲ್ಲ. ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಪಡೆಯದ ಕಾರಣಕ್ಕೆ ಸಿದ್ಧಸಿರಿ ಕಂಪನಿ ₹1.5 ಕೋಟಿ ದಂಡ ಪಾವತಿಸಿದೆ. ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಪಡೆಯದೆ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಒಪ್ಪಿಗೆ ನೀಡಲು ಬರುವುದಿಲ್ಲ. ಹೀಗಾಗಿ, ನನ್ನ ಸೂಚನೆ ಮೇರೆಗೆ ಅಧಿಕಾರಿಗಳು ಕಂಪನಿಗೆ ನೋಟಿಸ್ ನೀಡಿದ್ದರು’ ಎಂದರು.

‘ನೋಟಿಸ್ ಹಿಂದೆ ರಾಜಕೀಯ ದ್ವೇಷ, ಹಗೆತನ, ಭಯ ಹುಟ್ಟಿಸುವ ಉದ್ದೇಶವಾಗಲಿ ಇಲ್ಲ. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶ ಅತಿ ಕಡಿಮೆ ಇದೆ. ಹೀಗಾಗಿ, ಅರಣ್ಯ ವಿಸ್ತರಣೆ ಮತ್ತು ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ’ ಎಂದು ಅವರು ಹೇಳಿದರು.

ಅಕ್ರಮ ಗಣಿಗಾರಿಕೆ: ದಂಡ ವಸೂಲಿಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಲಹರ್ ಸಿಂಗ್ ಸಿರೋಯ

ಬೆಂಗಳೂರು: ‘ರಾಜ್ಯ ಸರ್ಕಾರವು ದೆಹಲಿಯಲ್ಲಿ ಪ್ರತಿಭಟನೆ ಮಾಡುವ ಬದಲಿಗೆ ಅಕ್ರಮ ಗಣಿಗಾರಿಕೆ ನಡೆಸಿದವರಿಂದ ಬರಬೇಕಿರುವ ₹ 1.43 ಲಕ್ಷ ಕೋಟಿ ದಂಡ ವಸೂಲಿ ಮಾಡಬೇಕು’ ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಅಕ್ರಮ ಗಣಿಗಾರಿಕೆ ನಡೆಸಿ, ನಷ್ಟ ಉಂಟು ಮಾಡಿರುವವರಿಂದ ₹ 1.43 ಲಕ್ಷ ಕೋಟಿ ದಂಡ ವಸೂಲಿ ಮಾಡುವಂತೆ ಸಚಿವ ಎಚ್.ಕೆ. ಪಾಟೀಲ ನೇತೃತ್ವದ ಸಂಪುಟ ಉಪ ಸಮಿತಿ 2013ರಲ್ಲಿ ಶಿಫಾರಸು ಮಾಡಿತ್ತು. ಹತ್ತು ವರ್ಷಗಳಾದರೂ ದಂಡ ವಸೂಲಿ ಏಕೆ ಮಾಡಿಲ್ಲ’ ಎಂದು ಅವರು ಪ್ರಶ್ನಿಸಿದರು.

‘ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹಣದ ಕೊರತೆ ಎದುರಾಗಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಅಕ್ರಮ ಗಣಿಗಾರಿಕೆ ನಡೆಸಿದವರಿಂದ ಅರ್ಧದಷ್ಟು ದಂಡ ವಸೂಲಿ ಮಾಡಿದರೂ ಗ್ಯಾರಂಟಿ ಯೋಜನೆಗಳಿಗೆ ಸಾಕಾಗುತ್ತದೆ. ದಂಡ ವಸೂಲಿ ಮಾಡದಂತೆ ಸಿದ್ದರಾಮಯ್ಯ ಅವರ ಕೈ ಕಟ್ಟಿ ಹಾಕಿದವರು ಯಾರು’ ಎಂದು ಕೇಳಿದರು.

‘ಮುಖ್ಯಮಂತ್ರಿಯವರು ಮೊದಲು ಅಕ್ರಮ ಗಣಿಗಾರಿಕೆ ನಡೆಸಿದವರಿಂದ ದಂಡ ವಸೂಲಿ ಮಾಡಲಿ. ಆ ಬಳಿಕ ಕೇಂದ್ರದಿಂದ ಹೆಚ್ಚಿನ ಅನುದಾನ ಕೋರಲು ಬೆಂಬಲಕ್ಕೆ ನಿಲ್ಲುವಂತೆ ಬಿಜೆಪಿ ಶಾಸಕರಲ್ಲಿ ನಾನು ಮನವಿ ಮಾಡುತ್ತೇನೆ’ ಎಂದರು.

ಗಣಿಗಾರಿಕೆಯಲ್ಲಿ ಅಕ್ರಮ ನಡೆಸಿದವರಿಂದ ದಂಡ ವಸೂಲಿ ಮಾಡುವುದಾಗಿ ನೀಡಿದ್ದ ಭರವಸೆಯನ್ನು ಮುಖ್ಯಮಂತ್ರಿ ಈಗ ಮರೆತಿದ್ದಾರೆ. ಅವರ ಸರ್ಕಾರದ ಗ್ಯಾರಂಟಿ ಯೋಜನೆಗಳೂ ವಿಫಲವಾಗಿವೆ ಎಂದು ಅವರು ಟೀಕಿಸಿದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಪತ್ರಿಕಾಗೋಷ್ಠಿಯಲ್ಲಿದ್ದರು.



ಜನಪದ ಮೆರವಣಿಗೆ ಹಂಪಿ ಉತ್ಸವ ಪ್ರಯುಕ್ತ ಭಾನುವಾರ ಸಂಜೆ ನಡೆದ ಜಾನಪದ ವಾಹಿನಿ ಕಲಾತಂಡಗಳ ಭಾರಿ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಮಂಡ್ಯ, ಹಾಸನ ಕ್ಷೇತ್ರ ಬಿಜೆಪಿಗೆ ಸಿಗುವ ಸಾಧ್ಯತೆ: ಪ್ರೀತಂ ಗೌಡ

ಪ್ರಜಾವಾಣಿ ವಾರ್ತೆ



ಪ್ರೀತಂ ಗೌಡ

ಪಾಂಡವಪುರ (ಮಂಡ್ಯ ಜಿಲ್ಲೆ): ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾಸನ ಮತ್ತು ಮಂಡ್ಯ ಕ್ಷೇತ್ರಗಳು ಬಿಜೆಪಿಗೆ ಸಿಗುವ ಸಾಧ್ಯತೆ ಇದೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಅವರು ತಿಳಿಸಿದರು.

ತಾಲ್ಲೂಕಿನ ಕೆನ್ನಾಳು ಸಮೀಪದ ಕಲ್ಯಾಣಮಂಟಪದಲ್ಲಿ ಭಾನುವಾರ ನಡೆದ ಮಂಡ್ಯ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಉದ್ಘಾಟಿಸಿ ಅವರು ಮಾತನಾಡಿದರು.

‘ಬಿಜೆಪಿಯನ್ನು ವಿರೋಧಿಸುತ್ತಿದ್ದ ಜೆಡಿಎಸ್ ಈಗ ಎನ್‌ಡಿಎ ಕೂಟ ಸೇರಿ ಮೈತ್ರಿ ಮಾಡಿಕೊಂಡಿದೆ. ಇದನ್ನು, ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಉದ್ದೇಶದಿಂದ ಸ್ವಾಗತಿಸುತ್ತೇವೆ’ ಎಂದು ಅವರು ತಿಳಿಸಿದರು.

‘ಪ್ರತಿ ಗ್ರಾಮದಲ್ಲೂ ಪಕ್ಷ ಕಟ್ಟುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು. ಒಂದು ವೇಳೆ ಜೆಡಿಎಸ್‌ಗೆ ಕ್ಷೇತ್ರ ಬಿಟ್ಟು ಕೊಟ್ಟರೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಬಿಜೆಪಿ ಕಾರ್ಯಕರ್ತರ ಒಪ್ಪಿಗೆ ಮತ್ತು ಜೆಡಿಎಸ್ ಕಾರ್ಯಕರ್ತರ ಅಭಿಪ್ರಾಯ ಪಡೆಯಬೇಕು. ಮೈತ್ರಿಯಿಂದಾಗಿ ಕ್ಷೇತ್ರ ಬಿಟ್ಟು ಕೊಡಬೇಕಾದರೆ ಕಾರ್ಯಕರ್ತರು ಎದೆಗುಂದಬಾರದು’ ಎಂದೂ ಅವರು ಹೇಳಿದರು.

‘ಮಂಡ್ಯಕ್ಕೂ ಕುಟುಂಬ ರಾಜಕಾರಣ ವ್ಯಾಪಿಸಿದೆ. ಗೌಡರಿಗೆ ಹಾಸನದಂತೆ ಮಂಡ್ಯದಲ್ಲೂ ನೆಂಟರಿರುತ್ತಾರೆ. ನಮ್ಮ ಸಂಕಲ್ಪ ಕುಟುಂಬ ರಾಜಕಾರಣದ ವಿರುದ್ಧ ಇರಬೇಕು. ಅವರಾಯ್ತು, ಮಕ್ಕಳಾಯ್ತು, ಮೊಮಕ್ಕಳೂ ಆಯ್ತು. ಈಗ ಮರಿಮಕ್ಕಳ ಸರದಿ’ ಎಂದು ಜೆಡಿಎಸ್ ನಾಯಕರನ್ನು ಪರೋಕ್ಷವಾಗಿ ಕುಟುಕಿದರು.

‘ನಮ್ಮೂರು ಬಂದ್ ಮಾಡಬೇಡಿ’

ನಾನೂ ರಾಮ– ಹನುಮ ಭಕ್ತ; ಹನುಮಧ್ವಜ ಕೊಡಿ: ಶಾಸಕ ಗಣಿಗ ರವಿಕುಮಾರ್

ಪ್ರಜಾವಾಣಿ ವಾರ್ತೆ



ಗಣಿಗ ರವಿಕುಮಾರ್

ಮಂಡ್ಯ: ‘ಹೊರಗಿನಿಂದ ಬಂದ ಕೆಲ ಕಿಡಿಗೇಡಿಗಳು ಕೆರಗೋಡು ಗ್ರಾಮಕ್ಕೆ ಬೆಂಕಿ ಇಡಲು ಯತ್ನಿಸುತ್ತಿದ್ದಾರೆ. ದಯವಿಟ್ಟು ಯಾರೂ ಫೆ.7 ಮತ್ತು ಫೆ.9ರಂದು ಮಂಡ್ಯ ಬಂದ್ ಮಾಡಬೇಡಿ’ ಎಂದು ಶಾಸಕ ಗಣಿಗ ರವಿಕುಮಾರ್ ಕೋರಿದರು.

ಇಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಮಂಡ್ಯಕ್ಕೆ ಸಂಬಂಧವೇ ಇಲ್ಲದವರು ಇಲ್ಲಿಯ ಜನರಿಗೆ ವಿಷ ಹಾಕಿದ್ದಾರೆ. ಮನೆಗಳಿಗೆ ಬೆಂಕಿ ಬಿದ್ದರೆ ಅವರಾರೂ ಆರಿಸಲು ಬರುವುದಿಲ್ಲ. ನಿಮ್ಮ ಕೈಮುಗಿದು ಬೇಡಿಕೊಳ್ಳುತ್ತೇನೆ ಶಾಂತವಾಗಿರಿ’ ಎಂದರು.

‘ಫೆ.7ರಂದು ಪ್ರಗತಿಪರ ಸಂಘಟನೆಗಳು, ಫೆ.9 ಬಿಜೆಪಿ–ಸಂಘ ಪರಿವಾರ ಬಂದ್‌ಗೆ ಕರೆ ನೀಡಿವೆ. ಯಾರೂ ನಮ್ಮೂರು ಬಂದ್ ಮಾಡಬೇಡಿ, ಇದರಿಂದ ಏನಾದರೂ ತೊಂದರೆ ಆದರೆ ನಾವೇ ನೋವು ಅನಿಭವಿಸಬೇಕಾಗುತ್ತದೆ’ ಎಂದು ಹೇಳಿದರು.

‘ತಾಲ್ಲೂಕಿನ ಹಲ್ಲೇಗೆರೆ ಗ್ರಾಮದಲ್ಲಿ ಭೂಮಂಡಲ ಆರಾಧನಾ ಕೇಂದ್ರ ನಿರ್ಮಾಣಗೊಳ್ಳುತ್ತಿದ್ದು ಬರಾಕ್ ಒಬಾಮಾ, ದಲೈಲಾಮಾ ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬಂದ್ ನಡೆದರೆ ಭದ್ರತೆ ಕಾರಣಕ್ಕೆ ಅವರ ಭೇಟಿ ರದ್ದಾಗುವ ಸಾಧ್ಯತೆ ಇದೆ. ಹೀಗಾಗಿ ಬಂದ್ ಆಚರಣೆ ಕೈಬಿಡಿ’ ಎಂದು ಮನವಿ ಮಾಡಿದರು.

‘ಕೆಲವು ಪುಂಡರು ನನ್ನ ವಿರುದ್ಧ ಸುಳ್ಳುಗಳನ್ನೇ ಹರಡಿಸುತ್ತಿದ್ದಾರೆ. ನಾನು ಕೆರಗೋಡು ಗ್ರಾಮಕ್ಕೆ ತೆರಳಿ ಶಾಂತಿ ಸಭೆ ನಡೆಸಲು ಸಾಧ್ಯವಾಗುತ್ತಿಲ್ಲ’ ಎಂದರು.

‘ನಾನೂ ರಾಮ ಹನುಮ ಭಕ್ತ. ನಿತ್ಯ ದೇವರ ಪೂಜೆ ಮಾಡುತ್ತೇನೆ. ಹನುಮಧ್ವಜವನ್ನು ತಂದು ಕೊಡಿ, ನಾನೂ ಹಾರಿಸುತ್ತೇನೆ. ಆದರೆ ಯಾರೂ ಕ್ಷೇತ್ರದಲ್ಲಿ ಅಶಾಂತಿ ಸೃಷ್ಟಿಸಬೇಡಿ’ ಎಂದು ಹೇಳಿದರು.

‘ಮನೆ ಮನೆಗೆ ಹನುಮಧ್ವಜ ಕಟ್ಟುವುದನ್ನು ನಾವು ತಡೆಯಲ್ಲ. ಅದನ್ನು ತಡೆಯಲಿ ಎಂದೇ ಕೆಲವರು ಪ್ರಚೋದನೆ ನೀಡುತ್ತಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ವಿನಾಕಾರಣ ಪ್ರಚೋದಿಸುತ್ತಿದ್ದಾರೆ. ಗ್ರಾಮಸ್ಥರು ಸಮಾಧಾನದಿಂದ ಇದ್ದಾರೆ. ಅಲ್ಲಿ ಶಾಂತಿ ಇದೆ. ಆದರೆ 7 ಜನ ಮಾತ್ರ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಅವರ ಹಿನ್ನೆಲೆ ನಮಗೆಲ್ಲ ಗೊತ್ತಿದೆ’ ಎಂದು ಅವರು ತಿಳಿಸಿದರು.

ಅವಮಾನವಾದಲ್ಲೇ ಸನ್ಮಾನವಾಗಬೇಕು: ಎನ್. ರವಿಕುಮಾರ್

ಹುಬ್ಬಳ್ಳಿ: ‘ಎಲ್ಲಿ ಹನುಮಧ್ವಜಕ್ಕೆ ಅವಮಾನವಾಗಿತ್ತೋ, ಅಲ್ಲೇ ಸನ್ಮಾನವಾಗಬೇಕು. ಈ ನಿಟ್ಟಿನಲ್ಲಿ ಫೆ. 9ರಂದು ಮಂಡ್ಯ ಬಂದ್ ಕರೆ ನೀಡಲಾಗಿದೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ ಹೇಳಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಹನುಮಧ್ವಜಕ್ಕೆ ಅವಮಾನವಾಗಿದೆ ಎಂದರೆ, ಹಿಂದೂ ಧರ್ಮಕ್ಕೆ ಅವಮಾನವಾಗಿದೆ ಎಂದರ್ಥ. ಇದಕ್ಕೆ ಸರ್ಕಾರವೇ ನೇರ ಹೊಣೆ. ತೆರವು ಮಾಡಿದ ಸ್ಥಳದಲ್ಲಿಯೇ ಸರ್ಕಾರ ಹನುಮಧ್ವಜ ಹಾರಿಸಬೇಕು’ ಎಂದು ಆಗ್ರಹಿಸಿದರು.

‘ಕೆರಗೋಡು ಗ್ರಾಮ ಪಂಚಾಯ್ತಿಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಸರ್ಕಾರ ಹತ್ತಿಕ್ಕುವ ಕೆಲಸ ಮಾಡಿದೆ. ಕಾಂಗ್ರೆಸ್ ಆರೋಪಿಸಿದಂತೆ ನಾವೇನು ಕೋಮುಸಂಘರ್ಷ ಬಿತ್ತುವ ಕೆಲಸ ಮಾಡುತ್ತಿಲ್ಲ’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಕುಂಕುಮ ಹಚ್ಚಲು ಅಸಡ್ಡೆ ತೋರುತ್ತಾರೆ. ಆದರೆ, ಕೆಲವು ಕಾರ್ಯಕ್ರಮ ಮುಗಿಯುವವರೆಗೂ ಅವರು ಟೋಪಿ ಹಾಕಿಕೊಳ್ಳುತ್ತಾರೆ. ತಿಲಕ ಹಚ್ಚಿಕೊಂಡರೆ ಏನು ಸಮಸ್ಯೆಯಾಗುತ್ತದೆ? ಅದನ್ನು ಯಾಕೆ ಅಳಿಸಿ ಹಾಕಬೇಕು? ತುಷ್ಟೀಕರಣ ರಾಜಕಾರಣ ಮಿತಿ ಮೀರುತ್ತಿದೆ’ ಎಂದು ಹರಿಹಾಯ್ದರು.

ಮುಖ್ಯಮಂತ್ರಿಗೆ ಸವಾಲು: ‘ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಎಷ್ಟು ಅನುದಾನ ನೀಡಿದೆ ಎಂದು ಮಾಹಿತಿ ನೀಡಲು ನಾವು ಸಿದ್ಧರಿದ್ದೇವೆ. ಆದರೆ, ನೀಡಿದ ಅನುದಾನ ಯಾಕಾಗಿ ವಾಪಾಸ್ ಹೋಗುತ್ತಿದೆ ಎನ್ನುವ ಮಾಹಿತಿಯನ್ನು ರಾಜ್ಯ ಸರ್ಕಾರ ನೀಡಬೇಕು. ಬರದಿಂದ ಜನ ಬಳಲುತ್ತಿದ್ದರೆ, ನೀಡಿದ ಅನುದಾನ ಸದ್ಬಳಕೆ ಮಾಡಿಕೊಳ್ಳದೆ ರಾಜಕಾರಣ ಮಾಡುತ್ತಿದ್ದಾರೆ. ಈ ಹಿಂದೆ ಇದ್ದ ಯುಪಿಎ ಸರ್ಕಾರ ಹೆಚ್ಚು ಅನುದಾನ ನೀಡಿತ್ತೋ ಅಥವಾ ಈಗಿನ ಕೇಂದ್ರ ಸರ್ಕಾರ ನೀಡಿದೆಯೋ? ಈ ಕುರಿತು ನಾವು ಶ್ವೇತಪತ್ರ ಹೊರಡಿಸುತ್ತೇವೆ. ನಾವೇ ಜಾಸ್ತಿ ನೀಡಿದ್ದರೆ ನೀವು (ಮುಖ್ಯಮಂತ್ರಿ) ರಾಜೀನಾಮೆ ನೀಡುತ್ತೀರಾ?’ ಎಂದು ಸವಾಲು ಹಾಕಿದರು.

ನಿಗಮ, ಮಂಡಳಿಗೆ ನೇಮಕ ಕಾರ್ಯಕರ್ತರಿಂದ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನೂ ನಿಗಮ, ಮಂಡಳಿಗಳಿಗೆ ನೇಮಕ ಮಾಡುವಂತೆ ಒತ್ತಾಯಿಸಿ ಆಕಾಂಕ್ಷಿಗಳ ದಂಡು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಿವಾಸದ ಕದ ತಟ್ಟುತ್ತಿದೆ.

ಲೋಕಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಶೀಘ್ರದಲ್ಲಿ ನೇಮಕ ಪಟ್ಟಿ ಬಿಡುಗಡೆ ಮಾಡಬೇಕು. ಚುನಾವಣಾ ನೀತಿ ಸಂಹಿತೆ ಘೋಷಣೆಯಾದರೆ ನೇಮಕ ಪಟ್ಟಿ ಪ್ರಕಟವಾಗುವುದು ಮತ್ತಷ್ಟು ವಿಳಂಬ ಆಗಬಹುದು ಎಂಬ ಆತಂಕ ಕಾರ್ಯಕರ್ತರನ್ನು ಕಾಡುತ್ತಿದೆ.

ವಿವಿಧ ನಿಗಮ ಮಂಡಳಿಗಳಿಗೆ 34 ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಆ ಪೈಕಿ, ಬಹುತೇಕರು ಈಗಾಗಲೇ ಅಧಿಕಾರ ವಹಿಸಿಕೊಂಡಿದ್ದಾರೆ. ಶಾಸಕರನ್ನು ನೇಮಿಸಿದ ಪಟ್ಟಿ ಹೊರಬರುತ್ತಿದ್ದಂತೆ ಪ್ರತಿಕ್ರಿಯಿಸಿದ್ದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಕಾರ್ಯಕರ್ತರನ್ನೂ ನೇಮಕ ಮಾಡಿ ಶೀಘ್ರದಲ್ಲಿ ಆದೇಶ ಹೊರಡಿಸಲಾಗುವುದು’ ಎಂದಿದ್ದರು. ಆದರೆ, ಪಟ್ಟಿ ಬಿಡುಗಡೆ ತಡವಾಗುತ್ತಿರುವುದು ಕಾರ್ಯಕರ್ತರನ್ನು ನಿರಾಶರನ್ನಾಗಿ ಮಾಡಿದೆ.

39 ಕಾರ್ಯಕರ್ತರನ್ನು ನಿಗಮ ಮಂಡಳಿಗಳಿಗೆ ನೇಮಕ ಮಾಡಲು ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ಸೂಚಿಸಿದೆ ಎಂಬ ಮಾಹಿತಿಯುಳ್ಳ ಪಟ್ಟಿಯೊಂದು ಪಕ್ಷದ ಕಾರ್ಯಕರ್ತರ ವಲಯದಲ್ಲಿ ಓಡಾಡುತ್ತಿದೆ. ಈ ಪಟ್ಟಿ ಪಕ್ಷದ ಹೈಕಮಾಂಡ್ ಮೂಲಗಳಿಂದಲೇ ಸೋರಿಕೆ ಆಗಿತ್ತು. ಆದರೆ, ಆ ಪಟ್ಟಿಯಲ್ಲಿರುವ ಕೆಲವು ಹೆಸರುಗಳಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಅದನ್ನು ತಡೆಹಿಡಿಯಲಾಗಿತ್ತು. ಆಕ್ಷೇಪ ವ್ಯಕ್ತವಾಗಿರುವ ಹೆಸರುಗಳನ್ನು ಕೈಬಿಟ್ಟು, ಪಟ್ಟಿ ಪರಿಷ್ಕರಿಸಲಾಗುತ್ತಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

‘ಬಂಟರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ಹು-ಧಾ ನಗರದವರ ನೇಮಕ’



ಡಿ.ಕೆ ಶಿವಕುಮಾರ


ಹುಬ್ಬಳ್ಳಿ: ‘ಬಂಟರ ಅಭಿವೃದ್ಧಿ ನಿಗಮಕ್ಕೆ ಹುಬ್ಬಳ್ಳಿ–ಧಾರವಾಡದಲ್ಲಿನ ಬಂಟರನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ನಗರದ ಆರ್.ಎನ್.ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಹುಬ್ಬಳ್ಳಿ–ಧಾರವಾಡ ಬಂಟರ ಸಂಘ ಆಯೋಜಿಸಿದ್ದ ವಾರ್ಷಿಕ ಸ್ನೇಹಕೂಟ ಸಮಾರಂಭದ ಹಿನ್ನೆಲೆಯಲ್ಲಿ ಶನಿವಾರ ರಾತ್ರಿಯೇ ಬಂಟರ ಸಂಘದ ಮುಖಂಡರನ್ನು ಭೇಟಿ ಮಾಡಿ ಅವರು ಮಾತನಾಡಿದರು.

‘ಬಂಟ ಸಮುದಾಯದ ಜನರು ಶ್ರಮಜೀವಿಗಳು ಹಾಗೂ ಸ್ವಾಭಿಮಾನಿಗಳು. ಯಾರಿಗೂ ಕೇಡು ಬಯಸುವವರಲ್ಲ. ಸಮುದಾಯದ ಜನರ ಅಭಿವೃದ್ಧಿಗಾಗಿ ಸರ್ಕಾರ ಬದ್ಧವಾಗಿದೆ’ ಎಂದರು.

ವಿಧಾನ ಪರಿಷತ್‌ಗೆ ಪತ್ರಕರ್ತರ ನಾಮ ನಿರ್ದೇಶನ: ಒತ್ತಾಯ

ಪ್ರಜಾವಾಣಿ ವಾರ್ತೆ



ಬಸವರಾಜ ಹೊರಟ್ಟಿ

ದಾವಣಗೆರೆ: ‘ಚಿಂತಕರ ಚಾವಡಿ’ ಎನಿಸಿಕೊಂಡಿರುವ ವಿಧಾನ ಪರಿಷತ್‌ನಲ್ಲಿ ಅನುಭವಿ ಪತ್ರಕರ್ತರ ಸೇವೆ ಪಡೆದುಕೊಳ್ಳುವ ನಿಟ್ಟಿನಲ್ಲಿ ಹಿರಿಯ ಪತ್ರಕರ್ತರೊಬ್ಬರನ್ನು ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಕೋರಲಾಗುವುದು’ ಎಂದು ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ನಗರದಲ್ಲಿ ಆಯೋಜಿಸಿದ್ದ ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ವಿಧಾನ ಪರಿಷತ್‌ನಲ್ಲಿ ಪತ್ರಕರ್ತರಿಗೆ ಸ್ಥಾನ ನೀಡಲಾಗಿಲ್ಲ. ಪರಿಷತ್‌ನಲ್ಲಿ ಎಲ್ಲ ಕ್ಷೇತ್ರದವರ ಉಪಸ್ಥಿತಿ ಅಗತ್ಯ ಎಂಬ ಉದ್ದೇಶದಿಂದಲೇ ಸಾಹಿತ್ಯ, ಸಂಗೀತ ಹಾಗೂ ಪತ್ರಿಕಾ ಕ್ಷೇತ್ರದಲ್ಲಿ ಅನುಭವ ಇರುವವರನ್ನು ನಾಮನಿರ್ದೇಶನ ಮಾಡಲಾಗುತ್ತದೆ. ಈ ಹಿಂದೆ ಕೆಲ ಪತ್ರಕರ್ತರನ್ನು ನಾಮನಿರ್ದಾಶನ ಮಾಡಲಾಗಿತ್ತು’ ಎಂದು ಸ್ಮರಿಸಿದರು.

‘ಲೋಕಸಭೆ, ವಿಧಾನಸಭೆ ಚುನಾವಣೆಯಲ್ಲಿ ಸೋತವರು, ರಾಜಕೀಯ ಪಕ್ಷಗಳ ಕಾರ್ಯಕರ್ತರು, ಮುಖಂಡರೇ ವಿಧಾನ ಪರಿಷತ್ ಪ್ರವೇಶಿಸುತ್ತಿದ್ದಾರೆ. ಅಂಥವರು ಬಂದರೆ ಸ್ಥಳೀಯ ಸಂಸ್ಥೆಗಳಿಗೂ ಪರಿಷತ್‌ಗೂ ವ್ಯತ್ಯಾಸ ಇರುವುದಿಲ್ಲ. ಮಾರ್ಗದರ್ಶನ ಮಾಡುವ ನಾವೇ ಮಾರ್ಗ ಬಿಟ್ಟರೆ ಏನಾಗುತ್ತದೆ’ ಎಂದು ಪ್ರಶ್ನಿಸಿದ ಅವರು, ‘ಸದನದಲ್ಲಿ ಅಂತಹ ಸಂದರ್ಭ ಬಂದರೆ ಪತ್ರಿಕಾ ರಂಗದವರ ಹೆಸರನ್ನೇ ಪ್ರಸ್ತಾಪಿಸುತ್ತೇನೆ’ ಎಂದು ಅವರು ತಿಳಿಸಿದರು.

ತುಮಕೂರಿನಲ್ಲಿ ಮುಂದಿನ ಸಮ್ಮೇಳನ: ಮುಂದಿನ ಬಾರಿ ತುಮಕೂರಿನಲ್ಲಿ ರಾಜ್ಯ ಮಟ್ಟದ 39ನೇ ಪತ್ರಕರ್ತರ ಸಮ್ಮೇಳನ ನಡೆಸಲು ಬೆಳಿಗ್ಗೆ ನಡೆದ ಸಭೆಯಲ್ಲಿ ನಿರ್ಣಯಿಸಲಾಯಿತು. ಸಮ್ಮೇಳನ ನಡೆಸಲು ₹ 50 ಲಕ್ಷ ನೀಡಬೇಕು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಿದರು.

ಸಮ್ಮೇಳನದ ನಿರ್ಣಯಗಳು

- ಎಲ್ಲಾ ಕಾರ್ಯನಿರತ ಪತ್ರಕರ್ತರಿಗೂ ಉಚಿತ ಬಸ್ ಪ್ರಯಾಣಕ್ಕೆ ಪಾಸ್ ನೀಡಬೇಕು
- ಆರೋಗ್ಯ ಕ್ಷೇಮಾಭಿವೃದ್ಧಿ ಯೋಜನೆ ಪ್ರಾರಂಭಿಸಬೇಕು
- ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರತ ಪತ್ರಕರ್ತರ ಘಟಕ ಸ್ಥಾಪಿಸಬೇಕು
- ವಸತಿಗಾಗಿ ರಿಯಾಯಿತಿ ದರದಲ್ಲಿ ನಿವೇಶನ ನೀಡಬೇಕು
- ಪತ್ರಕರ್ತರ ಪಿಯುಸಿ, ಪದವಿ ಓದುತ್ತಿರುವ ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಬೇಕು
- ಪತ್ರಕರ್ತರು ಮೃತಪಟ್ಟರೆ ₹ 2 ಲಕ್ಷ ಪರಿಹಾರ ನೀಡಬೇಕು
- ಪತ್ರಕರ್ತರ ವಾಹನಗಳಿಗೆ ಹೆದ್ದಾರಿ ಟೋಲ್‌ಗಳಲ್ಲಿ ಉಚಿತ ಪ್ರವೇಶ ಬೇಕು

‘ಆದೇಶ ಪ್ರತಿ ಸಿಕ್ಕ ನಂತರ ಕಾನೂನು ಹೋರಾಟ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ನನ್ನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದ ಪ್ರತಿ ಕೈಗೆ ಸಿಕ್ಕಿಲ್ಲ. ಅದು ಸಿಕ್ಕ ನಂತರ ಕಾನೂನು ಹೋರಾಟ ಮಾಡುತ್ತೇನೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದರು.

ಹಿಂದೂ ಪದದ ಹೇಳಿಕೆಗೆ ಸಂಬಂಧಿಸಿ ದಾಖಲಾದ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸತೀಶ ಜಾರಕಿಹೊಳಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಆದೇಶಿಸಿದ ವಿಚಾರವಾಗಿ, ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಹಿಂದೂ ಪದದ ಹೇಳಿಕೆ ವಿಚಾರ ಚರ್ಚೆಗೆ ಗ್ರಾಸವಾಗಿತ್ತು. ವಕೀಲರೊಬ್ಬರು ಪ್ರಕರಣ ದಾಖಲಿಸಿದ್ದರು. ಕೆಳಹಂತದ ನ್ಯಾಯಾಲಯದಲ್ಲಿ ಅದು ತಿರಸ್ಕೃತಗೊಂಡಿತ್ತು. ಈಗ ಆದೇಶದಲ್ಲಿ ಏನಿದೆ ಎಂದು ನೋಡೋಣ’ ಎಂದು ಅವರು ತಿಳಿಸಿದರು.

ಅನುದಾನ ಬಿಡುಗಡೆಯಾಗದೇ ವೇತನ ಬಾಕಿ: ಸಂಸಾರ ನಿರ್ವಹಣೆ ಕಷ್ಟ

ಐಸಿಡಿಎಸ್ ನೌಕರರ ಪರದಾಟ

• ಬಿ.ಜೆ. ಧನ್ಯಪ್ರಸಾದ್

ಧಾರವಾಡ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ನೌಕರರಿಗೆ ಮೂರು ತಿಂಗಳಿನಿಂದ ವೇತನ ಪಾವತಿಯಾಗದೇ ಪರದಾಡುವಂತಾಗಿದೆ.

‘ಮೇಲ್ವಿಚಾರಕಿಯರು, ಎಫ್‌ಡಿಎ, ಎಸ್‌ಡಿಎ, ಇತರ ನೌಕರರಿಗೆ ವೇತನ ಪಾವತಿ ಆಗಿಲ್ಲ. ಸಂಬಳವಿಲ್ಲದೆ ಕುಟುಂಬ ನಿರ್ವಹಣೆ, ಮನೆ ಬಾಡಿಗೆ, ಸಾಲದ ಕಂತು ಪಾವತಿಗೆ ಸಮಸ್ಯೆಯಾಗಿದೆ’ ಎಂದು ನೌಕರರು ತಿಳಿಸಿದರು.

> **ಉಡುಪಿ ಜಿಲ್ಲೆಯಲ್ಲಿ ವೇತನ ಸಮಸ್ಯೆ ಇತ್ತು. ಇತರ ಎಲ್ಲ ಜಿಲ್ಲೆಗಳಲ್ಲಿ ಜಿ. ಪಂ. ಮೂಲಕ ನೌಕರರ ಖಾತೆಗೆ ವೇತನ ಪಾವತಿ ಆಗಿದೆ. ಪಾವತಿ ಆಗಿರದಿದ್ದರೆ ಪರಿಶೀಲಿಸುವೆ**
> **ಲಕ್ಷ್ಮಿ ಹೆಬ್ಬಾಳಕರ**
> ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

‘ಐಸಿಡಿಎಸ್‌ಗೆ ಕೇಂದ್ರ ಮತ್ತು ರಾಜ್ಯದ ಸರ್ಕಾರ ಶೇ 60:40 ಅನುಪಾತದಲ್ಲಿ ಅನುದಾನ ಬಿಡುಗಡೆಯಾಗುತ್ತದೆ. ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಈ ನೌಕರರಿಗೆ ಮೂರು ತಿಂಗಳುಗಳಿಂದ ಅನುದಾನ ಬಿಡುಗಡೆಯಾಗದೇ ಸಂಬಳ ಬಾಕಿ ಇದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

‘ಸಂಬಳ ಆಧರಿಸಿ ಬ್ಯಾಂಕ್‌ನಲ್ಲಿ ಸಾಲ ಪಡೆದಿರುವೆ. ಮೂರು ತಿಂಗಳಿನಿಂದ ಸಾಲದ ಕಂತು ಪಾವತಿಸಲು ಆಗಿಲ್ಲ. ಕಂತು ಪಾವತಿಗೆ ಕೈಸಾಲ ಮಾಡಿರುವೆ. ಕುಟುಂಬ ನಿರ್ವಹಣೆಗೆ ಸಂಬಳ ಆಶ್ರಯಿಸಿದ್ದೇನೆ. ವೇತನ ಬಾಕಿ ಇರುವ ಕುರಿತು ಇಲಾಖೆ ಉನ್ನತ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ, ಯಾರೂ ಸ್ಪಂದಿಸುತ್ತಿಲ್ಲ’ ಎಂದು ಸಿಡಿಪಿಒ ಕಚೇರಿ ಮೇಲ್ವಿಚಾರಕಿಯೊಬ್ಬರು ನೋವು ತೋಡಿಕೊಂಡರು.

‘ಸರ್ಕಾರವು ಬಜೆಟ್ ಇಲ್ಲ ಎಂದು ವೇತನ ಪಾವತಿಸಿಲ್ಲ. ಸಂಬಳ ಇಲ್ಲದೆ ನೌಕರರಿಗೆ ತೊಂದರೆಯಾಗಿದೆ. ಪಂಚ ಗ್ಯಾರಂಟಿ ಕಾರ್ಯಕ್ರಮ ಅನುಷ್ಠಾನದ ಜೊತೆಗೆ ಐಸಿಡಿಎಸ್ ನೌಕರರಿಗೂ ಸಂಬಳ ಸಕಾಲದಲ್ಲಿ ನೀಡಬೇಕು. ಅಂಗನವಾಡಿ ಕಾರ್ಯಕರ್ತೆಯರಿಗೆ ₹ 15 ಸಾವಿರ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು, ಆದರೆ ಅನುಷ್ಠಾನಕ್ಕೆ ಕ್ರಮವಹಿಸಿಲ್ಲ. ಬೆಂಗಳೂರಿನಲ್ಲಿ ಫೆಬ್ರುವರಿ 6ರಂದು ಚಳವಳಿ ಹಮ್ಮಿಕೊಳ್ಳಲು ನಿರ್ಧರಿಸಿದ್ದೇವೆ’ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘಟನೆ ಜಿಲ್ಲಾ ಸಂಚಾಲಕಿ ಭುವನಾ ಬಳ್ಳಾರಿ ‘ಪ್ರಜಾವಾಣಿ’ಗೆ ತಿಳಿಸಿದರು.

ನಿಧನ ವಾರ್ತೆ

ಸೋಮಶೇಖರ್ ಭಟ್



ಉಡುಪಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಕಾರ್ಯಕರ್ತ ಹಾಗೂ ಬಿಜೆಪಿ ಮುಖಂಡ ಎಂ.ಸೋಮಶೇಖರ್ ಭಟ್ (89) ಭಾನುವಾರ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಸೋಮವಾರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಡುಪಿ ಪುರಸಭೆ ಅಧ್ಯಕ್ಷರಾಗಿದ್ದ ಅವರು ಒಮ್ಮೆ ವಿಧಾನಸಭಾ ಚುನಾವಣೆಗೂ ಸ್ಪರ್ಧಿಸಿದ್ದರು. ಎಲ್‌.ಕೆ. ಅಡ್ವಾಣಿ, ಎ.ಬಿ. ವಾಜಪೇಯಿ ಅವರಿಗೆ ನಿಕಟವರ್ತಿಯಾಗಿದ್ದರಲ್ಲದೆ ಮಾಜಿ ಸಚಿವ ದಿ. ವಿ.ಎಸ್. ಆಚಾರ್ಯ ಅವರಿಗೆ ಮಾರ್ಗದರ್ಶಕರಾಗಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಗೆದ್ದವರಷ್ಟೇ ಬದುಕಿನ ಪಾಠ ಹೇಳಬೇಕಿಲ್ಲ. ಸೋತವರು ಅದಕ್ಕಿಂತಲೂ ಚೆನ್ನಾಗಿ ಪಾಠ ಕಲಿತಿರುತ್ತಾರೆ. ಅವರಿಂದಲೂ ಅನುಭವದ ಪಾಠ ಕಲಿಯಬಹುದು.

–ಸಿದ್ಧೇಶ್ವರ ಸ್ವಾಮೀಜಿ

ಕೋಟಾದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ವ್ಯವಸ್ಥೆಯಲ್ಲಿ ಬೇಕಿದೆ ಬದಲಾವಣೆ

ಜೆಇಇ ಪರೀಕ್ಷೆ ಬರೆಯಬೇಕಿದ್ದ ವಿದ್ಯಾರ್ಥಿನಿಯೊಬ್ಬಳು ರಾಜಸ್ಥಾನದ ಕೋಟಾದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಜೆಇಇ ಪರೀಕ್ಷೆ ಬರೆಯಲು ತನ್ನಿಂದ ಸಾಧ್ಯವಿಲ್ಲ ಎಂದು ಆಕೆ ತನ್ನ ತಂದೆ–ತಾಯಿಗೆ ಆತ್ಮಹತ್ಯೆಗೂ ಮೊದಲು ಬರೆದಿಟ್ಟಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾಳೆ. ತಾನು ಸೋಲುವ ವ್ಯಕ್ತಿ ಎಂದೂ ಆಕೆ ಬರೆದಿದ್ದಾಳೆ. 'ನೀವು ನಿಮ್ಮ ಜೊತೆ ಸ್ಪರ್ಧೆಗೆ ಇಳಿಯಬೇಕೇ ವಿನಾ ಬೇರೊಬ್ಬರ ಜೊತೆಯಲ್ಲಿ ಅಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪರೀಕ್ಷೆ ಬರೆಯಬೇಕಿರುವ ಮಕ್ಕಳನ್ನು ಉದ್ದೇಶಿಸಿ ಹಿತವಚನ ಆಡಿದ ದಿನವೇ ಈಕೆ ಇಂತಹ ಹೆಜ್ಜೆ ಇರಿಸಿದ್ದಾಳೆ. ನೀಟ್ ಪರೀಕ್ಷೆಗೆ ಸಿದ್ಧತೆ ನಡೆಸಲು ತೆರಳಿದ್ದ ವಿದ್ಯಾರ್ಥಿಯೊಬ್ಬ ಕೋಟಾದಲ್ಲಿ ಕೆಲವು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಒಂದು ವರ್ಷದ ಅವಧಿಯಲ್ಲಿ ಕೋಟಾದಲ್ಲಿ ಸರಿಸುಮಾರು 29 ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವರದಿಗಳು ಇವೆ. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳನ್ನು ತಯಾರು ಮಾಡುವ ಕಾರ್ಖಾನೆಯಂತೆ ಆಗಿದೆ ರಾಜಸ್ಥಾನದ ಕೋಟಾ. ದೇಶದ ಬೇರೆ ಬೇರೆ ಕಡೆಗಳಲ್ಲಿ ಕೂಡ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳು ಇವೆ ಎಂಬುದು ನಿಜ. ಪರೀಕ್ಷೆಗಳು ನಡೆಯುವ ಅವಧಿಯು ವಿದ್ಯಾರ್ಥಿಗಳ ಜೀವಕ್ಕೆ ಎರವಾಗುತ್ತಿದೆ. ಪರೀಕ್ಷೆಗಳೆಂದರೆ ವಿದ್ಯಾರ್ಥಿಗಳು ಹೆದರುವಂತೆ ಮಾಡುವ ಹಲವು ಸಂಗತಿಗಳು ಇವೆ. ಇಂತಹ ಪರೀಕ್ಷೆಗಳಿಂದ ಪಲಾಯನ ಮಾಡಲು ವಿದ್ಯಾರ್ಥಿಗಳು ಮಾರ್ಗಗಳನ್ನು ಅರಸುತ್ತಿರುತ್ತಾರೆ, ಕೆಲವರು ತಮ್ಮ ಜೀವನಕ್ಕೇ ಬೆನ್ನು ತಿರುಗಿಸಲು ಮುಂದಾಗುತ್ತಾರೆ.



ಒತ್ತಡವು ವಿದ್ಯಾರ್ಥಿಗಳ ಸೃಜನಶೀಲತೆಯನ್ನು, ಬದುಕಿನ ಸವಾಲು ಎದುರಿಸುವ ಸಾಮರ್ಥ್ಯವನ್ನು ಕುಗ್ಗಿಸಿ ಅವರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ

ಕೋಟಾದಲ್ಲಿ ಕೋಚಿಂಗ್ ಪಡೆಯಲು ಮುಂದಾಗುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದವರು. ಅವರಲ್ಲದೆ, ಇತರ ವರ್ಗಗಳಿಗೆ ಸೇರಿದವರೂ ಇದ್ದಾರೆ ಎಂಬುದೂ ನಿಜ. ಇವರೆಲ್ಲರ ಉದ್ದೇಶ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣ ಆಗುವುದು. ವಾಸ್ತವದಲ್ಲಿ, ಪಾಲಕರಲ್ಲಿ ಇರುವ ಮಹತ್ವಾಕಾಂಕ್ಷೆಯೇ ವಿದ್ಯಾರ್ಥಿಗಳ ಮೇಲೆ ಹೆಚ್ಚು ಪ್ರಭಾವ ಬೀರಿರುತ್ತದೆ. ಸ್ಪರ್ಧೆಗೆ ಇಳಿದ ನಂತರದಲ್ಲಿ ವಿದ್ಯಾರ್ಥಿಗಳ ಮೇಲೆ ಜೊತೆಗಾರರಿಂದಲೂ ಒತ್ತಡ ಸೃಷ್ಟಿಯಾಗಿರುತ್ತದೆ. ಮಹತ್ವಾಕಾಂಕ್ಷೆಗಳು, ಬಯಕೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ಇದೇ ಸಂದರ್ಭದಲ್ಲಿ ಶೈಕ್ಷಣಿಕ ಹಾಗೂ ಉದ್ಯೋಗ ಅವಕಾಶಗಳು ವರ್ಷದಿಂದ ವರ್ಷಕ್ಕೆ ಕುಸಿಯುತ್ತ ಸಾಗಿವೆ. ತಮ್ಮ ಮಕ್ಕಳು ಅತ್ಯುತ್ತಮ ಕೋರ್ಸ್ ಸೇರುವಂತೆ ಮಾಡಬೇಕು ಎಂಬ ಸಾಮಾಜಿಕ ಒತ್ತಡವು ಪಾಲಕರ ಮೇಲೆ ಬಿದ್ದಿರುತ್ತದೆ. ಎಂಜಿನಿಯರಿಂಗ್ ಹಾಗೂ ಆಡಳಿತ ನಿರ್ವಹಣಾ ಕೋರ್ಸ್‌ಗಳು ಮಾನವಿಕ ಅಥವಾ ಕಲಾ ವಿಭಾಗದ ಕೋರ್ಸ್‌ಗಳಿಗಿಂತ ಹೆಚ್ಚು ಪ್ರತಿಷ್ಠಿತ, ಹೆಚ್ಚು ಪ್ರಯೋಜನಗಳನ್ನು ತಂದುಕೊಡುತ್ತವೆ ಎಂಬ ಭಾವನೆಯು ಪಾಲಕರಲ್ಲಿ, ಸಮಾಜದಲ್ಲಿ ಇದೆ. ಕೋರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಸಾಮರ್ಥ್ಯವನ್ನು ಪರಿಗಣಿಸುವ ಗೋಜಿಗೇ ಹೋಗುವುದಿಲ್ಲ. ಕೆಲವು ವಿದ್ಯಾರ್ಥಿಗಳಿಗೆ ತಮ್ಮ ನಿಜವಾದ ಆಸಕ್ತಿಯ ಕ್ಷೇತ್ರ ಯಾವುದು ಎಂಬುದನ್ನು ಗುರುತಿಸಲು ಕೂಡ ಆಗಿರುವುದಿಲ್ಲ. ಆದರೆ ಅವರನ್ನು ಕೂಡ ಶಾಲಾ ದಿನಗಳಿಂದಲೂ ಅಪಾರ ಒತ್ತಡಕ್ಕೆ ಸಿಲುಕಿಸಲಾಗುತ್ತದೆ. ಕೋಟಾದಲ್ಲಿ ವಿದ್ಯಾರ್ಥಿಗಳು ತಮ್ಮ ಕುಟುಂಬದಿಂದ ದೂರ ಇರುತ್ತಾರೆ. ಇದು ಕೂಡ ಅವರ ಮೇಲಿನ ಒತ್ತಡವನ್ನು ಇಮ್ಮಡಿಗೊಳಿಸುತ್ತದೆ. ವಿದ್ಯಾರ್ಥಿಗಳು ಎಲ್ಲೆಡೆಗಳಲ್ಲಿಯೂ ಒತ್ತಡದಲ್ಲೇ ಇರುತ್ತಾರೆ. ಆದರೆ ಕೋಟಾದಲ್ಲಿ ಪರಿಸ್ಥಿತಿ ಅತಿರೇಕಕ್ಕೆ ಹೋಗಿರುವಂತಿದೆ.

ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು, ಅದಕ್ಕೆ ಸಿದ್ಧತೆ ನಡೆಸುವ ಅವಧಿಯಲ್ಲಿ ಹಾಕಿದ್ದ ಶ್ರಮದ ಕಾರಣದಿಂದಾಗಿಯೇ ಶಕ್ತಿ ಕುಂದಿದವರಂತೆ ಆಗಿರುತ್ತಾರೆ. ಒತ್ತಡವು ವಿದ್ಯಾರ್ಥಿಗಳ ಸೃಜನಶೀಲತೆಯನ್ನು, ಬದುಕಿನ ಸವಾಲು ಎದುರಿಸುವ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಇವೆಲ್ಲವುಗಳ ಪರಿಣಾಮವು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಆಗುತ್ತದೆ. ಕೆಲವು ವಿದ್ಯಾರ್ಥಿಗಳು ಆತ್ಮಗೌರವವನ್ನು, ಆತ್ಮವಿಶ್ವಾಸವನ್ನು ಕಳೆದುಕೊಳ್ಳುವ ಹಂತ ತಲುಪುತ್ತಾರೆ. ಕೋಟಾದಲ್ಲಿನ ಕೋಚಿಂಗ್ ಕೇಂದ್ರಗಳು ಅನುಸರಿಸಬೇಕಿರುವ ಹಲವು ಮಾರ್ಗಸೂಚಿಗಳು ಇವೆ. ಆದರೆ ಇವು ಯಾವುವೂ ವಿದ್ಯಾರ್ಥಿಗಳ ಆತ್ಮಹತ್ಯೆಯ ಪ್ರಮಾಣವನ್ನು ತಗ್ಗಿಸಲು ನೆರವಾಗಿಲ್ಲ. ಕೋಟಾದ ಕೋಚಿಂಗ್ ವ್ಯವಸ್ಥೆಯಲ್ಲಿಯೇ ಆಮೂಲಾಗ್ರವಾದ ಬದಲಾವಣೆಗಳು ಆಗಬೇಕಿವೆ. ಬಹುತೇಕ ಕಡೆಗಳಲ್ಲಿ ವಿದ್ಯಾರ್ಥಿಗಳ ಹಾಗೂ ಅವರ ಪಾಲಕರ ಆಪ್ತಸಮಾಲೋಚನೆಗೆ ವ್ಯವಸ್ಥೆ ಇಲ್ಲ. ವಿದ್ಯಾರ್ಥಿ ಜೀವನದಲ್ಲಿ ಖುಷಿಯನ್ನು ಪಡೆಯುವ ಅವಕಾಶಗಳು ಬತ್ತುತ್ತಿವೆ. ಇದು ಬಹುತೇಕರಿಗೆ ಒಂದು ಗಂಭೀರ ಸವಾಲು. ಶಿಕ್ಷಣದ ಬಗ್ಗೆ ಈಗ ಇರುವ ಧೋರಣೆಯಲ್ಲಿಯೂ ಬದಲಾವಣೆ ಆಗಬೇಕಿದೆ.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆ: ವಿವೇಕದ ದನಿಗಳಿಗೆ ಕಾಂಗ್ರೆಸ್ 'ಹೈಕಮಾಂಡ್' ಕಿವಿಗೊಟ್ಟಿದ್ದರೆ...

ಕಾಂಗ್ರೆಸ್ ಅನುಪಸ್ಥಿತಿ ಐತಿಹಾಸಿಕ ಎಡವಟ್ಟು



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಅಯೋಧ್ಯೆಯಲ್ಲಿ ನಿರ್ಮಿಸಿರುವ ನವ್ಯ, ಭವ್ಯ ಮತ್ತು ದಿವ್ಯ ರಾಮ ಮಂದಿರದಲ್ಲಿ ನಡೆದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸದಿರಲು ಕಾಂಗ್ರೆಸ್ಸಿನ ರಾಷ್ಟ್ರೀಯ ನಾಯಕರು ತೀರ್ಮಾನಿಸಿದರು. ಇದು ಜನರ ಭಾವನೆಗಳ ಜೊತೆಗಿನ ಸಂಬಂಧವನ್ನು ಪಕ್ಷವು ಸಂಪೂರ್ಣವಾಗಿ ಕಡಿದುಕೊಂಡಿದೆ ಎಂಬುದಕ್ಕೆ ತೀರಾ ಈಚೆಗಿನ ಹಾಗೂ ಕಣ್ಣಿಗೆ ರಾಚುವಂತಹ ನಿದರ್ಶನ. ಭಾರತವು ತನ್ನ ನಾಗರಿಕತೆಯ ಶಕ್ತಿಯನ್ನು ಮತ್ತೊಮ್ಮೆ ಹೇಳಿಕೊಂಡ ಕ್ಷಣವನ್ನಾಗಿ, ಐದು ಶತಮಾನಗಳ ಹಿಂದಿನ ತಪ್ಪೊಂದನ್ನು ಸರಿಪಡಿಸಿದ ಕ್ಷಣವನ್ನಾಗಿ ಜನರು ಈ ಕಾರ್ಯಕ್ರಮವನ್ನು ಕಂಡಿದ್ದರು.

ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಮೂಲಕ ಬಾಲರಾಮನು ಅಯೋಧ್ಯೆಯಲ್ಲಿನ ಪವಿತ್ರ ಸ್ಥಾನಕ್ಕೆ ಮರಳಿ ಬಂದನು. ಹಿಂದೂ ಸಮುದಾಯದ ಹಲವು ತಲೆಮಾರುಗಳ ಕನಸು ನನಸಾಯಿತು. ಈ ಸ್ಥಳವು ರಾಮನ ಜನ್ಮಸ್ಥಳ ಎಂದು ಹಿಂದೂಗಳು ಸಾವಿರಾರು ವರ್ಷಗಳಿಂದ ನಂಬಿದ್ದಾರೆ. ಈ ಕಾರಣಕ್ಕಾಗಿಯೇ, ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ನಡೆದ ಸಂದರ್ಭದಲ್ಲಿ ದೇಶದ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ, ನಗರಗಳ ಬಡಾವಣೆಗಳಲ್ಲಿ ಭಾವನೆಗಳು ತಾವಾಗಿಯೇ ಉಕ್ಕಿ ಹರಿದವು. ದಿವ್ಯವಾದ ಸೌಂದರ್ಯ ಹೊಂದಿರುವ ಬಾಲರಾಮನ ಮುಖವನ್ನು, ಬಾಲರಾಮನ ವೈಭವ ಯುತವಾದ ಮೂರ್ತಿಯನ್ನು ಟಿ.ವಿ. ಕ್ಯಾಮೆರಾಗಳು ತೋರಿಸಿದಾಗ ಭಕ್ತರ ಕಣ್ಣಿನಿಂದ ನೀರು ಜಿನುಗಿತು.

ಹೀಗಿದ್ದರೂ, ಕಾಂಗ್ರೆಸ್ಸಿನ ಹಿರಿಯ ನಾಯಕರು ಮತ್ತು 'ಇಂಡಿಯಾ' ಮೈತ್ರಿಕೂಟದ ಬಹುತೇಕ ಪಕ್ಷಗಳ ನಾಯಕರು ಜನರ ನಂಬಿಕೆಗಳನ್ನು ಮತ್ತು ಸಂತಸವನ್ನು ಕಾಣಲು ಅಲ್ಲಿರಲಿಲ್ಲ. ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಹಿಂದೂಗಳಿಗೆ ತಮ್ಮ ಹೆಮ್ಮೆಯ, ಹಕ್ಕಿನ ದೃಢವಾದ ಪ್ರತಿಪಾದನೆಯಾಗಿತ್ತು. ಕಾಂಗ್ರೆಸ್ ಪಕ್ಷವು ಕಾರ್ಯಕ್ರಮದಿಂದ ದೂರ ಉಳಿದದ್ದು ಆ ಪಕ್ಷವು ಜವಾಹರಲಾಲ್ ನೆಹರೂ ಕಾಲದಿಂದಲೂ ಪಾಲಿಸಿಕೊಂಡು ಬಂದಿರುವ ಪೊಳ್ಳು-ಧರ್ಮನಿರಪೇಕ್ಷ ನೀತಿಯ ಅಂತಿಮ ಸಮರ್ಥನೆಯಂತೆ ಹಾಗೂ ಸೋನಿಯಾ ಗಾಂಧಿ ಅವರು ಪಕ್ಷದ ಮೇಲೆ ಹಿಡಿತ ಸಾಧಿಸಿದ ನಂತರ ಆ ನೀತಿಯು ಹಿಂದೂ ವಿರೋಧಿಯಾಗಿ ಬದಲಾಗಿದ್ದುದರ ಅಂತಿಮ ಸಮರ್ಥನೆಯಂತೆ ಕಾಣುತ್ತದೆ. ರಾಹುಲ್ ಗಾಂಧಿ ಅವರು 'ದೇಶದಲ್ಲಿ ರಾಮನ ಅಲೆ ಇಲ್ಲ' ಎಂದು ಈಚೆಗೆ ಹೇಳಿರುವುದು ಇದಕ್ಕೆ ಒಂದು ಉದಾಹರಣೆ. ಕೋಟ್ಯಂತರ ಜನರ ಭಾವನೆಗಳ ಬಗ್ಗೆ ರಾಹುಲ್ ಅವರಿಗೆ ತಿಳಿದೇ ಇಲ್ಲ ಎಂಬುದನ್ನು ಈ ಮಾತು ತೋರಿಸುತ್ತದೆ.

ಕಾಂಗ್ರೆಸ್ಸಿನ ನಡೆಯು ವಿಚಿತ್ರವಾಗಿ ಕಾಣುತ್ತಿದೆ. ಏಕೆಂದರೆ, ಜನವರಿ 22ರಂದು ನಡೆದಿದ್ದು ಪೂರ್ವನಿಶ್ಚಿತವಾದ ಕಾರ್ಯಕ್ರಮದಂತೆ ಇತ್ತು. ಒಂದು ಸಾವಿರಕ್ಕೂ ಹೆಚ್ಚು ವರ್ಷಗಳಿಂದ ಹತ್ತಿಕ್ಕಲ್ಪಟ್ಟಿದ್ದ ಭಾರತದ ಆತ್ಮವು ಆ ದಿನ ಅಂತೂ ತನ್ನ ದನಿಯನ್ನು ಕಂಡುಕೊಂಡಿತ್ತು. ಅಲ್ಲದೆ, 110 ಕೋಟಿಗೂ ಹೆಚ್ಚು ಹಿಂದೂಗಳು ಇರುವ ದೇಶದಲ್ಲಿ ಕಾಂಗ್ರೆಸ್ಸಿನ ನಡೆಯು ಚುನಾವಣಾ ದೃಷ್ಟಿಕೋನದಿಂದ ಹೆಚ್ಚಿನ ಪ್ರಯೋಜನವನ್ನೇನೂ ತಂದುಕೊಡುವುದಿಲ್ಲ. ದೇಶದ ಹಿಂದೂಗಳು ತಮ್ಮ ಹಿಂದಿನ ಹಿಂಜರಿಕೆಗಳನ್ನೆಲ್ಲ ಮೀರಿ ಆತ್ಮಸಮರ್ಥನೆಯ ಹಾದಿಯನ್ನು ತುಳಿದಿದ್ದಾರೆ. ಅಲ್ಲದೆ, ಕಾಂಗ್ರೆಸ್ ಪಕ್ಷವು 2014 ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ತೋರಿದ ಕಳಪೆ ಸಾಧನೆ, ರಾಷ್ಟ್ರಮಟ್ಟದಲ್ಲಿ ಪಕ್ಷದ ಮತಗಳಿಕೆ ಪ್ರಮಾಣವು ಶೇಕಡ 20ಕ್ಕಿಂತ ಕಡಿಮೆ ಆಗಿದ್ದನ್ನು ಪರಿಗಣಿಸಿದಾಗಲೂ ಈ ನಡೆಯು ವಿಚಿತ್ರವಾಗಿ ಕಾಣಿಸುತ್ತದೆ. ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಖ್ಯಾಬಲವು ಶೇಕಡ 10ಕ್ಕಿಂತ ಕಡಿಮೆ ಆಗಿದೆ.

ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಆಗಿರುವ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಈ ಕಾರ್ಯಕ್ರಮವನ್ನು ಕಡೆಗಣಿಸಲು ತೀರ್ಮಾನಿಸಿದರು. ಆದರೆ, ಈ ನಡೆಯು ರಾಜಕೀಯವಾಗಿ ವಿವೇಕದ್ದಲ್ಲ ಎಂಬುದು ಪಕ್ಷದ ಇತರ ಕೆಲವರ ಅಭಿಪ್ರಾಯವಾಗಿತ್ತು, ಅವರು ಈ ವಿಚಾರವನ್ನು ಭಿನ್ನವಾಗಿ ನಿಭಾಯಿಸಿದರು. ಮಧ್ಯಪ್ರದೇಶದ ಕಾಂಗ್ರೆಸ್ ನಾಯಕ ಕಮಲ್ ನಾಥ್, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಕ್ಕು ಮತ್ತು ಅವರ ಸಂಪುಟ ಸಹೋದ್ಯೋಗಿ ಇಲ್ಲಿ ಉಲ್ಲೇಖಾರ್ಹರು. ಸುಕ್ಕು ಅವರು ತಾವು ಜನವರಿ 22ರಂದು ತಮ್ಮ ಮನೆಯಲ್ಲಿ ಸಂಜೆ ದೀಪ ಉರಿಸುವುದಾಗಿ ಹೇಳಿದರು, ರಾಜ್ಯದ ಜನ ಕೂಡ ಪ್ರಾಣ ಪ್ರತಿಷ್ಠಾಪನೆಯ ಕಾರಣಕ್ಕಾಗಿ ಮನೆಗಳಲ್ಲಿ ದೀಪ ಉರಿಸುವಂತೆ ಕರೆ ನೀಡಿದರು. ಅಲ್ಲದೆ, ಪ್ರಾಣ ಪ್ರತಿಷ್ಠಾಪನೆಯ ದಿನ ಕೇಂದ್ರ ಸರ್ಕಾರವು ಅರ್ಧ ದಿನ ರಜೆ ಘೋಷಿಸಿದರೆ ತಾವು ಒಂದು ದಿನ ರಜೆ ಘೋಷಿಸಿದರು.

ಸಿದ್ದರಾಮಯ್ಯ ಅವರು ಜನವರಿ 22ರಂದು ಬೆಂಗಳೂರಿನ ಮಹಾದೇವಪುರದ ರಾಮ ದೇವಸ್ಥಾನದಲ್ಲಿ ನಡೆದ ಪ್ರಾಣ ಪ್ರತಿಷ್ಠಾಪನೆ ಕಾರ್ಯದಲ್ಲಿ ಭಾಗಿಯಾಗಿದ್ದರು. ರಾಮನಿಗೆ ಪೂಜೆ ಸಲ್ಲಿಸಿದರು. ಅಲ್ಲಿ ಸೇರಿದ್ದವರಿಗೆ 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುವಂತೆಯೂ ಸಿದ್ದರಾಮಯ್ಯ ಹೇಳಿದರು. 'ಜೈ ಶ್ರೀರಾಮ್' ಎಂಬ ಘೋಷಣೆಯು ಎಲ್ಲರಿಗೂ ಸೇರಿದ್ದು ಎಂದು ಅವರು ಕಾರ್ಯಕ್ರಮದಲ್ಲಿ ಸೇರಿದ್ದ ಜನರಿಗೆ ನೆನಪಿಸಿದರು. ಇದನ್ನು ಯಾರೋ ಒಬ್ಬರು ತಮ್ಮದು ಎಂದು ಹೇಳಿಕೊಳ್ಳುವಂತಿಲ್ಲ ಎಂದರು. 'ಇಡೀ ದೇಶಕ್ಕೆ ರಾಮನಲ್ಲಿ ನಂಬಿಕೆ ಇದೆ. ಎಲ್ಲರೂ ಶ್ರೀರಾಮನನ್ನು ಪೂಜಿಸುತ್ತಾರೆ, ಹಿಂದೂಗಳು ಹೆಚ್ಚಾಗಿ ಪೂಜಿಸುತ್ತಾರೆ. ನಾವು ಕೂಡ ಶ್ರೀರಾಮಚಂದ್ರನ ಪರಮ ಭಕ್ತರು. ನಾನು ಕೂಡ ನನ್ನ ಹುಟ್ಟೂರಿನಲ್ಲಿ ರಾಮನ ದೇವಸ್ಥಾನವನ್ನು ನಿರ್ಮಿಸಿದ್ದೇನೆ. ದೇಶದಲ್ಲಿ ರಾಮರಾಜ್ಯ ಸ್ಥಾಪನೆ ಆಗಲಿ ಎಂದು ಎಲ್ಲರೂ ಆಶಿಸುತ್ತಾರೆ. ಕುವೆಂಪು ಹೇಳಿದ ಸರ್ವ ಜನಾಂಗದ ಶಾಂತಿಯ ತೋಟವು ರಾಮರಾಜ್ಯದ ಹೃದಯಭಾಗದಲ್ಲಿರುತ್ತದೆ. ಸಹಿಷ್ಣುತೆ ಮತ್ತು ಸಹಬಾಳ್ವೆ ಇಲ್ಲಿ ಪ್ರಮುಖ ಅಂಶಗಳು' ಎಂದು ಸಿದ್ದರಾಮಯ್ಯ ಹೇಳಿದರು. 'ವಿದೇಶಿಯರಿಂದ ಹಲವು ದಾಳಿಗಳು ನಮ್ಮ ಮೇಲೆ ನಡೆದರೂ ನಮ್ಮ ಸಂಸ್ಕೃತಿ, ನಮ್ಮ ಧರ್ಮ ಮತ್ತು ನಮ್ಮ ದೇವರು ನಮ್ಮನ್ನು ಒಟ್ಟಾಗಿ ಇರಿಸಿವೆ' ಎಂದು ಸಿದ್ದರಾಮಯ್ಯ ಅವರು ಮಾತು ಮುಗಿಸಿದರು.

ಭಾರತದ ಅತ್ಯಂತ ಹಳೆಯ ರಾಜಕೀಯ ಪಕ್ಷವನ್ನು ನಿಯಂತ್ರಿಸುತ್ತಿರುವ, ಆ ಪಕ್ಷದ ಮಾಲೀಕತ್ವ ಹೊಂದಿರುವ ಕುಟುಂಬಕ್ಕೆ ಈ ರಾಜಕೀಯ ಪ್ರಜ್ಞೆ ಇದ್ದಿದ್ದರೆ!

ತಾವು ಹನುಮಂತನ ಭಕ್ತ ಎಂದು ಹೇಳಿಕೊಂಡಿರುವ ಕಮಲ್ ನಾಥ್ ಅವರು ಅಯೋಧ್ಯೆಯಲ್ಲಿ ನಡೆದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಸ್ವಾಗತಿಸಿದರು. ಈ ಕ್ಷಣಕ್ಕಾಗಿ ಜನರು ಬಹುಕಾಲದಿಂದ ಕಾಯುತ್ತಿದ್ದರು ಎಂದರು. ಈ ಮಂದಿರವನ್ನು ಎಲ್ಲರ ಸಮ್ಮತಿಯೊಂದಿಗೆ ನಿರ್ಮಿಸಲಾಗುತ್ತಿದೆ, ಇದು ಭಾರತದಲ್ಲಿ ಮಾತ್ರ ಸಾಧ್ಯ ಎಂದು ಹೇಳಿದರು. ರಾಮ ಮಂದಿರದ ಗೇಟುಗಳಿಗೆ ಹಾಕಿದ್ದ ಬೀಗವನ್ನು ತೆಗೆಸಿದ್ದು ರಾಜೀವ್ ಗಾಂಧಿ ಅವರು ಎಂದು ಹೇಳುವ ಮೂಲಕ ಒಂದಿಷ್ಟು ರಾಜಕೀಯ ಪ್ರಯೋಜನ ಪಡೆಯುವ ಯತ್ನವನ್ನೂ ಅವರು ಮಾಡಿದರು. ಇಲ್ಲಿ ಗಮನಾರ್ಹ ವಿಷಯವೆಂದರೆ, ರಾಮ ಎಲ್ಲರಿಗೂ ಸೇರಿದವ, ಒಂದು ರಾಜಕೀಯ ಪಕ್ಷವು ರಾಮ ತನ್ನವ ಎಂದು ಹೇಳಿಕೊಳ್ಳುವಂತಿಲ್ಲ ಎಂದು ಕಾಂಗ್ರೆಸ್ಸಿನ ಈ ಮೂವರೂ ನಾಯಕರು ಹೇಳಿದರು. ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿ ರಾಮ ಮಂದಿರ ನಿರ್ಮಾಣವಾಗಿದೆ ಎಂದು ಕೂಡ ಕಮಲ್ ನಾಥ್ ಹೇಳಿದರು.

ಹಿಮಾಚಲ ಪ್ರದೇಶದಲ್ಲಿ ಮುಖ್ಯಮಂತ್ರಿ ಸುಕ್ಕು ಅವರಲ್ಲದೆ, ಅವರ ಸಂಪುಟದ ಸಹೋದ್ಯೋಗಿಯೊಬ್ಬರು ಹಿಂದೂವಾಗಿ, ಸನಾತನಿಯಾಗಿ ಅಯೋಧ್ಯೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ತಮ್ಮ ಕರ್ತವ್ಯ ಎಂದರು. 'ಇತಿಹಾಸ ಸೃಷ್ಟಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಲು ನಾನು ಬಯಸುವೆ. ನನಗೆ ಆಹ್ವಾನ ಕಳುಹಿಸಿದವರಿಗೆ ನಾನು ಧನ್ಯವಾದ ಅರ್ಪಿಸುವೆ' ಎಂದರು.

ಇಂತಹ ವಿವೇಕದ ದನಿಗಳಿಗೆ 'ಹೈಕಮಾಂಡ್' ಕಿವಿಗೊಟ್ಟಿದ್ದರೆ ಕಾಂಗ್ರೆಸ್ ಪಕ್ಷವು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಪ್ರಸ್ತುತತೆಯನ್ನು ಉಳಿಸಿಕೊಳ್ಳಬಹುದಿತ್ತು. ಅದರಲ್ಲೂ ಮುಖ್ಯವಾಗಿ, ಲೋಕಸಭಾ ಚುನಾವಣೆಯು ಹತ್ತಿರವಾಗುತ್ತಿರುವ ಈ ಹೊತ್ತಿನಲ್ಲಿ ಇದು ಅಗತ್ಯವಾಗಿತ್ತು. ಈಗ ಈ ಪಕ್ಷವು ಈ ಐತಿಹಾಸಿಕ ಅಪರಾಧಕ್ಕಾಗಿ ಚುನಾವಣೆಯಲ್ಲಿ ಬೆಲೆ ತೆರಬೇಕಾಗುತ್ತದೆ.



ಚುರುಮುರಿ



ರತ್ನಗಳ ನಾಡಿನಲ್ಲಿ...

• ಸುಮಂಗಲಾ

'ಅಬ್ಬಾ... ಕೊನಿಗೂ ನಮ್ ಅಡ್ವಾಣಿ ಅಜ್ಜಾರಿಗೆ ಭಾರತರತ್ನ ಪ್ರಶಸ್ತಿ ಕೊಟ್ಟರು. ದೇಶದ ಉದ್ದಗಲಕ್ಕೆ ರಥಯಾತ್ರೆ ಮಾಡಿದ್ದು ಕಡಿಮೆ ಸಾಧನೆ ಏನು?' ಬೆಕ್ಕಣ್ಣ ಬಲು ಖುಷಿಯಿಂದ ಉಲಿಯಿತು.

'ಮಂಗ್ಯಾನಂಥವನೇ... ಬರೀ ರಥಯಾತ್ರೆ ಮಾಡಿದ್ದಕ್ಕೆ ಕೊಟ್ಟಿದ್ದಲ್ಲಲೇ. ಅವರು ದೊಡ್ಡ ರಾಜಕೀಯ ಮುತ್ಸದ್ದಿ, ಅವರ ಜೀವಮಾನದ ಸಾಧನೆ ಗುರುತಿಸಿ ಕೊಟ್ಟಾರೆ' ಎಂದೆ.

'ಹೊಸ ವರ್ಷದ ಮೊದಲನೇ ತಿಂಗಳು ಎಷ್ಟು ಛಲೋತ್ನಾಗಿ ಶುರುವಾತು ನೋಡು. ಅಯೋಧ್ಯಾದಾಗೆ ಬಾಲರಾಮನ ಪ್ರತಿಷ್ಠಾಪನೆ, ಇಬ್ಬರು ಮಹಾನ್ ರಾಜಕೀಯ ನಾಯಕರಿಗೆ ಭಾರತರತ್ನ ಪ್ರಶಸ್ತಿ...' ಬೆಕ್ಕಣ್ಣ ಹೆಮ್ಮೆಯಿಂದ ಹೆಪ್ಪೆಗುಟ್ಟಿತು.

'ಹ್ಞೂಂ ಮತ್ತೆ... ಈ ಮೂರರ ಜೊತೆಗೆ ಮುಂದಿನ ಲೋಕಸಭೆ ಚುನಾವಣೆ ಸೇರಿದರೆ ಒಳ್ಳೆಯ ಸಮೀಕರಣ ಬಿಡು' ಎಂದು ಕಿಚಾಯಿಸಿದೆ.

ಇನ್ನೂ 'ರತ್ನ'ಗಳ ಗುಂಗಿನಲ್ಲಿಯೇ ಇದ್ದ ಬೆಕ್ಕಣ್ಣ 'ಬ್ಯಾರೆಬ್ಯಾರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ, ವಿಶೇಷ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು. ನಮ್ ಶೆಟ್ಟರ್ ಮಾಮಾಗೆ 'ಪಕ್ಷಾಂತರರತ್ನ' ಪ್ರಶಸ್ತಿ, ನಿತೀಶ ಅಂಕಲ್ಲಿಗೆ 'ಪಲ್ಟುರತ್ನ' ಪ್ರಶಸ್ತಿ ಕೊಡಬಹುದು' ಎಂದಿತು.

'ಪಲ್ಟುರತ್ನ ಪ್ರಶಸ್ತಿಗೆ ನಿತೀಶ್ ಅಂಕಲ್ಲಿನ ಜೋಡಿ ನಿಮ್ಮ ಕುಮಾರಣ್ಣನೂ ಸ್ಪರ್ಧೆವಳಗೆ ಅದಾನೆ ಅನ್ನೂದು ಮರೀಬ್ಯಾಡ. ಹಂಗೇ ನಮ್ ಯಡಿಯೂರಜ್ಜಾರಿಗೆ 'ಆಪರೇಷನ್‌ರತ್ನ' ಕೊಡಬೌದು'.

'ಕೋಟಿವೀರರಾಗಿರೋ ಸರ್ಕಾರಿ ಅಧಿಕಾರಿಗಳನ್ನು ಗುರುತಿಸಿ 'ಲಂಚರತ್ನ' ಪ್ರಶಸ್ತಿ ಕೊಡಬೌದು. ಶತಕೋಟಿ ವೀರರಾಗೋ ಸಾಧನೆ ಮಾಡ್ತಿರೋ ರಾಜಕಾರಣಿಗಳನ್ನು ಗುರುತಿಸಿ 'ಭ್ರಷ್ಟಾಚಾರರತ್ನ' ಪ್ರಶಸ್ತಿ ಕೊಡಬೌದು. ಈಗ ನಿಮಗೆ ಅಂದರೆ ಶ್ರೀಸಾಮಾನ್ಯರಿಗೆ ಯಾವ ರತ್ನ ಕೊಡದು...' ಬೆಕ್ಕಣ್ಣ ತಲೆ ಕೆರೆದುಕೊಂಡಿತು.

'ನಾವು ಎಲ್ಲಾನೂ ಸಹಿಸಿಕೊಂಡು ಹೋಗ್ತೀವಲ್ಲ, ಹಿಂಗಾಗಿ 'ಸಹನಾರತ್ನ' ಕೊಡಬೌದು' ಎಂದೆ.

'ಅಲ್ಲಲ್ಲ.... ನಿಮಗೆ 'ಜಡಭರತರತ್ನ' ಅಥವಾ 'ಮೂಕರತ್ನ' ಪ್ರಶಸ್ತಿನೇ ಸರಿ' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ದಿನದ ಟ್ವೀಟ್

ತಾರತಮ್ಯ ಸಲ್ಲದು

ಕರ್ನಾಟಕದ ತಲಾ ಆದಾಯವು ಬಿಹಾರಕ್ಕಿಂತ ಬಹುತೇಕ ಐದು ಪಟ್ಟು ಹೆಚ್ಚಿಗೆ ಇದೆ, ಆದರೂ 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಕರ್ನಾಟಕ ಪ್ರತಿವರ್ಷವೂ ₹ 9,000 ಕೋಟಿಯಿಂದ 11,000 ಕೋಟಿಯಷ್ಟು ಹಣವನ್ನು ಕಳೆದುಕೊಳ್ಳುತ್ತಿದೆ. #SouthTaxMovement #ನನ್ನತೆರಿಗೆನನ್ನಹಕ್ಕು



ಚೇತನ್ ಜೀರಾಳ್

ಕಿಡಿನುಡಿ

ಇಂತಹುದು ಭಾರತದಲ್ಲಷ್ಟೇ ಘಟಿಸಲು ಸಾಧ್ಯ! ಸರ್ಕಾರದ ಹಣ ಪಡೆಯಲು ನಕಲಿ ಸಾಮೂಹಿಕ ವಿವಾಹ.

(ಉತ್ತರಪ್ರದೇಶದಲ್ಲಿ ನಕಲಿ ವಧು–ವರರನ್ನು ನಿಯೋಜಿಸಿ ಸಾಮೂಹಿಕ ವಿವಾಹದ ವ್ಯವಸ್ಥೆ ಮಾಡುವ ಮೂಲಕ ಅಧಿಕಾರಿಗಳು ಸರ್ಕಾರದ ಹಣ ಲಪಟಾಯಿಸಲು ಮುಂದಾದ ಪ್ರಕರಣಕ್ಕೆ ಪ್ರತಿಕ್ರಿಯೆ)



ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 5-2-1999

• **ರಾಜ್ಯದ ನಾಲ್ಕು ಹೊಸ ರೈಲು ಮಾರ್ಗ ಯೋಜನೆಗೆ ಒಪ್ಪಿಗೆ**

ನವದೆಹಲಿ, ಫೆ. 4– ಕರ್ನಾಟಕದ ನಾಲ್ಕು ಹೊಸ ರೈಲು ಮಾರ್ಗಗಳು ಸೇರಿದಂತೆ ಒಟ್ಟು ಹನ್ನೆರಡು ಯೋಜನೆಗಳಿಗೆ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿಯು ಇಂದು ಒಪ್ಪಿಗೆ ನೀಡಿತು.

ಅವುಗಳೆಂದರೆ, ಬೆಂಗಳೂರು– ಸತ್ಯಮಂಗಲ (271 ಕಿ.ಮೀ), ಬೀದರ್– ಕಲ್ಬುರ್ಗಿ (116 ಕಿ. ಮೀ), ರಾಯಚೂರು– ಆಂಧ್ರಪ್ರದೇಶದ ಗಢವಾಲ್ (60 ಕಿ.ಮೀ), ಯಶವಂತಪುರ– ತುಮಕೂರು (64 ಕಿ.ಮೀ).

• **ಭಿನ್ನಮತೀಯ ಚಟುವಟಿಕೆಗೆ ಮುಖ್ಯಮಂತ್ರಿ ನಿರ್ಲಕ್ಷ್ಯ**

ಬೆಂಗಳೂರು, ಫೆ. 4– 'ಪಕ್ಷದ ಭಿನ್ನಮತೀಯ ಚಟುವಟಿಕೆಗಳ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಆಡಳಿತ ಯಂತ್ರವನ್ನು ಚುರುಕುಗೊಳಿಸುವಲ್ಲಿ ಮಗ್ನನಾಗಿದ್ದೇನೆ' ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೇಳಿದರು.

ಪಕ್ಷದಲ್ಲಿ ಪ್ರಾರಂಭವಾಗಿರುವ ಭಿನ್ನಮತೀಯ ಚಟುವಟಿಕೆಗಳ ಬಗ್ಗೆ ಇಂದು ವಿಧಾನಸೌಧದ ಮುಖ್ಯಮಂತ್ರಿ ಕಚೇರಿಯಲ್ಲಿ ಪತ್ರಕರ್ತರು ಅವರ ಗಮನ ಸೆಳೆದಾಗ, ಪಟೇಲ್ ಈ ಪ್ರತಿಕ್ರಿಯೆ ನೀಡಿದರು.

'ಭಿನ್ನಮತೀಯ ಚಟುವಟಿಕೆಗಳ ಬಗ್ಗೆ ಇಂದಿನ ಪತ್ರಿಕೆಗಳಲ್ಲಿ ನೋಡಿದ್ದೇನೆ. ವಾಸ್ತವವಾಗಿ ಏನು ನಡೆಯುತ್ತಿದೆ ಎಂಬುದು ನನಗೆ ತಿಳಿಯದು. ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಪಕ್ಷದಲ್ಲಿ ಶಿಸ್ತು ಇರಬೇಕು. ಇದು ಪ್ರಜಾಪ್ರಭುತ್ವ ಅಲ್ಲವೇ, ಆದ್ದರಿಂದ ಅವರಿಗೆ ಏನು ಮಾಡಬೇಕೆಂದು ಅನ್ನಿಸುತ್ತದೆಯೋ ಅದನ್ನು ಮಾಡಿಕೊಳ್ಳಲಿ' ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಮಂಗಳವಾರ, 5-2-1974

• **ವಿಜಯನಗರ ಉಕ್ಕು ಕಾರ್ಖಾನೆ: ನಿಧಾನ ಧೋರಣೆಗೆ ಸಚಿವ ಕೃಷ್ಣ ವಿಷಾದ**

ಬೆಂಗಳೂರು, ಫೆ. 4– ನಾಲ್ಕು ವರ್ಷಗಳ ಹಿಂದೆ ಅಬ್ಬರದಿಂದ ಅನುಮತಿ ದೊರಕಿಸಿಕೊಂಡ ವಿಜಯನಗರ ಉಕ್ಕಿನ ಕಾರ್ಖಾನೆಯ 'ತೀರಾ ನಿಧಾನ ಹಾಗೂ ವೇದನಾಪೂರ್ಣ ಪ್ರಗತಿ'ಗೆ ಕಾರಣವಾದ ಕೇಂದ್ರ ಉಕ್ಕು ಇಲಾಖೆಯ ಧೋರಣೆಯ ಬಗ್ಗೆ ರಾಜ್ಯ ಕೈಗಾರಿಕಾ ಮಂತ್ರಿ ತೀವ್ರ ವಿಷಾದ ವ್ಯಕ್ತಪಡಿಸಿದ್ದಾರೆ.

'ಈ ಅವಧಿಯಲ್ಲಿ ನಿರ್ಮಾಣ ವೆಚ್ಚ ದ್ವಿಗುಣಗೊಂಡಿದೆ; ತೈಲ ಬಿಕ್ಕಟ್ಟಿನಂಥ ಸಮಸ್ಯೆಗಳು ಉದ್ಭವಿಸಿವೆ. ನಿಧಾನ ಧೋರಣೆಯಿಂದಾಗಿ ಹೀಗೆ ಕಳೆದುಹೋದ ಅಮೂಲ್ಯ ಸಮಯದ ಬಗ್ಗೆ ಯೋಚಿಸುವಾಗ ತೀರಾ ನೋವು ಆಗುತ್ತದೆ' ಎಂದು ಸಚಿವ ಎಸ್.ಎಂ. ಕೃಷ್ಣ ಅವರು ಹೇಳಿದರು.

• **ಖ್ಯಾತ ಅಣು ವಿಜ್ಞಾನಿ ಸತ್ಯೇಂದ್ರನಾಥ್ ಬೋಸ್ ನಿಧನ**

ಕೋಲ್ಕತ್ತ, ಫೆ. 4– ವಿಶ್ವವಿಖ್ಯಾತ ವಿಜ್ಞಾನಿಯಾದ ಸತ್ಯೇಂದ್ರನಾಥ್ ಬೋಸ್ ಅವರು ಇಂದು ಬೆಳಿಗ್ಗೆ ಇಲ್ಲಿ ನಿಧನ ಹೊಂದಿದರು. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಭೌತ ವಿಜ್ಞಾನಿಯಾದ ಸತ್ಯೇಂದ್ರ ನಾಥ್ ಬೋಸ್ ಅವರು, 'ಕ್ವಾಂಟಮ್ ಸ್ಟ್ಯಾಟಿಸ್ಟಿಕ್ಸ್' ಸಿದ್ಧಾಂತದ ಕರ್ತೃ. ಸಿದ್ಧಾಂತದ ಸುವರ್ಣ ಮಹೋತ್ಸವದ ಅಂಗವಾಗಿ ಜನವರಿ 10ರಂದು ನಡೆದಿದ್ದ ಅಂತರರಾಷ್ಟ್ರೀಯ ವಿಜ್ಞಾನಿಗಳ ಸಮ್ಮೇಳನದಲ್ಲಿ ಬೋಸ್ ಅವರನ್ನು ಸನ್ಮಾನಿಸಲಾಗಿತ್ತು.

ಸಂಗತ

ಬರವಣಿಗೆ ಹಿಂದಿನ ಬವಣೆ

ಆರ್ಥಿಕ ಶೋಷಣೆ ಮತ್ತು ವಿಮರ್ಶೆಯ ಕಾಕದೃಷ್ಟಿಗೆ ಲೇಖಕ ಒಳಗಾಗುತ್ತಿರುವ ಸನ್ನಿವೇಶ ಇದು. ಇಂತಲ್ಲಿ, ಸತ್ವಯುತ ಬರವಣಿಗೆ ಸೃಷ್ಟಿಯಾಗುವುದಾದರೂ ಹೇಗೆ?

• ರಾಜಕುಮಾರ ಕುಲಕರ್ಣಿ

ನನ್ನ ಸ್ನೇಹಿತರೊಬ್ಬರದೂ ಸೇರಿದಂತೆ ಕೆಲವು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಪ್ರಕಾಶಕರು ಇತ್ತೀಚೆಗೆ ತುಂಬ ಅದ್ದೂರಿಯಾಗಿ ಆಯೋಜಿಸಿದ್ದರು. ಅಂದು ಹಲವು ಪುಸ್ತಕಗಳನ್ನು ಅತಿಥಿಗಳಿಂದ ಲೋಕಾರ್ಪಣೆಗೊಳಿಸಲಾಯಿತು. ವೇದಿಕೆಯಲ್ಲಿ ಲೇಖಕರಿಗೆ ಹಾರ, ಫಲತಾಂಬೂಲ, ಶಾಲು ಮತ್ತು ಪುಸ್ತಕದ ಇಪ್ಪತ್ತೈದು ಪ್ರತಿಗಳನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೆ ಬಂದಿದ್ದವರು ತಮ್ಮ ತಮ್ಮ ಪರಿಚಯದ ಲೇಖಕರಿಂದ ಗೌರವಪ್ರತಿಗಳನ್ನು ಪಡೆದು ತೆರಳಿದರು. ಸಭಾಂಗಣದ ಬಾಗಿಲ ಬಳಿ ಮಾರಾಟಕ್ಕೆಂದು ಇಟ್ಟಿದ್ದ, ಅಂದು ಬಿಡುಗಡೆಗೊಂಡ ಪುಸ್ತಕಗಳತ್ತ ಬಹುತೇಕರು ಕಣ್ಣು ಹಾಯಿಸಲಿಲ್ಲ. ಲೇಖಕರು ಪುಸ್ತಕದ ಪ್ರತಿಗಳನ್ನೇ ತಮಗೆ ದೊರೆತ ಗೌರವಧನ ಎಂದು ತೃಪ್ತಿಪಟ್ಟುಕೊಳ್ಳಬೇಕಾಯಿತು.

ಕನ್ನಡದಲ್ಲಿ ಬರವಣಿಗೆಯಿಂದಲೇ ಬದುಕು ಕಟ್ಟಿಕೊಂಡ ಲೇಖಕರ ಸಂಖ್ಯೆ ಬಲು ವಿರಳ. ಶಿವರಾಮ ಕಾರಂತ, ಅನ್ನಕ, ತರಾಸು ಅಂಥವರು ಈ ಮಾತಿಗೆ ಅಪವಾದವಾಗಿರಬಹುದು. ಹಾಗೆಂದು ಅಂತಹ ಲೇಖಕರ ಸಂಖ್ಯೆ ಕನ್ನಡಿಗರು ಹೆಮ್ಮೆಪಡುವಷ್ಟೇನಿಲ್ಲ. ಇಲ್ಲಿ ಲೇಖಕ ತನ್ನ ಪುಸ್ತಕ ಪ್ರಕಟಣೆಗಾಗಿ ಪ್ರಕಾಶಕರನ್ನು ಅವಲಂಬಿಸಬೇಕಾದ ಅನಿವಾರ್ಯ ಇದೆ. ಪ್ರಕಾಶಕರು ಪುಸ್ತಕಗಳ ಮಾರಾಟಕ್ಕಾಗಿ ಪುಸ್ತಕ ವ್ಯಾಪಾರಿಗಳು, ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಓದುಗರನ್ನು ಅವಲಂಬಿಸಿದ್ದಾರೆ.

ಶಿಕ್ಷಣ ಸಂಸ್ಥೆಗಳು ಪಠ್ಯೇತರ ಪುಸ್ತಕಗಳನ್ನು ಖರೀದಿಸುವುದು ಕಡಿಮೆ. ಪುಸ್ತಕ ವ್ಯಾಪಾರಿಗಳು ಮುಂಗಡ ಹಣ ನೀಡಿ ಪ್ರಕಾಶಕರಿಂದ ಪುಸ್ತಕಗಳನ್ನು ಖರೀದಿಸಲಾರರು. ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಪೂರೈಸಲು ಅನೇಕ ಪಟ್ಟುಗಳನ್ನು ಕರಗತ ಮಾಡಿಕೊಂಡಿರಬೇಕು. ಓದುಗರು ಪುಸ್ತಕಗಳನ್ನು ಖರೀದಿಸಿ ಓದುವ ಔದಾರ್ಯ ತೋರುತ್ತಿಲ್ಲ. ಇನ್ನು ಲೇಖಕನೇ ಪ್ರಕಾಶಕನಾಗಿ ಪುಸ್ತಕ ಪ್ರಕಟಿಸಲು ಮುಂದಾಗುವುದಾದರೆ ಪುಸ್ತಕ ಮಾರಾಟದ ವಿಭಿನ್ನ ತಂತ್ರಗಳ ಅರಿವಿರಬೇಕು. ಒಟ್ಟಿನಲ್ಲಿ ಸನ್ನಿವೇಶವು ಲೇಖಕ ಗೌರವಧನವನ್ನು ಅಪೇಕ್ಷಿಸದಷ್ಟು ಪ್ರಕಾಶಕರಿಗೆ ಪೂರಕವಾಗಿದೆ.

ಕೃತಿಸ್ವಾಮ್ಯ ಕಾಯ್ದೆ ಪ್ರಕಾರ, ಬೌದ್ಧಿಕ ಸ್ವತ್ತಿನ ಕಾನೂನಾತ್ಮಕ ಹಕ್ಕು ಲೇಖಕನಿಗೆ ಸೇರಿದ್ದು. ಕೆಲವು ಪ್ರಕಾಶಕರು ನಿಯಮಬಾಹಿರವಾಗಿ ಕೃತಿಸ್ವಾಮ್ಯವನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಇದರ ಹಿಂದೆ ಆರ್ಥಿಕ ಲಾಭದ ಸಂಗತಿ ಅಡಕವಾಗಿದೆ. ಪುಸ್ತಕದ ಮೊದಲ ಆವೃತ್ತಿಯನ್ನು ಸಾರ್ವಜನಿಕ ಗ್ರಂಥಾಲಯಕ್ಕೆ ಮಾರಾಟ ಮಾಡುವ ಪ್ರಕಾಶಕರು ಅದರ ಎರಡನೇ ಆವೃತ್ತಿಯನ್ನೂ ಪ್ರಕಟಿಸಿ ಮಾರಾಟ ಮಾಡುವ ಉದ್ದೇಶದಿಂದ ಪುಸ್ತಕದ ಹಕ್ಕನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಒಮ್ಮೆ ಪುಸ್ತಕದ ಹಕ್ಕು ಪ್ರಕಾಶಕರ ಪಾಲಾದರೆ ಆಗ ಲೇಖಕನ ಒಪ್ಪಿಗೆ ಇಲ್ಲದೆ ಅದರ ಎರಡನೇ ಆವೃತ್ತಿಯನ್ನು ಪ್ರಕಟಿಸಲು ಯಾವ ಅಡೆತಡೆಯೂ ಎದುರಾಗದು. ಒಂದರ್ಥದಲ್ಲಿ ಪ್ರಕಾಶಕರು ಲೇಖಕರನ್ನು ಆರ್ಥಿಕವಾಗಿ ಶೋಷಣೆಗೆ ಒಳಪಡಿಸುತ್ತಿದ್ದಾರೆ. ಹಾಗೆಂದು ಎಲ್ಲ ಪ್ರಕಾಶಕರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ತಪ್ಪು ನಿರ್ಧಾರವಾಗುತ್ತದೆ. ಆದರೆ ಲೇಖಕರನ್ನು ಪೋಷಿಸಿ ಬೆಳೆಸುವ ಪ್ರಕಾಶಕರ ಸಂಖ್ಯೆ ಕ್ಷೀಣಿಸುತ್ತಿದೆ ಎನ್ನುವ ಮಾತು ಸತ್ಯಕ್ಕೆ ಹತ್ತಿರವಾಗಿದೆ.

ಪ್ರಕಾಶಕರಿಂದ ಲೇಖಕನ ಶೋಷಣೆ ಒಂದು ಬಗೆಯಾದರೆ, ಅವನ ವೈಚಾರಿಕ ಪ್ರತಿಭೆಯನ್ನು ದಮನಗೊಳಿಸುವ ಪ್ರಭುತ್ವದ ಶೋಷಣೆ ಇನ್ನೊಂದು ಬಗೆ. ಪ್ರಭುತ್ವ ಎಂದಿಗೂ ತನ್ನನ್ನು ಪ್ರಶ್ನಿಸುವುದನ್ನು ಸಹಿಸಲಾರದು. ಬರಹಗಾರನ ವೈಚಾರಿಕ ಚಿಂತನೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಗೊಳಿಸುವ ಹುನ್ನಾರ ಕಾಲಕಾಲಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಅಟ್ಟಹಾಸವನ್ನು ಮೆರೆಯುತ್ತಾ ಬಂದಿದೆ. 'ಸದಾಕಾಲ ಸಮಾಜಕ್ಕೆ ಪ್ರಿಯವಾದದ್ದನ್ನೇ ಹೇಳುವುದು ಲೇಖಕನ ಕೆಲಸವಲ್ಲ. ಪ್ರತಿರೋಧದ ಮೂಲಕವೇ ನಿಜವಾದ ಸತ್ವಯುತ ಬರವಣಿಗೆ ಹೊರಹೊಮ್ಮುತ್ತದೆ. ಆದ್ದರಿಂದ ಓದುಗರನ್ನು ನಾವು ಬದುಕುತ್ತಿರುವ ಪರಿಸರದಲ್ಲಿನ ಜ್ವಲಂತ ಸಮಸ್ಯೆಗಳಿಗೆ ಮುಖಾಮುಖಿಯಾಗಿಸುವ ದಿಸೆಯಲ್ಲಿ ಬರವಣಿಗೆಯು ಪ್ರತಿರೋಧದ ನಡುವೆ ಹುಟ್ಟಿಕೊಳ್ಳುವ ಸೃಜನಶೀಲ ಸೃಷ್ಟಿ ಎನ್ನುವ ನಂಬಿಕೆ ನನ್ನದು' ಎನ್ನುತ್ತಾರೆ ಲೇಖಕ ಅಮಿತಾವ್ ಘೋಷ್.

ಇಂತಹ ತೊಡರುಗಳ ಜೊತೆಗೆ ಲೇಖಕನು ವಿಮರ್ಶೆ ಎಂಬ ಅಗ್ನಿದಿವ್ಯವನ್ನು ಹಾಯ್ದು ಬರಬೇಕು. ಈಗ ವಿಮರ್ಶೆಗೆ ಕೊಡುಕೊಳ್ಳುವಿಕೆಯ ಮಾರುಕಟ್ಟೆ ಮೌಲ್ಯ ಪ್ರಾಪ್ತವಾಗಿದೆ. ವಿಮರ್ಶಕ ಎಂತಹ ಗಟ್ಟಿ ಸಾಹಿತ್ಯವನ್ನೂ ಪ್ರಪಾತಕ್ಕೆ ತಳ್ಳಬಹುದು ಮತ್ತು ಟೊಳ್ಳು ಬರವಣಿಗೆಯನ್ನು ಮೇಲ್ಪಂಕ್ತಿಗೆ ತರಬಹುದು. ಲೇಖಕನನ್ನು ವೈಚಾರಿಕವಾಗಿ ಹಣಿಯುವ ಷಡ್ಯಂತ್ರದಲ್ಲಿ ವಿಮರ್ಶಾಲೋಕದ ಪಾಲಿದೆ ಎನ್ನುವ ಆರೋಪವನ್ನು ಸಂಪೂರ್ಣವಾಗಿ ತಳ್ಳಿಹಾಕುವಂತಿಲ್ಲ.



ಒಟ್ಟಾರೆ, ಆರ್ಥಿಕ ಶೋಷಣೆ, ಪ್ರಭುತ್ವದ ಹಿಂಸೆ ಮತ್ತು ವಿಮರ್ಶೆಯ ಕಾಕದೃಷ್ಟಿಗೆ ಲೇಖಕ ಏಕಕಾಲಕ್ಕೆ ಒಳಗಾಗುತ್ತಿದ್ದಾನೆ. ಈ ನಡುವೆ ಕಥೆ, ಕವಿತೆ, ಪ್ರಬಂಧ, ಪುಸ್ತಕ ಸ್ಪರ್ಧೆಗಳ ಅಖಾಡದಲ್ಲಿ ಲೇಖಕ ಪ್ರತಿಸ್ಪರ್ಧಿಗಳ ವಿರುದ್ಧ ತೊಡೆ ತಟ್ಟಬೇಕು. ಪ್ರಶಸ್ತಿ, ಪುರಸ್ಕಾರಗಳಿಗಾಗಿ ಲಾಬಿ ಮಾಡುತ್ತ ಶಿಫಾರಸಿಗಾಗಿ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಓಲೈಕೆಯಲ್ಲಿ ತೊಡಗಬೇಕು. ತನ್ನ ನಡೆ, ನುಡಿಯನ್ನು ಹದ್ದಿನ ಕಣ್ಣಿನಿಂದ ಅವಲೋಕಿಸುತ್ತಿರುವ ಸಮಾಜದ ದೃಷ್ಟಿಗೆ ಬಲಿಪಶುವಾಗಬೇಕು. ಇಂತಹ ಸನ್ನಿವೇಶದಲ್ಲಿ ನಿಜವಾದ ಸತ್ವಯುತ ಬರವಣಿಗೆ ಸೃಷ್ಟಿಯಾಗುವುದಾದರೂ ಹೇಗೆ?

ಯಶವಂತ ಚಿತ್ತಾಲರು ಹೇಳಿದಂತೆ, ಲೇಖಕನ ಸೃಷ್ಟಿಕಾರ್ಯಕ್ಕೆ ಬೇಕಾದದ್ದು 'ನಿನ್ನ ಬರವಣಿಗೆ ಬೇಕು' ಎನ್ನುವ ಇಷಾರೆ, 'ಬರೆಯುವುದನ್ನು ನಿಲ್ಲಿಸಬೇಡ' ಎನ್ನುವಂಥ ಪುಸಲಾಯಿಸುವಿಕೆ. ಇಂತಹ ವಾತಾವರಣ ನಿರ್ಮಾಣವಾಗುವುದೇ ಎನ್ನುವುದು ಸದ್ಯದ ಸಂದರ್ಭದಲ್ಲಿ ಒಂದು ಯಕ್ಷಪ್ರಶ್ನೆಯಾಗಿದೆ.

ವಾಚಕರ ವಾಣಿ

ವೃತ್ತಿ ನಿಂದನೆ ಸರಿಯೇ?

'ಕಲ್ಲೊಡೆದುಕೊಂಡು ಇದ್ದವರನ್ನು ಲೋಕಸಭೆಗೆ ಆರಿಸಿ ಕಳಿಸಿದರೆ ಇನ್ನೇನಾಗುತ್ತದೆ' ಎಂದು, ಪ್ರತ್ಯೇಕ ರಾಷ್ಟ್ರದ ಪರ ಧ್ವನಿ ಎತ್ತಿರುವ ಸಂಸದ ಡಿ.ಕೆ.ಸುರೇಶ್ ಅವರ ವಿರುದ್ಧ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಟೀಕಾಪ್ರಹಾರ ನಡೆಸಿರುವುದನ್ನು (ಪ್ರ.ವಾ., ಫೆ. 3) ಓದಿ ಬೇಸರವಾಯಿತು. ದೇಶದ ಸಾಂವಿಧಾನಿಕ ಹುದ್ದೆಯು ಪ್ರಜಾಪ್ರಭುತ್ವ ಮತ್ತು ಸಂವಿಧಾನ ಕೊಟ್ಟಿರುವ ಅವಕಾಶದ ಮೇಲೆ ಸಿಗುತ್ತದೆಯೇ ವಿನಾ ಯಾವುದೇ ವೃತ್ತಿ, ಜಾತಿ, ಭಾಷೆಯ ಆಧಾರದಲ್ಲಿ ಅಲ್ಲ. ಈ ಸಾಮಾನ್ಯ ವಿಷಯವನ್ನು ಕುಮಾರಸ್ವಾಮಿ ಅವರು ಮರೆತರೇ? ಅವರ ಹೇಳಿಕೆಯಂತೆಯೇ ನೋಡುವುದಾದರೆ, ಎಚ್.ಡಿ.ದೇವೇಗೌಡರದು ರೈತ ಕುಟುಂಬ. 'ನಾವು ಮಣ್ಣಿನ ಮಕ್ಕಳು' ಎಂದು ಹೇಳಿಕೊಳ್ಳುವವರು ಸಂಸದರೂ ಆದರು, ದೇಶದ ಪ್ರಧಾನಿಯೂ ಆದರು. ಹಾಗಾದರೆ ಆಗ ಅವರಿಗೆ ಅವರ ಕೌಟುಂಬಿಕ ವೃತ್ತಿಯ ಆಧಾರದಲ್ಲಿ ಹುದ್ದೆಯನ್ನು ನಿರಾಕರಿಸಲಾಯಿತೇ? ಈ ರೀತಿಯ ಟೀಕೆಯು ಕಲ್ಲು ಒಡೆಯುವ ಕೆಲವು ಸಮುದಾಯಗಳ ಜನರನ್ನು ಹಾಗೂ ಅವರ ವೃತ್ತಿಯನ್ನು ಕೇವಲವಾಗಿ ಕಂಡು, ಅವರನ್ನು ಅವಮಾನಿಸಿದಂತೆ ಆಗುವುದಿಲ್ಲವೇ?

ಹುಸೇನಬಾಷಾ, ತಳೇವಾಡ, ಹುಬ್ಬಳ್ಳಿ

ಜಿಎಸ್‌ಟಿ ಪಾಲು: ಪ್ರತಿದಿನವೂ ಹಂಚಿಕೆಯಾಗಲಿ

ಕೇಂದ್ರ ಸರ್ಕಾರವು ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತಂದ ಮೇಲೆ ರಾಜ್ಯಗಳ ಆರ್ಥಿಕ ಸ್ವಾಯತ್ತತೆಗೆ ನಿಜಕ್ಕೂ ಪೆಟ್ಟಾಗಿದೆ. ತಮ್ಮ ಪಾಲಿನ ಜಿಎಸ್‌ಟಿ ಹಣಕ್ಕಾಗಿ ಅವು ಕೇಂದ್ರದ ಮುಂದೆ ಪದೇಪದೇ ಬೇಡುತ್ತಾ ನಿಲ್ಲಬೇಕಾಗಿದೆ. ರಾಜ್ಯಗಳ ಪಾಲು ಹಲವಾರು ಸಂದರ್ಭಗಳಲ್ಲಿ ಬೆಟ್ಟದಂತೆ ಬೆಳೆದು ಒತ್ತಡ ಹೆಚ್ಚಿದಾಗ, ಒಂದಷ್ಟು ಪಾಲನ್ನು ನೀಡುತ್ತಾ ರಾಜ್ಯಗಳಿಗೆ ದೊಡ್ಡ ಉಪಕಾರವನ್ನು ಮಾಡಿದ ರೀತಿಯಲ್ಲಿ ಬಿಂಬಿಸಿಕೊಳ್ಳುತ್ತಿದೆ ಕೇಂದ್ರ. ಇದರ ಬದಲಿಗೆ, ಪ್ರತಿದಿನವೂ ಸಂಗ್ರಹವಾಗುವ ಜಿಎಸ್‌ಟಿ ಹಣದಲ್ಲಿ ರಾಜ್ಯದ ಪಾಲು ಮತ್ತು ಕೇಂದ್ರದ ಪಾಲು ಎಂದು ವಿಭಜಿಸಿ, ಆಯಾ ದಿನದ ಜಿಎಸ್‌ಟಿ ಪಾಲನ್ನು ಆಯಾ ದಿನವೇ ಸಂಬಂಧಪಟ್ಟ ಸರ್ಕಾರಗಳ ಖಜಾನೆಗೆ ನೀಡುವಂತಹ ತಂತ್ರಾಂಶವನ್ನು ಅಳವಡಿಸಬೇಕಾಗಿದೆ. ಇಂತಹ ಒಂದು ವ್ಯವಸ್ಥೆ ಬರದಿದ್ದರೆ ರಾಜ್ಯಗಳು ಬಹಳಷ್ಟು ಸಂದರ್ಭಗಳಲ್ಲಿ ಆರ್ಥಿಕ ಸಂಕಷ್ಟಗಳಿಗೆ ಗುರಿಯಾಗುತ್ತವೆ.

ಇನ್ನು ಕೇಂದ್ರ ಸರ್ಕಾರ ಹಲವಾರು ಯೋಜನೆಗಳಿಗೆ ರಾಜ್ಯಗಳು ನೀಡುವ ಪಾಲಿಗಿಂತ ಕಡಿಮೆ ಮೊತ್ತವನ್ನು ನೀಡಿದ್ದರೂ ಇವು ತನ್ನ ಯೋಜನೆಗಳು ಎಂದು ಜಾಹೀರಾತಿನಲ್ಲಿ ಬಿಂಬಿಸಿಕೊಳ್ಳುವ ಉದಾಹರಣೆಗಳೂ ಇವೆ. ಇದು, ಅಭಿವೃದ್ಧಿಯ ವಿಚಾರದಲ್ಲಿ ರಾಜ್ಯಗಳ ಸಾಧನೆ ಶೂನ್ಯ ಎಂಬ ರಾಜಕೀಯ ವಿಮರ್ಶೆಗಳಿಗೆ ದಾರಿಯಾಗುತ್ತದೆ.

ಕೆ.ಎಸ್.ನಾಗರಾಜ್, ಬೆಂಗಳೂರು

ಮೊದಲೇ ಕೊಡಿ...

ಪ್ರಶಸ್ತಿ-ಪುರಸ್ಕಾರ ಸ್ವೀಕರಿಸುವವರು
ಗಟ್ಟಿಮುಟ್ಟಾಗಿ, ಆರೋಗ್ಯವಂತರಾಗಿ
ಇರುವಾಗಲೇ ಕೊಡಿ,
ಅವರೂ ಆನಂದಿಸಲಿ,
ಹಿಂದಿನ ಎಷ್ಟೋ ಸಂಗತಿಗಳು
ಮರೆತುಹೋಗಿರಬಹುದಾದ
ಇಳಿವಯಸ್ಸಿನಲ್ಲಿ ಪ್ರಶಸ್ತಿ
ಕೊಡುವುದರಿಂದ ಪ್ರಶಸ್ತಿಗಳ
ಸಂಖ್ಯೆ ಹೆಚ್ಚಿಸಿದಂತಾಗುತ್ತದೆ, ಅಷ್ಟೇ.

ಟಿ.ಆರ್.ರಘುನಾಥ್
ಬೆಂಗಳೂರು

ಸಾವಿನ ಸುದ್ದಿಯಲ್ಲಿ ಹುಚ್ಚಾಟವೇಕೆ?

ಗರ್ಭಕಂಠದ ಕ್ಯಾನ್ಸರ್ ಬಗ್ಗೆ ಜನಜಾಗೃತಿ ಮೂಡಿಸಲು, ತಾವು ನಿಧನರಾಗಿದ್ದಾಗಿ ನಟಿ, ರೂಪದರ್ಶಿ ಪೂನಂ ಪಾಂಡೆ ಸುಳ್ಳು ಸುದ್ದಿ ಹಬ್ಬಿಸಿದ್ದು ಮೂರ್ಖತನದ ಪರಮಾವಧಿ. ಅರಿವು ಮೂಡಿಸಲೇಬೇಕು ಎಂದಾದರೆ ಅದಕ್ಕೆ ಬಹಳಷ್ಟು ಮಾರ್ಗಗಳಿವೆ. ಅದನ್ನು ಬಿಟ್ಟು ತಾವು ಸತ್ತಿರುವುದಾಗಿ ಸುಳ್ಳು ಸುದ್ದಿ ಹಬ್ಬಿಸುವುದು 'ಅರಿವಿ'ಗೆ ಮಾಡುವ ಅಪಮಾನ. ಪ್ರಚಾರ ಪಡೆಯುವ ಸಲುವಾಗಿ ಯಾವ ಮಟ್ಟಕ್ಕೆ ಬೇಕಾದರೂ ಇಳಿಯಲು ಸಿದ್ಧ ಎನ್ನುವುದನ್ನು ಪೂನಂ ಪಾಂಡೆ ಸಾಬೀತು ಮಾಡಿದ್ದಾರೆ.

ಮುರುಗೇಶ ಡಿ., ದಾವಣಗೆರೆ

ಏಕತೆಯ ಹೆಸರಿನಲ್ಲಿ ಕಡೆಗಣನೆ

ಸಂಸದ ಡಿ.ಕೆ.ಸುರೇಶ್ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಾಗೆ ನೋಡಿದರೆ, ಇಂತಹ ಮಾತುಗಳನ್ನು ಆಡಿದವರಲ್ಲಿ ಸುರೇಶ್ ಮೊದಲಿಗರೇನಲ್ಲ. ಅರ್ಧ ಶತಮಾನದ ಹಿಂದೆಯೇ ಅಣ್ಣಾದೊರೈ ಪ್ರತ್ಯೇಕ ದ್ರಾವಿಡ ನಾಡಿನ ಮಾತನಾಡಿದ್ದರು. ಪಂಜಾಬ್, ಕಾಶ್ಮೀರ, ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತೆಯ ಮಾತುಗಳು ಹಲವು ಬಾರಿ ಕೇಳಿಬಂದಿವೆ. ಹಿಂದಿ ಹೇರಿಕೆಯ ಬಗೆಗಿನ ಪ್ರತಿಭಟನೆಗಳಲ್ಲಿ 'ಹಿಂದಿಯನ್ನು ಹೇರಿದರೆ ದೇಶ ಚಿಂದಿ' ಅನ್ನುವ ಘೋಷಣೆ ಸಾಮಾನ್ಯ. ರಾಷ್ಟ್ರದ ಏಕತೆಯ ಹೆಸರಿನಲ್ಲಿ ಪಕ್ಷಪಾತ, ಅನ್ಯಾಯವನ್ನು ಎಷ್ಟು ವರ್ಷ ಸಹಿಸಲು ಸಾಧ್ಯ? ಆದರೆ, ಕಾಂಗ್ರೆಸ್‌ನ ಸುರೇಶ್ ಅವರು ಆಡಿದ ಮಾತು 'ಭೂತದ ಬಾಯಲ್ಲಿ ಭಗವದ್ಗೀತೆ'ಯಂತೆ ಕಂಡಿತು. ಪಕ್ಷಪಾತ, ಅನ್ಯಾಯದ ಕೆಟ್ಟ ಪರಂಪರೆಗೆ ನಾಂದಿ ಹಾಡಿದ್ದೇ ಕಾಂಗ್ರೆಸ್. ಕರ್ನಾಟಕಕ್ಕೆ ಅತಿ ಹೆಚ್ಚು ಅನ್ಯಾಯವಾಗಿರುವುದು ಕಾಂಗ್ರೆಸ್ ನೇತೃತ್ವದ ಆಡಳಿತದಲ್ಲೇ.

ಮಹಾಜನ್ ಆಯೋಗವನ್ನು ನೇಮಿಸಿದ ಕೇಂದ್ರ, ಅದರ ವರದಿಯಲ್ಲಿನ ಶಿಫಾರಸುಗಳನ್ನು ಏಕೆ ಜಾರಿ ಮಾಡಲಿಲ್ಲ? ರೈಲ್ವೆಯಲ್ಲಿ ಕರ್ನಾಟಕ ಕೊನೆಯ ಸ್ಥಾನದಲ್ಲಿದೆ. ಕೃಷ್ಣಾ ವಿಚಾರದಲ್ಲಿ ಅನ್ಯಾಯ ಆಗಿದ್ದು ಯಾರ ಕಾಲದಲ್ಲಿ? ಇನ್ನು ಮಹದಾಯಿ ವಿಚಾರದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೇ ಗೋವಾ ಪರ ಮಾತನಾಡಿದ್ದರು. ಹೀಗೆ ಹೇಳುತ್ತಾ ಹೋದರೆ ಪಟ್ಟಿ ಸುದೀರ್ಘವಾಗುತ್ತದೆ. ಬಿಜೆಪಿಯವರು ಅನ್ಯಾಯ, ಪಕ್ಷಪಾತದ ನಿಲುವನ್ನು ಮುಂದುವರಿಸಿದ್ದಾರೆ. ಸ್ಥಳೀಯ ಭಾಷೆಗಳ ಮೇಲೆ ಹಿಂದಿಯನ್ನು ಹೇರುವ ಪ್ರಯತ್ನ ಮುಂದುವರಿದಿದೆ. ಕರ್ನಾಟಕದ ಬ್ಯಾಂಕುಗಳನ್ನು ಉತ್ತರ ಭಾರತದ ಬ್ಯಾಂಕುಗಳಲ್ಲಿ ವಿಲೀನಗೊಳಿಸಿ ಅಲ್ಲೆಲ್ಲ ಹಿಂದಿ ಭಾಷಿಕರನ್ನು ತುಂಬುತ್ತಿದ್ದಾರೆ. ಮಹದಾಯಿ, ಮೇಕೆದಾಟು ವಿಚಾರದಲ್ಲಿ ಕರ್ನಾಟಕದ ಕೂಗಿಗೆ ಕೇಂದ್ರವು ಕಿವುಡಾಗಿದೆ. ಒಟ್ಟಿನಲ್ಲಿ ಬಿಜೆಪಿ- ಕಾಂಗ್ರೆಸ್ ಎರಡೂ ಪಕ್ಷಗಳು ಕರ್ನಾಟಕವನ್ನು ಕಡೆಗಣಿಸಿವೆ. 'ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೇ!' ಎನ್ನುವ ಕನ್ನಡಿಗರಿಗೆ 'ರಾಷ್ಟ್ರೀಯತೆ'ಯ ಬೋಧನೆ ಮಾಡುವ ಅಗತ್ಯವಿಲ್ಲ. ಆದರೆ, ರಾಷ್ಟ್ರದ ಏಕತೆಯ ಹೆಸರಿನಲ್ಲಿ ನಡೆಯುತ್ತಿರುವ ಕಡೆಗಣನೆ, ಪಕ್ಷಪಾತವನ್ನು ಇನ್ನೆಷ್ಟು ದಿನ ಸಹಿಸಬೇಕು? ಸಹನೆಗೂ ಮಿತಿ ಇದೆ ಎಂಬುದನ್ನು ಆಳುವವರು ಮತ್ತು ರಾಷ್ಟ್ರೀಯ ಪಕ್ಷಗಳು ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.

ರಾ.ನಂ.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಾವು ಸಾಯಬೇಕು ಅಂತ ನಮ್ಮ ಹಣೆಯಲ್ಲಿ ಬರೆದಿದ್ದರೆ ನಾವು ಸಾಯುತ್ತೇವೆ. ಹಸಿವಿನಿಂದ ಸಾಯುವುದಕ್ಕಿಂತ ಇದು ಉತ್ತಮ. ಕೊನೆಪಕ್ಷ ನಮ್ಮ ಮಕ್ಕಳಿಗಾದರೂ ಏನಾದರೂ ಸಿಗಲಿ
ಜಬ್ಬರ್ ಸಿಂಗ್

ಇಲ್ಲಿ ಕೆಲಸವಿಲ್ಲ. ಅದಕ್ಕಾಗಿ ನಾನು ಎಲ್ಲಾದರೂ ಕೆಲಸ ಮಾಡಲೇಬೇಕು. ಯುದ್ಧಪೀಡಿತ ಜಾಗಕ್ಕೆ ಹೋಗುತ್ತಿದ್ದೇನೆ ಎಂದು ತಿಳಿದಿದೆ. ಆದರೆ, ನಾನು ನನ್ನ ಕುಟುಂಬದವರ ಹೊಟ್ಟೆ ತುಂಬಿಸಬೇಕು. ಇಲ್ಲವಾದರೆ, ನನ್ನ ಮಕ್ಕಳು ಹಸಿವಿನಿಂದ ಸಾಯುತ್ತಾರಷ್ಟೆ
ಕೇಶವ್ ದಾಸ್

ಭಾರತದಲ್ಲಿ ಯಾವುದೇ ಉದ್ಯೋಗವಿಲ್ಲ. ಅದಕ್ಕಾಗಿ ಜನರು ಇಸ್ರೇಲ್‌ಗೆ ಹೊರಟಿದ್ದಾರೆ. ಸಾಯುವುದೇ ನಮ್ಮ ವಿಧಿಯಾದರೆ, ಇಲ್ಲಿ ಸತ್ತರೇನು, ಅಲ್ಲಿ ಸತ್ತರೇನು
ಲೇಖರಾಮ್

ಸರ್ಕಾರಿ ಉದ್ಯೋಗಕ್ಕಾಗಿ ನಾನು ಮೂರು ವರ್ಷಗಳಿಂದ ಪ್ರಯತ್ನಿಸುತ್ತಿದ್ದೇನೆ. ನನ್ನದು ಬಡ ಕುಟುಂಬ. ಮುಂದೆ ಓದಲು ನನಗೆ ಸಾಧ್ಯವಿಲ್ಲ. ಭಾರತದಲ್ಲಿ ಕೆಲಸ ಸಿಗುವುದು ಕಷ್ಟ. ಅದಕ್ಕಾಗಿಯೇ ನಾನು ಇಸ್ರೇಲ್‌ಗೆ ಹೊರಟಿದ್ದೇನೆ
ದಿಲೀಪ್

‘ಇಲ್ಲಿ ಹಸಿವಿನಿಂದ ಸಾಯುವುದಕ್ಕಿಂತ ಅಲ್ಲಿ ಸಾಯುವುದು ಉತ್ತಮ’

• ಸುಕೃತ ಎಸ್.

ಭಾರತದ ಸುಮಾರು 10 ಸಾವಿರ ಜನರು ಯುದ್ಧಪೀಡಿತ ಇಸ್ರೇಲ್‌ಗೆ ಹೊರಟುನಿಂತಿದ್ದಾರೆ. ಭಾರತ ಸರ್ಕಾರವು ಈ ಎಲ್ಲರನ್ನೂ ಇಸ್ರೇಲ್‌ಗೆ ಕಳುಹಿಸುವ ಸಿದ್ಧತೆ ನಡೆಸಿದೆ ಮತ್ತು ಈ ವಾರದಿಂದಲೇ ಗುಂಪು ಗುಂಪಾಗಿ ಜನರು ಇಸ್ರೇಲ್‌ಗೆ ಪ್ರಯಾಣ ಬೆಳೆಸಲಿದ್ದಾರೆ. ಭಾರತದ ಜನರು ಇಸ್ರೇಲ್‌ಗೆ ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ತೆರಳುತ್ತಿದ್ದಾರೆ. ಕೆಲವರು ಗಾರೆ ಕೆಲಸಕ್ಕಾಗಿ, ಕೆಲವರು ಬಾರ್ ಬೆಂಡಿಂಗ್ ಕೆಲಸಕ್ಕಾಗಿ, ಕೆಲವರು ಫ್ರೇಮ್‌ವರ್ಕ್ ಕಾರ್ಮಿಕರಾಗಿ ಮತ್ತು ಸೆರಾಮಿಕ್ ಟೈಲ್ಸ್ ಕಾರ್ಮಿಕರಾಗಿ ಇಸ್ರೇಲ್‌ಗೆ ಹೊರಟಿದ್ದಾರೆ.

ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ಶೇ 80ರಷ್ಟು ಕಾರ್ಮಿಕರು ಪ್ಯಾಲೆಸ್ಟೀನಿನ ಜನರು. ಸುಮಾರು 80 ಸಾವಿರ ಜನರು ವೆಸ್ಟ್ ಬ್ಯಾಂಕ್‌ನವರಾದರೆ, 17 ಸಾವಿರ ಜನರು ಗಾಜಾಪಟ್ಟಿಯವರು. ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದರು ಎನ್ನುವ ಕಾರಣಕ್ಕಾಗಿ ಪ್ಯಾಲೆಸ್ಟೀನಿನ ಕಾರ್ಮಿಕರನ್ನು ಇಸ್ರೇಲ್ ಕೆಲಸಗಳಿಂದ ತೆಗೆದುಹಾಕಿತು. ನಾಲ್ಕು ತಿಂಗಳಿನಿಂದ ಯುದ್ಧ ನಡೆಯುತ್ತಿದೆ. ಇಸ್ರೇಲ್‌ನಲ್ಲಿ ಕಾರ್ಮಿಕರ ದೊಡ್ಡ ಕೊರತೆಯೇ ಉಂಟಾಗಿದೆ. ಇದೇ ಕಾರಣಕ್ಕೆ ಈಗ ಇಸ್ರೇಲ್ ಬೇರೆ ಬೇರೆ ದೇಶಗಳಿಂದ ಜನರನ್ನು ತನ್ನ ದೇಶಕ್ಕೆ ಕಾರ್ಮಿಕರಾಗಿ ಕರೆಸಿಕೊಳ್ಳುವ ಯೋಜನೆಯನ್ನು ಹಾಕಿಕೊಂಡಿದೆ.

ಯುದ್ಧ ನಡೆಯುತ್ತಿರುವ ದೇಶವೊಂದಕ್ಕೆ ಭಾರತದ ಜನರನ್ನು ಕಳುಹಿಸುವ ಕೇಂದ್ರ ಸರ್ಕಾರದ ಯತ್ನವು ಕಾರ್ಮಿಕ ಒಕ್ಕೂಟಗಳ ಆಕ್ರೋಶಕ್ಕೂ ಕಾರಣವಾಗಿದೆ. ಸರ್ಕಾರದ ನಡೆಯ ಕುರಿತು ನ್ಯಾಯಾಲಯದ ಮೆಟ್ಟಿಲೇರುವ ಎಚ್ಚರಿಕೆಯನ್ನೂ ಒಕ್ಕೂಟಗಳು ನೀಡಿವೆ. ಒಕ್ಕೂಟದ ಆಕ್ರೋಶಕ್ಕೆ ಹಲವು ಗಂಭೀರ ಕಾರಣಗಳೂ ಇವೆ. ಇದಿಷ್ಟು ಹಿನ್ನೆಲೆ.

ಜನರ ಹಸಿವು... ಇಲ್ಲದ ಉದ್ಯೋಗ

ದಿಲೀಪ್, ಜಬ್ಬರ್ ಸಿಂಗ್, ಲೇಖರಾಮ್‌ರಂಥ ಸಾವಿರಾರು ಜನರು ಇಸ್ರೇಲ್‌ಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಇವರ ಹೇಳಿಕೆಗಳೇ ಅವರ ಸ್ಥಿತಿಯ ಕೈಗನ್ನಡಿಯಂತಿವೆ. ಉತ್ತರ ಪ್ರದೇಶ ಹಾಗೂ ಹರಿಯಾಣ ಸರ್ಕಾರವು ಈ ಬಗ್ಗೆ ಜಾಹೀರಾತುಗಳನ್ನು ನೀಡಿದ್ದವು. ಕಿ.ಮೀಗಟ್ಟಲೆ ಉದ್ದದ ಸರತಿಯಲ್ಲಿ ಸಾವಿರಾರು ಜನರು ನಿಂತಿದ್ದರು. ‘ಯುದ್ಧನಡೆಯುತ್ತಿದೆ ಎಂದು ಗೊತ್ತಿದೆ. ಆದರೂ ಕುಟುಂಬದ ಹೊಟ್ಟೆಹೊರೆಯಲು ಇಸ್ರೇಲ್‌ಗೆ ಹೋಗಬೇಕಿರುವುದು ಅನಿವಾರ್ಯ’ ಎನ್ನುವುದು ಎಲ್ಲ ಆಕಾಂಕ್ಷಿಗಳ ಅಭಿಪ್ರಾಯ. ‘ನೋಟು ರದ್ದತಿ, ಕೋವಿಡ್ ಕಾಲದಲ್ಲಿ ಆದ ಉದ್ಯೋಗ ನಷ್ಟವು ನಮ್ಮನ್ನು ಹೈರಾಣಾಗಿಸಿದೆ’ ಎನ್ನುತ್ತಾರೆ. 25 ವರ್ಷದಿಂದ 50 ವರ್ಷದ ಒಳಗಿನ ಪುರುಷರು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದರು.

‘ಬಜೆಟ್ ಮಂಡನೆಯ ಬಳಿಕ, ವಿಕಸಿತ ಭಾರತದ ಕುರಿತು ಹಲವು ಚರ್ಚೆಗಳು ನಡೆಯುತ್ತಿವೆ. 2047ರ ಹೊತ್ತಿಗೆ ವಿಕಸಿತ ಭಾರತ ರೂಪುಗೊಳ್ಳುತ್ತದೆ. ನಮ್ಮದು ಐದು ಟ್ರಿಲಿಯನ್ ಆರ್ಥಿಕತೆ ಆಗಲಿದೆ ಎಂದು ಕೇಂದ್ರ ಸರ್ಕಾರವು ಹೇಳುತ್ತಿದೆ. ಆದರೆ, ದೇಶದ ಜನರು ಹಸಿವು ಹಾಗೂ ನಿರುದ್ಯೋಗದ ಕಾರಣಕ್ಕಾಗಿ ಯುದ್ಧಪೀಡಿತ ಇಸ್ರೇಲ್‌ಗೆ ತೆರಳುವುದಕ್ಕೆ ಅಣಿಯಾಗಿದ್ದಾರೆ. ಇದೆಂಥ ಪರಿಸ್ಥಿತಿ’ ಎಂದು ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ದೂರುತ್ತಿವೆ. ‘ಇಸ್ರೇಲ್–ಹಮಾಸ್ ಯುದ್ಧ ಆರಂಭಗೊಂಡಾಗ, ಆಪರೇಷನ್ ಅಜಯ್ ಮೂಲಕ ಇಸ್ರೇಲ್‌ನಲ್ಲಿದ್ದ ಭಾರತೀಯರನ್ನು ದೇಶಕ್ಕೆ ವಾಪಸು ಕರೆತಂದಿರಿ. ಆದರೆ, ಈಗ ಅದೇ ಜಾಗಕ್ಕೆ ದೇಶದ ಬಡವರನ್ನು ದೂಡುತ್ತಿದ್ದೀರಲ್ಲವೇ’ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ಘಟಕವು ಸರ್ಕಾರವನ್ನು ಪ್ರಶ್ನಿಸಿದೆ.

ಆಧಾರ: ಪಿಟಿಐ, ಎಪಿ, ಎಎಫ್‌ಪಿ, ಭಾರತೀಯ ವಿದೇಶಾಂಗ ಸಚಿವಾಲಯದ ಪ್ರಕಟಣೆಗಳು

ಯುದ್ಧಪೀಡಿತ ಇಸ್ರೇಲ್‌ಗೆ ಭಾರತೀಯ ಕಾರ್ಮಿಕರು



ಇಸ್ರೇಲ್‌ಗೆ ತೆರಳುವುದಕ್ಕಾಗಿ ಅರ್ಜಿ ಸಲ್ಲಿಸಲು ಲಖನೌದ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಜನ ಸೇರಿದ್ದರು –ಎಎಫ್‌ಪಿ ಚಿತ್ರ

ಇಸ್ರೇಲ್‌ಗೆ ಹೊರಟಿರುವವರಿಗಿಲ್ಲ ಭದ್ರತೆ

ಕಾರ್ಮಿಕರ ವಲಸೆ ಎನ್ನುವುದು ದೇಶವೊಂದಕ್ಕೆ ಹೆಚ್ಚಿನ ಜವಾಬ್ದಾರಿಯುತ ಪ್ರಕ್ರಿಯೆ. ವಿದೇಶಗಳಲ್ಲಿನ ಭಾರತೀಯ ಕಾರ್ಮಿಕರ ಸುರಕ್ಷತೆ, ಭದ್ರತೆ ಕೂಡ ಸರ್ಕಾರದ್ದೆ ಹೊಣೆಗಾರಿಕೆ. ಹೀಗೆ ಭಾರತೀಯರು ಇತರೆ ದೇಶಗಳಿಗೆ ಉದ್ಯೋಗಕ್ಕಾಗಿ ತೆರಳುವುದಕ್ಕೆ ಕೇಂದ್ರ ಸರ್ಕಾರವು ಹಲವು ಮಾರ್ಗಸೂಚಿಗಳನ್ನು, ನಿಯಮಗಳನ್ನು ಹಾಕಿಕೊಂಡಿದೆ. ಸುಲಭದಲ್ಲಿ ಎಲ್ಲ ದೇಶಗಳಿಗೆ ಉದ್ಯೋಗಕ್ಕಾಗಿ ಭಾರತೀಯರನ್ನು ಕಳುಹಿಸುವುದೂ ಇಲ್ಲ. ಭಾರತೀಯರ ಭದ್ರತೆಗಾಗಿಯೇ ಕೇಂದ್ರ ಸರ್ಕಾರವು, ವಲಸೆಗಾಗಿ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಯುದ್ಧಪೀಡಿತ ದೇಶಗಳಿಗೆ, ಸಂಘರ್ಷ ಇರುವ ದೇಶಗಳಿಗೆ ತೆರಳುವುದಕ್ಕೆ ಮೊದಲು ಭಾರತೀಯರು ‘ಇ–ಮೈಗ್ರೇಟ್’ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಹೀಗೆ ನೋಂದಾಯಿಸಿಕೊಳ್ಳುವವರಿಗೆ ಸರ್ಕಾರವು ವಿಮೆ ಸೌಲಭ್ಯವನ್ನೂ ನೀಡುತ್ತದೆ. ಜೊತೆಗೆ, ಭಾರತೀಯರಿಗೆ ಯಾವುದೇ ತೊಂದರೆಯಾದರೂ ಸರ್ಕಾರಕ್ಕೆ ಅದರ ಹೊಣೆಗಾರಿಕೆ ಇರುತ್ತದೆ. ಆದರೆ, ಇಸ್ರೇಲ್‌ಗೆ ಹೊರಟಿರುವವರಿಗೆ ಇದ್ಯಾವುದೂ ಇಲ್ಲವಾಗಿದೆ.

ಭಾರತೀಯ ಕಾರ್ಮಿಕರು ಇಸ್ರೇಲ್‌ಗೆ ಹೊರಟಿರುವುದು ಖಾಸಗಿ ನೇಮಕಾತಿ ಪ್ರಕ್ರಿಯೆ ಮೂಲಕ. ಇದಕ್ಕೆ ಇಸ್ರೇಲ್ ಹಾಗೂ ಭಾರತ ಸರ್ಕಾರದ ಒಪ್ಪಿಗೆ ಇದೆ. ಈ ಬಗ್ಗೆ ಎರಡೂ ಸರ್ಕಾರಗಳು 2023ರ ಮೇ ತಿಂಗಳಿನಲ್ಲಿಯೇ ಒಪ್ಪಂದವೊಂದನ್ನು ಮಾಡಿಕೊಂಡಿದೆ. ಕಟ್ಟಡ ನಿರ್ಮಾಣ ಹಾಗೂ ನರ್ಸಿಂಗ್ ಕೆಲಸಕ್ಕಾಗಿ 42 ಸಾವಿರ ಭಾರತೀಯ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸುವ ಒಪ್ಪಂದವು ಏರ್ಪಟ್ಟಿತ್ತು.

ಇಸ್ರೇಲ್‌ಗೆ ಭಾರತೀಯರು ಹೊರಟಿರುವುದು ಖಾಸಗಿ ನೇಮಕಾತಿ ಮೂಲಕ. ಆದ್ದರಿಂದ, ಭಾರತೀಯರು ಇ–ಮೈಗ್ರೇಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಅನಿವಾರ್ಯವಲ್ಲ. ಪ್ರವಾಸಿ ಭಾರತೀಯ ವಿಮಾ ಯೋಜನೆಯನ್ನು ಮಾಡಿಸಿಕೊಳ್ಳುವುದು ವಲಸೆ ಹೊರಟಿರುವ ಭಾರತೀಯರಿಗೆ ಕಡ್ಡಾಯ. ₹10 ಲಕ್ಷದವರೆಗೆ ವಿಮೆ ಸೌಲಭ್ಯ ಇದರಲ್ಲಿದೆ. ಆದರೆ, ಇಸ್ರೇಲ್‌ಗೆ ಹೊರಟಿರುವವರಿಗೆ ಈ ಸೌಲಭ್ಯ ಸಿಗುವುದಿಲ್ಲ.

ಇಡೀ ನೇಮಕಾತಿ ಪ್ರಕ್ರಿಯೆಯ ಜವಾಬ್ದಾರಿಯನ್ನು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ ವಹಿಸಿಕೊಂಡಿದೆ. ಇಸ್ರೇಲ್‌ನ ಬಿಲ್ಡರ್ಸ್ ಅಸೋಸಿಯೇಷನ್, ಭಾರತದಲ್ಲಿ ನೇಮಕಾತಿ ನಡೆಸಲು ಇಸ್ರೇಲ್‌ನ ಕೆಲವು ತಜ್ಞರನ್ನು ಕಳುಹಿಸಿಕೊಟ್ಟಿತ್ತು. ಒಂದು ಹಂತದ ಆಯ್ಕೆ ಪ್ರಕ್ರಿಯೆಯನ್ನು ನಿಗಮ ನಡೆಸಿತ್ತು. ನಂತರ, ತಜ್ಞರ ತಂಡವು ಕಾರ್ಮಿಕರ ಕಟ್ಟಡ ಕೌಶಲವನ್ನು ನೋಡಿ, ಆಯ್ಕೆ ಮಾಡಿದೆ. ನೇಮಕಾತಿ ಪ್ರಕ್ರಿಯೆಯನ್ನು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವು ನಡೆಸಿರುವುದಕ್ಕೆ ಕಾರ್ಮಿಕ ಒಕ್ಕೂಟಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಕೌಶಲವನ್ನು ಹೇಳಿಕೊಡುವ ನಿಗಮವು ಹೇಗೆ ನೇಮಕಾತಿ ನಡೆಸುತ್ತಿದೆ ಎಂದು ಅವು ಕೇಳಿವೆ.

ಕಾರ್ಮಿಕರ ರಕ್ಷಣೆಗೆ ಇಲ್ಲ ಹೊಣೆಗಾರರು: ‘ಇಸ್ರೇಲ್‌ಗೆ ತೆರಳುತ್ತಿರುವ ಕಾರ್ಮಿಕರ ರಕ್ಷಣೆಯ ಹೊಣೆಯನ್ನು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವಾಗಲೀ, ವಿದೇಶಾಂಗ ಸಚಿವಾಲಯವಾಗಲಿ ಹೊತ್ತುಕೊಳ್ಳುತ್ತಿಲ್ಲ’ ಎಂದು ಸೆಂಟರ್ ಫಾರ್ ಇಂಡಿಯನ್ ಟ್ರೇಡ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ತಾಪನ್ ಸೇನ್ ದೂರಿದ್ದಾರೆ.

ಆದರೆ, ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಇಸ್ರೇಲ್ ಸರ್ಕಾರವು ಭಾರತೀಯ ಕಾರ್ಮಿಕರನ್ನು ರಕ್ಷಿಸುತ್ತದೆ ಎಂಬ ನಂಬಿಕೆ ಇದೆ ಎಂದು ಹೇಳಿದ್ದಾರೆ. ‘ಇಸ್ರೇಲ್‌ನಲ್ಲಿ ಕಠಿಣವಾದ ಕಾರ್ಮಿಕ ಕಾನೂನುಗಳಿವೆ ಎಂದು ನಮಗೆ ತಿಳಿದಿದೆ. ವಿದೇಶದಲ್ಲಿರುವ ಭಾರತೀಯರ ಜಬಾವ್ದಾರಿಯ ಕುರಿತು ನಮಗೆ ಅರಿವಿದೆ’ ಎಂದಿದ್ದಾರೆ.



ಇಸಿಆರ್ ಪಟ್ಟಿಯಲ್ಲಿಲ್ಲ ಇಸ್ರೇಲ್

ಭಾರತೀಯರು ಕೆಲವು ದೇಶಗಳಿಗೆ ಉದ್ಯೋಗಕ್ಕಾಗಿ ತೆರಳಲು ಕೇಂದ್ರ ಸರ್ಕಾರವು ಕೆಲವು ಹೆಚ್ಚುವರಿ ನಿಯಮಗಳನ್ನು ರೂಪಿಸಿದೆ. ಇದು ಭಾರತೀಯರ ರಕ್ಷಣೆಗಾಗಿಯೇ ರೂಪುಗೊಂಡ ನಿಯಮಗಳು. ‘ವಲಸೆ ಪರಿಶೀಲನೆ ಅಗತ್ಯ ಇರುವ ದೇಶಗಳು’ ಎನ್ನುವ 17 ದೇಶಗಳ ಪಟ್ಟಿಯನ್ನು ಭಾರತೀಯ ವಿದೇಶಾಂಗ ಸಚಿವಾಲಯವು ಸಿದ್ಧಪಡಿಸಿದೆ. ಕಠಿಣ ಕಾರ್ಮಿಕ ಕಾನೂನುಗಳಿರುವ ದೇಶ ಹಾಗೂ ಯುದ್ಧಪೀಡಿತ, ಸದಾ ಜನಾಂಗೀಯ ಸಂಘರ್ಷಗಳಿಂದ ಪೀಡಿತವಾಗಿರುವ ದೇಶಗಳು ಈ ಪಟ್ಟಿಯಲ್ಲಿವೆ. ಈ ದೇಶಗಳಿಗೆ ಉದ್ಯೋಗಕ್ಕಾಗಿ ಭಾರತೀಯರು ತೆರಳಬೇಕು ಎಂದರೆ, ‘ಎಮಿಗ್ರೇಷನ್ ಚೆಕ್ ರಿಕ್ವೈರ್ಡ್ (ಇಸಿಆರ್) ಇರುವ ಪಾಸ್‌ಪೋರ್ಟ್ ಪಡೆದುಕೊಳ್ಳುವುದು ಕಡ್ಡಾಯ. ಕೇಂದ್ರ ಸರ್ಕಾರವೇ ಇದನ್ನು ನೀಡುತ್ತದೆ. ಆದರೆ, ಕಳೆದ ನಾಲ್ಕು ತಿಂಗಳಿನಿಂದ ಇಸ್ರೇಲ್‌ನಲ್ಲಿ ಯುದ್ಧ ನಡೆಯುತ್ತಿದೆ. ಹಾಗಿದ್ದರೂ, ಇಸ್ರೇಲ್ ಅನ್ನು ‘ವಲಸೆ ಪರಿಶೀಲನೆ ಅಗತ್ಯ ಇರುವ ದೇಶಗಳು’ ಪಟ್ಟಿಗೆ ಸೇರಿಸಲಾಗಿಲ್ಲ.



ವಿದೇಶದ ಕನಸಿಗೆ ಪಾಸ್‌ಪೋರ್ಟ್!...

‘ವಿದೇಶದ ಕನಸಿಗೆ ಪಾಸ್‌ಪೋರ್ಟ್’– ಇಸ್ರೇಲ್‌ನಲ್ಲಿ ಉದ್ಯೋಗಾವಕಾಶ ಇದೆ ಎಂದು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವು ನೀಡಿದ ಜಾಹೀರಾತಿನ ಟೈಟಲ್. ‘ಇಸ್ರೇಲ್‌ನಲ್ಲಿ ಹೊಸ ದಿಗಂತಗಳನ್ನು ಅನ್ವೇಷಿಸಿ’ ಎಂದೂ ಅದು ಹೇಳಿತ್ತು. ತಿಂಗಳಿಗೆ ಸುಮಾರು ₹1.37 ಲಕ್ಷ ಸಂಬಳವನ್ನು ಇಸ್ರೇಲ್ ನೀಡುತ್ತಿದೆ ಎಂದಿತ್ತು. ಇಷ್ಟೆಲ್ಲಾ ಆಕರ್ಷಕ ಮಾಹಿತಿಗಳನ್ನು ತನ್ನ ಜಾಹೀರಾತಿನಲ್ಲಿ ನೀಡಿದರೂ ಕಾರ್ಮಿಕರ ಸುರಕ್ಷತೆ ಹಾಗೂ ಭದ್ರತೆ ಕುರಿತು ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ ಎಂದು ಹಲವು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ಕೆಲವು ನಿಬಂಧನೆಗಳನ್ನು ಜಾಹೀರಾತಿನಲ್ಲಿ ನಿಗಮವು ನೀಡಿತ್ತು.

‘ಇಸ್ರೇಲ್‌ಗೆ ತೆರಳಲು ಭಾರತೀಯ ಕಾರ್ಮಿಕರೇ ಖರ್ಚು ಮಾಡಬೇಕು. ಇದಲ್ಲದೆ ನಿಗಮವು ಕಾರ್ಮಿಕರಿಂದ ಸಹಾಯವೆಚ್ಚ ಎಂದು ₹10 ಸಾವಿರವನ್ನೂ ತೆಗೆದುಕೊಳ್ಳುತ್ತಿದೆ. ವಿಮೆ ನೀಡಲಾಗುವುದಿಲ್ಲ ಮತ್ತು ಉದ್ಯೋಗಕ್ಕೆ ಖಾತರಿಯನ್ನೂ ನೀಡಲಾಗುವುದಿಲ್ಲ ಎಂದು ನಿಗಮ ಹೇಳಿದೆ’ ಎಂದು ಮಾಧ್ಯಮಗಳ ವರದಿಯಲ್ಲಿ ಹೇಳಲಾಗಿದೆ.



ಶಿವರಾಜ್‌ಕುಮಾರ್ ಜೊತೆ ವೈಶಾಖ್, ಹೇಮಂತ್

ಸೆಂಚುರಿ ಸ್ಟಾರ್‌ಗೆ ಹೇಮಂತ್ ನಿರ್ದೇಶನ

‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ಯಶಸ್ಸಿನ ಬೆನ್ನಲ್ಲೇ ನಿರ್ದೇಶಕ ಹೇಮಂತ್ ಎಂ. ರಾವ್ ಹೊಸ ಪ್ರಾಜೆಕ್ಟ್‌ಗೆ ಇಳಿದಿದ್ದಾರೆ. ತಮ್ಮ ನಿರ್ದೇಶನದ ಐದನೇ ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ‘ಕವಲುದಾರಿ’ ಸೂತ್ರಧಾರ.

ಸದ್ಯ ಸ್ಕ್ರಿಪ್ಟ್ ಕೆಲಸ ಆರಂಭಿಸಿರುವ ಹೇಮಂತ್, ಇದೇ ವರ್ಷದ ಜೂನ್–ಜುಲೈನಲ್ಲಿ ಚಿತ್ರೀಕರಣಕ್ಕೆ ಇಳಿಯಲು ನಿರ್ಧರಿಸಿದ್ದಾರೆ. 2024ರಲ್ಲಿ ಶೂಟಿಂಗ್ ಪೂರ್ಣಗೊಳಿಸಿ, 2025ರಲ್ಲಿ ಸಿನಿಮಾ ಬಿಡುಗಡೆಗೆ ಯೋಜನೆ ರೂಪಿಸಿದ್ದಾರೆ.

‘ಮಚ್ಚು–ಲಾಂಗು ಹಿಡಿಸಲು ಇಷ್ಟವಿಲ್ಲ’: ‘ಹಲವು ಕಥೆಗಳು, ಒನ್‌ಲೈನ್‌ಗಳು ಮನಸ್ಸಿನಲ್ಲಿ ಸದಾ ಇದ್ದವು. ‘ಸಪ್ತ ಸಾಗರದಾಚೆ ಎಲ್ಲೋ..’ ಆದ ಮೇಲೆ ಮುಂದೇನು ಎಂದು ಯೋಚಿಸಿದಾಗ ಈ ಸಿನಿಮಾ ಕಥೆಯನ್ನು ಆರಿಸಿಕೊಂಡೆ. ವೃತ್ತಿಯಲ್ಲಿ ವೈದ್ಯರಾದ ವೈಶಾಖ್ ಜೆ. ನನ್ನ ಬಳಿ ಬಂದು ಸಿನಿಮಾವೊಂದನ್ನು ಮಾಡಿಕೊಡಬೇಕು ಎಂದರು. ಅವರಿಗೆ ನನ್ನ ನಿರ್ದೇಶನ ಇಷ್ಟ. ಜೊತೆಗೆ ಶಿವರಾಜ್‌ಕುಮಾರ್ ಅಭಿಮಾನಿ ಅವರು. ನನಗೂ ಶಿವರಾಜ್‌ಕುಮಾರ್ ಅವರಿಗೆ ಸಿನಿಮಾ ಮಾಡಬೇಕು ಎನ್ನುವ ಆಸೆ ಇತ್ತು. ದೊಡ್ಡ ಸ್ಕೇಲ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ. ನನ್ನ ಇಲ್ಲಿಯವರೆಗಿನ ನಿರ್ದೇಶನಕ್ಕಿಂತ ಅತಿ ಹೆಚ್ಚು ಬಜೆಟ್‌ನ ಸಿನಿಮಾ ಇದಾಗಿರಲಿದೆ. ನನಗೆ ಶಿವಣ್ಣನ ಕೈಯಲ್ಲಿ ಮತ್ತೆ ಮಚ್ಚು, ಲಾಂಗು ಹಿಡಿಸಲು ಇಷ್ಟವಿಲ್ಲ. ಹೊಸ ಪ್ರಯತ್ನವಿದು. ಹೊಸ ಅನುಭವ ಪ್ರೇಕ್ಷಕರಿಗೆ ಸಿಗಲಿದೆ ಎನ್ನುವ ನಂಬಿಕೆ ದೃಢವಾಗಿದೆ’ ಎನ್ನುತ್ತಾರೆ ಹೇಮಂತ್.

ಇದೊಂದು ಆ್ಯಕ್ಷನ್ ಡ್ರಾಮ ಜಾನರ್‌ನ ಸಿನಿಮಾ ಎನ್ನುವ ಸುಳಿವು ಸಿಕ್ಕಿದ್ದು, ಶಿವರಾಜ್‌ಕುಮಾರ್ ಅವರಿಗೂ ಕಥೆ ಇಷ್ಟವಾಗಿದೆ. ಸಿನಿಮಾ ಕಥೆ ಆರಂಭಿಸುವ ಸಂದರ್ಭದಲ್ಲಿ ಹೇಮಂತ್ ಇನ್‌ಸ್ಟಾಗ್ರಾಂನಲ್ಲಿ ಚಿತ್ರವೊಂದನ್ನು ಅಪ್‌ಲೋಡ್ ಮಾಡಿದ್ದರು. ಅದರಲ್ಲಿ ಈಟಿ, ಬಿಲ್ಲು, ಬಾಣಗಳಿವೆ. ಹೀಗಾಗಿ ಸಿನಿಮಾ ಕಥೆಯ ಬಗ್ಗೆ ಕುತೂಹಲ ಹೆಚ್ಚಿದೆ. ❖

ನಗುವಿನ ಹೂ ಮಳೆ ಅಭಿದಾಸ್–ಶರಣ್ಯ



‘ಕೆಂಪಿರ್ವೆ’ ಸಿನಿಮಾ ಖ್ಯಾತಿಯ ವೆಂಕಟ್ ಭಾರದ್ವಾಜ್ ನಿರ್ದೇಶನದ ಹಾಗೂ ಅಭಿದಾಸ್ ಮತ್ತು ಶರಣ್ಯ ಶೆಟ್ಟಿ ಜೋಡಿಯಾಗಿ ನಟಿಸಿರುವ ‘ನಗುವಿನ ಹೂಗಳ ಮೇಲೆ’ ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ.

ಶ್ರೀ ಸತ್ಯಸಾಯಿ ಆರ್ಟ್ಸ್ ಲಾಂಛನದಲ್ಲಿ ಕೆ.ಕೆ ರಾಧಾಮೋಹನ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸಿನಿಮಾ ಫೆಬ್ರುವರಿ 9 ರಂದು ತೆರೆಗೆ ಬರುತ್ತಿದೆ. ವೆಂಕಟ್ ಭಾರದ್ವಾಜ್ ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಅಭಿಷೇಕ್ ಅಯ್ಯಂಗಾರ್ ಸಂಭಾಷಣೆ ಚಿತ್ರಕ್ಕಿದೆ. ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣ, ಚಂದನ್ ಪಿ. ಸಂಕಲನ, ಟೈಗರ್ ಶಿವು ಸಾಹಸ ನಿರ್ದೇಶನ ಹಾಗೂ ಲರ್ವಿನ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಗಿರೀಶ್ ಬೆಟ್ಟಪ್ಪ, ಹರ್ಷ ಗೋ ಭಟ್, ಬಲ ರಾಜವಾಡಿ, ಬೆನಕ ನಂಜಪ್ಪ, ಜ್ಯೋತಿ ಮರೂರ್, ಆಶಾ ಸುಜಯ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘ಗುಬ್ಬಿ ತಾಲ್ಲೂಕು ದೊಡ್ಡಗುಣಿ ಬಳಿ ಇರುವ ತಗ್ಗಿಹಳ್ಳಿ ಅರಣ್ಯ ಭಾಗದಲ್ಲಿ ಕಾಣಿಸಿಕೊಂಡ ವಿಚಿತ್ರ ಪ್ರಾಣಿ. ಈ ಸೃಷ್ಟಿಯಲ್ಲಿ ಇನ್ನೂ ಏನೇನಿದೆಯೋ ಬಲ್ಲವರಾರು’ ಎಂಬಂತಹ ಪೋಸ್ಟ್ ಕಳೆದ ಮೂರು ನಾಲ್ಕು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹುಲ್ಲು ಪ್ರದೇಶದಲ್ಲಿ ಬೆಟ್ಟದಿಂದ ಇಳಿಯುತ್ತಿರುವ ಪ್ರಾಣಿಯ 17 ಸೆಕೆಂಡಿನ ವಿಡಿಯೊವನ್ನು ಪೋಸ್ಟ್‌ನೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಈ ವಿಡಿಯೊದಲ್ಲಿರುವ ಪ್ರಾಣಿಯ ಹೆಸರು ಜೈಂಟ್ ಆ್ಯಂಟ್‌ಈಟರ್. ಇದು ಸವನ್ನಾ ಹುಲ್ಲುಗಾವಲು ಪ್ರದೇಶದಲ್ಲಿ ಕಾಣಸಿಗುತ್ತದೆ. ಜೊತೆಗೆ, ಮೆಕ್ಸಿಕೊದ ದಕ್ಷಿಣ ಭಾಗದಲ್ಲಿರುವ ಕಾಡುಗಳಲ್ಲಿ, ಬ್ರೆಜಿಲ್‌ನ ಪೆರುಗ್ವೆ ಹಾಗೂ ಅರ್ಜೆಂಟೀನಾದ ಉತ್ತರ ಭಾಗದ ಅರಣ್ಯ ಪ್ರದೇಶಗಳಲ್ಲಿ ಕಾಣಸಿಗುತ್ತದೆ. ಇರುವೆ, ಗೊದ್ದಗಳಂತಹ ಕೀಟಗಳನ್ನು ತಿಂದು ಈ ಪ್ರಾಣಿ ಜೀವಿಸುತ್ತದೆ. ಈ ಪ್ರಾಣಿಯ ನಾಲಿಗೆಯು 24 ಇಂಚು ಉದ್ದ ಇರುತ್ತದೆ. ನಾಲಿಗೆಯಲ್ಲಿನ ಜೊಲ್ಲಿಗೆ ಕೀಟಗಳು ಅಂಟಿಕೊಳ್ಳುತ್ತವೆ. ಭಾರತದಲ್ಲಿ ಕಾಣಸಿಗುವ ಚಿಪ್ಪುಹಂದಿ ಜಾತಿಗೆ ಈ ಪ್ರಾಣಿಯು ಸೇರುತ್ತದೆ. ‘ಪೋಸ್ಟ್‌ನಲ್ಲಿ ಹೇಳಿರುವಂತೆ ಈ ಪ್ರಾಣಿಯು ಭಾರತದಲ್ಲಿ ಎಲ್ಲಿಯೂ ಇಲ್ಲ. ಇದೊಂದು ಸುಳ್ಳು ಸುದ್ದಿ’ ಎಂದು ತುಮಕೂರಿನ ಅರಣ್ಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಕೌಶಲ್ಯವೆಂಬ ಮೌಲ್ಯವರ್ಧಕ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಹಡಗೊಂದು ಒಂದು ಬಂದರಿನಲ್ಲಿ ಕೆಟ್ಟು ನಿಂತಿತ್ತು. ಅದರಲ್ಲಿದ್ದ ಉನ್ನತ ಪದವಿ ಪಡೆದಿದ್ದ ಇಂಜಿನಿಯರ್‌ಗಳು, ಮೆಕ್ಯಾನಿಕ್‌ಗಳು ಎಷ್ಟೇ ಪ್ರಯತ್ನಿಸಿದರೂ ಅದರ ಎಂಜಿನ್ ಅನ್ನು ರಿಪೇರಿ ಮಾಡಲು ಸಾಧ್ಯವಾಗಲಿಲ್ಲ. ಆ ಬಂದರಿನಲ್ಲಿದ್ದ ಒಬ್ಬ ಹಳೆಯ ಮೆಕ್ಯಾನಿಕ್ ಇದನ್ನು ರಿಪೇರಿ ಮಾಡಬಲ್ಲ ಎಂದು ಯಾರೋ ಸಲಹೆ ನೀಡಿದರು. ಹಡಗಿನ ಕ್ಯಾಪ್ಟನ್ ಆ ವೃದ್ಧ ಮೆಕ್ಯಾನಿಕ್‌ಗೆ ಕರೆ ಕಳಿಸಿದರು. ಬಗಲಿಗೆ ಒಂದು ಚೀಲ ಹಾಕಿಕೊಂಡು ಬಂದಿದ್ದ ಆ ವೃದ್ಧ ಮೆಕ್ಯಾನಿಕ್, ಹಡಗಿನ ಎಂಜಿನ್‌ಗೆ ಒಂದು ಸುತ್ತು ಪ್ರದಕ್ಷಿಣೆ ಬಂದ. ಎಲ್ಲ ಭಾಗಗಳನ್ನು ಸೂಕ್ಷ್ಮವಾಗಿ ಗಮನಿಸಿದ. ಕೊನೆಗೆ ತಾನು ತಂದಿದ್ದ ಸುತ್ತಿಗೆಯಿಂದ ಎಂಜಿನ್ನಿನ ಒಂದು ಭಾಗಕ್ಕೆ ಬಲವಾಗಿ ಹೊಡೆದ. ಏನಾಶ್ಚರ್ಯ, ಹಡಗಿನ ಎಂಜಿನ್ ಈ ಒಂದೇ ಹೊಡೆತದಿಂದ ಸರಿಯಾಗಿ ಬಿಟ್ಟಿತು. ಹಡಗಿನ ಕ್ಯಾಪ್ಟನ್, ಆ ಅಜ್ಜನಿಗೆ ತನ್ನ ಬಿಲ್ ಕಳಿಸಿಕೊಡುವಂತೆ ಕೇಳಿದ. ಅಜ್ಜ ಕಳಿಸಿಕೊಟ್ಟ ಬಿಲ್ಲನ್ನು ನೋಡಿ ಕ್ಯಾಪ್ಟನ್ ಕಂಗಾಲಾಗಿ ಹೋದ. ಆ ವೃದ್ಧ ಮೆಕ್ಯಾನಿಕ್ ₹25,000ದ ಭರ್ಜರಿ ಬಿಲ್ ಕಳಿಸಿದ್ದಾನೆ. ಕ್ಯಾಪ್ಟನ್ ‘ದಯವಿಟ್ಟು ವಿವರವಾದ ಬಿಲ್ ಕಳಿಸಿ’ ಎಂದು ಇನ್ನೊಂದು ಪತ್ರ ಬರೆದ.

ಆಗ ಅದಕ್ಕೆ ಆ ವೃದ್ಧ ಮೆಕಾನಿಕ್ ನೀಡಿದ ಪ್ರತ್ಯುತ್ತರ ಹೀಗಿತ್ತು: ‘ಸುತ್ತಿಗೆಯಿಂದ ಹೊಡೆದಿದ್ದಕ್ಕೆ ₹1000... ಎಲ್ಲಿಗೆ ಹೊಡೆಯಬೇಕೋ ಅಲ್ಲಿಗೆ ಹೊಡೆದಿದ್ದಕ್ಕೆ ₹24,000 ರೂಪಾಯಿ’.

ಇಲ್ಲಿ ಸುತ್ತಿಗೆಯಿಂದ ಹೊಡೆದದ್ದು ಮುಖ್ಯವಲ್ಲ ಎಲ್ಲಿಗೆ ಹೊಡೆಯಬೇಕೋ ಅಲ್ಲಿಗೆ ಹೊಡೆಯುವುದು ಬಹಳ ಮುಖ್ಯ. ಇದಕ್ಕೆ ಕೌಶಲ ಬೇಕು. ಕೌಶಲ (Skill) ಎನ್ನುವುದು ಜ್ಞಾನ ಹಾಗೂ ಅನುಭವಗಳ ಸಮ್ಮಿಲನ.

ಒಬ್ಬ ವ್ಯಕ್ತಿಯ ಮೌಲ್ಯ ಅವನು ಹೊಂದಿರುವ ಕೌಶಲದ ಮೇಲೆ ನಿರ್ಧರಿತವಾಗುತ್ತದೆ. ಕೌಶಲ ವ್ಯಕ್ತಿತ್ವದ ಮೌಲ್ಯವರ್ಧಕ. ಒಬ್ಬ ಸಮರ್ಥ ವೈದ್ಯ, ರೋಗದ ಗುಣ ಲಕ್ಷಣಗಳನ್ನು ನಿಖರವಾಗಿ ಪತ್ತೆ ಹಚ್ಚಿ ಅದಕ್ಕೆ ಸೂಕ್ತವಾದ ಚಿಕಿತ್ಸೆ ನೀಡುವುದಕ್ಕೆ ಕೌಶಲ ಬೇಕು. ಒಬ್ಬ ವಾಸ್ತುಶಿಲ್ಪಿ ಸುಪ್ರಸಿದ್ಧನಾಗುವುದು ಕಟ್ಟಡ ನಿರ್ಮಾಣದಲ್ಲಿ ಅವನು ತೋರಿಸುವ ನಿರಂತರ ಕೌಶಲದಿಂದ. ಅದೇ ರೀತಿ ಒಬ್ಬ ಕ್ರೀಡಾಪಟು ಅತ್ಯುತ್ತಮವಾದ ಆಟದ ಪ್ರದರ್ಶನ ನೀಡುವುದಕ್ಕೆ ಮುಖ್ಯ ಕಾರಣ ಅವನ ಕ್ರೀಡಾಕೌಶಲ. ಸಮರ್ಥ ನಟನ ನಟನೆ ಸದಾ ಅದ್ಭುತವಾಗಿ ಮೂಡಿಬರುವುದು ಅವನ ನಟನಾ ಕೌಶಲದಿಂದ. ಒಬ್ಬ ಗಾಯಕ ಅಥವಾ ಗಾಯಕಿಯ ನಾದ ಮಾಧುರ್ಯಕ್ಕೆ ಪ್ರಮುಖ ಕಾರಣ ಅವರಲ್ಲಿರುವ ಗಾನ ಕೌಶಲ. ಒಬ್ಬ ಯಶಸ್ವಿ ವಾಗ್ಮಿ ಪ್ರಸಿದ್ಧನಾಗುವುದು ಅವನ ಸಂವಹನ ಕೌಶಲದಿಂದ. ಕವಿಯೊಬ್ಬನ ಕಾವ್ಯ ಮೇರು ಸ್ತರದಲ್ಲಿ ಗೋಚರಿಸಲು ಕಾರಣ ಅವನಿಗೆ ಪ್ರಾಪ್ತವಾಗಿರುವ ಬರವಣಿಗೆಯ ಕೌಶಲ.

ಹೀಗಾಗಿ ಯಾವುದೇ ಕ್ಷೇತ್ರದಲ್ಲಿ ನಿರಂತರವಾದ ಜ್ಞಾನ ಹಾಗೂ ಆಳವಾದ ಅನುಭವ ಪಡೆದುಕೊಂಡರೆ ಆ ಕ್ಷೇತ್ರದಲ್ಲಿ ಕೌಶಲ ಪ್ರಾಪ್ತಿಯಾಗುತ್ತದೆ ಹಾಗೂ ಆ ಕೌಶಲವೇ ಯಶಸ್ಸಿನ ಕಾರಣವಾಗುತ್ತದೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಫೆಬ್ರುವರಿ 5, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ದಶಮಿ ಗಂ. 17-25 **ನಕ್ಷತ್ರ:** ಅನುರಾಧ ಗಂ. 07-54 **ಯೋಗ:** ಧ್ರುವ ಗಂ. 10-52
ಕರಣ: ವಿಷ್ಟಿ ಗಂ. 17-25, ಮಕರ ಮಾಸದ 22 ನೇ ದಿನ, **ಮಳೆನಕ್ಷತ್ರ:** ಶ್ರವಣ 4.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 07-00 **ಸೂರ್ಯಾಸ್ತ :** 06-29
ಮುಸ್ಲಿಂ ದಿನಾಂಕ : 24 ರಜಬ್
ಅದೃಷ್ಟ ಸಂಖ್ಯೆ : 8, 12

ಮೇಷ: ಅಣ್ಣತಮ್ಮಂದಿರ ಒಳ ಜಗಳದಿಂದ ಮುಖ್ಯವಾದ ಕಾರ್ಯಕ್ರಮಕ್ಕೆ ತಡೆಯಾಗುವುದು. ವೃತ್ತಿಯಲ್ಲಿ ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ವೃಷಭ: ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಸಿಗುವ ಸಾಧ್ಯತೆಗಳಿದೆ. ಸಾಮಾಜಿಕ ಸಂಘ ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕುವುದು. ಯಾರಿಂದಲೂ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕವಿಲ್ಲ.

ಮಿಥುನ: ದೇಹದಲ್ಲಿ ರಕ್ತದ ಒತ್ತಡ ಅಥವಾ ಮೂತ್ರ ಸಂಬಂಧಿ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ನಿಮ್ಮ ಸಂತೋಷದಿಂದ ನಿಮ್ಮ ಜೊತೆಗಾರರನ್ನೂ ಸಂತೋಷಪಡಿಸಿ. ಅಚ್ಚರಿಯಿಂದ ಕೂಡಿದ ದಿನವಾಗುವುದು.

ಕರ್ಕಾಟಕ: ಮನೆಯವರ ಒಳಿತಿಗಾಗಿ ಆದಾಯದ ಕೆಲವು ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಇದು ಸೂಕ್ತ ಸಮಯ. ಉದ್ಯೋಗಿಗಳಿಗೆ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ.

ಸಿಂಹ: ನಿಮ್ಮ ಅನ್ವೇಷಣೆ ಸ್ವಭಾವ ವೃತ್ತಿ ಬದುಕಿಗೆ ಉತ್ತಮ ತಿರುವು ನೀಡಲಿದೆ. ನಿಮ್ಮ ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ. ಸಂಸ್ಥೆಯ ಆದಾಯವನ್ನು ಹೆಚ್ಚಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಿರಿ.

ಕನ್ಯಾ: ಈ ದಿನ ನಿಮ್ಮ ಯೋಜನೆಗಳನ್ನು ಇತರರು ಅಪೇಕ್ಷಿಸುವಂತೆ ಅಥವಾ ಸ್ವೀಕರಿಸುವಂತೆ ಮಾಡುವ ನಿಮ್ಮ ಸಾಮರ್ಥ್ಯ ಅದ್ಭುತವಾದದ್ದು. ನಿಸ್ವಾರ್ಥ ಮನೋಭಾವದಿಂದ ಮಾಡಿದ ಕೆಲಸಗಳು ಈ ದಿನ ಫಲ ನೀಡಲಿದೆ.

ತುಲಾ: ಕಲಾವಿದರಿಗೆ ಉತ್ತಮವಾದ ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ದೊರೆತು ಸಂತಸವಾಗಲಿದೆ. ಸ್ನೇಹಿತರ ಜೊತೆಗಿನ ಕಷ್ಟ-ಸುಖದ ಸಂಭಾಷಣೆ ನಿಮ್ಮ ಅಭಿವೃದ್ಧಿಗೆ ದಾರಿ ದೀಪವಾಗಲಿದೆ.

ವೃಶ್ಚಿಕ: ಇತರರನ್ನು ಹೀಯಾಳಿಸುವ, ಅನಾವಶ್ಯಕವಾಗಿ ತಿರಸ್ಕರಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ನೂತನವಾದ ತಾತ್ಕಾಲಿಕ ಉದ್ಯೋಗ ದೊರೆತು ಸಮಾಧಾನವಾಗುವುದು.

ಧನು: ದಿನದಲ್ಲಿ ಅಧಿಕ ಸಮಯ ಸಂತೋಷವಿರುವುದು. ಅನೇಕ ಕ್ಷೇತ್ರಗಳಲ್ಲಿ ಹೊತ್ತು-ಗೊತ್ತು, ಆಹಾರ, ವಿಶ್ರಾಂತಿಗಳಿಲ್ಲದೆ ದುಡಿಯುವ ನಿಮಗೆ ಜನಗಳ ದೃಷ್ಟಿ ದೋಷವು ಸ್ವಲ್ಪ ಮಟ್ಟಿನ ಆರೋಗ್ಯವನ್ನು ಹಾಳುಮಾಡುವುದು.

ಮಕರ: ಎಲ್ಲರೊಂದಿಗೆ ಸಹಕಾರ ಮನೋಭಾವನೆಯಲ್ಲಿ ಮುಂದುವರೆಯುವುದರಿಂದ ಯಶಸ್ಸು ಇನ್ನೂ ಹೆಚ್ಚಿನ ರೀತಿಯಲ್ಲಿ ಕಂಡು ಬರುತ್ತದೆ. ಕಾಗದದ ಆಮದು ಹಾಗು ರಫ್ತು ಉದ್ಯಮದವರಿಗೆ ಉತ್ತಮ ಆದಾಯವಿರುವುದು.

ಕುಂಭ: ಕುಟುಂಬದಲ್ಲಿ ಉತ್ತಮ ವಾತಾವರಣವಿರಲಿದೆ. ಕೆಲಸದ ವಿಚಾರದಲ್ಲಿ ಹಿರಿಯರ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಮಗಳ ವಿವಾಹ ಪ್ರಸ್ತಾವನೆ ನಡೆದು, ಶುಭವಾಗಿ ಮುಕ್ತಾಯವಾಗಲಿದೆ.


ಮೀನ: ಕೌಟುಂಬಿಕ ವಿಚಾರದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಕೆ ಬೇಡ. ಖಾದ್ಯ ಪದಾರ್ಥಗಳ ಉತ್ಪಾದನಾ ಕೆಲಸಗಳು ವೇಗದಿಂದ ಸಾಗುವವು. ಯೋಗಾಭ್ಯಾಸವನ್ನು ದಿನಚರಿಯಲ್ಲಿ ರೂಢಿಸಿಕೊಳ್ಳಿ.

ಪದಬಂಧ 5582

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಲಕ್ಷ್ಯವಿದ್ದರೆ ನಿಶ್ಚಿತವಾದ ಉದ್ದೇಶ! (4)
3.ಈತ ಅನುಭವವುಳ್ಳವನು (4)
5.ಮುಖ ತೋರಿಸುತ್ತಿರುವ ಕಪಿ! (4)
7.ನಕ್ಷೆ ಅಥವಾ ಚಿತ್ರವೆಂದರೂ ಸರಿಯೇ (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
11.ಬಲಿ ಕೊಡಲು ಬಲಾಢ್ಯ ಬಂದಿದ್ದಾನಲ್ಲಾ! (3)
12.ನಿಸ್ಸಾರವಾದುದು ಇಲ್ಲಿದೆ (4)
14.ಬರಿದಾದ ಕೈ (4)
15.ಅನಿರೀಕ್ಷಿತವಾಗಿ ತಗಲಿದ ಪೆಟ್ಟು (4)

ಮೇಲಿಂದ ಕೆಳಕ್ಕೆ
1.ನಿರ್ಣಯ ಅಥವಾ ಠರಾವು (4)
2.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
4.ಸರಸದ ವಿರುದ್ಧ ಪದ (3)
6.ಉಚಿತವೆಂದರೂ ಇದು ನಿಶ್ಚಿತ! (3)
7.ಗೆಲುವು ಈ ರೀತಿ ಬಂದಿದೆ (3)
8.ಹೆಬ್ಬೆರಳು ಇಲ್ಲಿದೆ (3)
9.ಕರವನ್ನು ಕೊನೆಗಿಟ್ಟು ಸಿಡಿಸಿದ ತುಂತುರು (3)
10.ಮಂದಿಯ ಒಳಿತು (4)
11.ಕೋಟೆಯ ಮೇಲುಭಾಗ (3)
13.ಸರಸದ ಮಾತುಕತೆ (3)



5581ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಿಳೆ 4.ವಾಸನೆ
5.ಅಂಗಾರಕ 6.ವಾಚ್ಯಾತೀತ
7.ನರ 9.ಗವಿ
13.ಮನ್ವಂತರ 14.ಅಪವ್ಯಯ
15.ವಂತಿಗೆ 16.ಪ್ರಪಾತ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ಮನೆವಾಳ್ತನ
3.ಮರವು 5.ಅಂತರಂಗ
8.ರಸಮಯ 10.ವಿಚಾರವಂತ
11.ವಕ್ರಗೆರೆ 12.ಚಪಲ

ಸುಡೊಕು 5967

	7				3		8	
	4			8			5	
8			2	6		7		4
	8			2		1		5
		2	8		5		6	
5				3			2	7
9		7	5					6
						9	4	
4	3		6		1		7	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5966 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ತಂಬಾಕು ಪ್ಯಾಕಿಂಗ್ ಯಂತ್ರೋಪಕರಣ ಏಪ್ರಿಲ್ 1ರೊಳಗೆ ನೋಂದಣಿ ಕಡ್ಡಾಯ

ನವದೆಹಲಿ (ಪಿಟಿಐ): ತಂಬಾಕು ಉತ್ಪನ್ನ ತಯಾರಕರು ತಮ್ಮ ಪ್ಯಾಕಿಂಗ್ ಯಂತ್ರೋಪಕರಣವನ್ನು ಜಿಎಸ್‌ಟಿ ಪ್ರಾಧಿಕಾರದಲ್ಲಿ ಏಪ್ರಿಲ್ 1ರೊಳಗೆ ನೋಂದಾಯಿಸಬೇಕು. ಇಲ್ಲದಿದ್ದರೆ ₹1 ಲಕ್ಷ ದಂಡವನ್ನು ಪಾವತಿಸಬೇಕಾಗುತ್ತದೆ.

ತಂಬಾಕು ಉತ್ಪಾದನಾ ವಲಯದಿಂದ ಬರುವ ಆದಾಯವು ಸೋರಿಕೆ ಆಗುವುದನ್ನು ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ನೋಂದಣಿ ಮಾಡದಿದ್ದರೆ ಅಂತಹ ಯಂತ್ರೋಪಕರಣಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗುತ್ತದೆ ಎಂದು ರೆವಿನ್ಯೂ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಪಾನ್ ಮಸಾಲಾ, ಗುಟ್ಕಾ ಮತ್ತು ಅಂತಹ ಇತರ ಉತ್ಪನ್ನಗಳನ್ನು ತಯಾರಿಸುವ ಘಟಕಗಳ ಮೇಲೆ ನಿಗಾ ಇರಿಸಲಿದೆ. ಅದಕ್ಕಾಗಿ ಪ್ಯಾಕಿಂಗ್ ಯಂತ್ರಗಳ ನೋಂದಣಿ ಮಾಡಿಸಬೇಕು ಎಂದು ಹಿಂದಿನ ಸಭೆಯಲ್ಲಿ ಜಿಎಸ್‌ಟಿ ಮಂಡಳಿ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ.

ನೋಂದಾಯಿಸಲು ವಿಫಲವಾದರೆ ದಂಡ ವಿಧಿಸಬೇಕೆಂದು ಮಂಡಳಿ ನಿರ್ಧರಿಸಿದೆ ಎಂದು ಮಲ್ಹೋತ್ರಾ ಪಿಟಿಐಗೆ ತಿಳಿಸಿದರು.

ಕೇಂದ್ರ ಹಣಕಾಸು ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ, ಪಾನ್ ಮಸಾಲಾ ಮತ್ತು ಗುಟ್ಕಾ ವ್ಯವಹಾರಗಳಲ್ಲಿ ತೆರಿಗೆ ವಂಚನೆಯನ್ನು ತಡೆಗಟ್ಟುವ ಕುರಿತು ರಾಜ್ಯ ಹಣಕಾಸು ಸಚಿವರ ಸಮಿತಿಯು ನೀಡಿದ್ದ ವರದಿಯನ್ನು ಅನುಮೋದಿಸಿತ್ತು. ಅದರ ನಂತರ, ಸರ್ಕಾರವು ಹಣಕಾಸು ಮಸೂದೆ 2023ಕ್ಕೆ ತಿದ್ದುಪಡಿಗಳನ್ನು ತಂದಿತು. ಅದರ ಪ್ರಕಾರ, ತಂಬಾಕು ಉತ್ಪನ್ನಗಳ ಮೇಲೆ ಅವುಗಳ ಚಿಲ್ಲರೆ ಮಾರಾಟದ ಗರಿಷ್ಠ ದರದ ಆಧಾರದಲ್ಲಿ ಜಿಎಸ್‌ಟಿ ಪರಿಹಾರ ಸೆಸ್ ವಿಧಿಸಲಾಗುತ್ತದೆ.

ಕಳೆದ ವರ್ಷ ಫೆಬ್ರುವರಿಯಲ್ಲಿ,

ಎಫ್‌ಪಿಐ: ₹19,800 ಕೋಟಿ ಹೂಡಿಕೆ



ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಸಾಲ ಮಾರುಕಟ್ಟೆಯಲ್ಲಿ ಜನವರಿಯಲ್ಲಿ ₹19,800 ಕೋಟಿಯಷ್ಟು ಹೂಡಿಕೆ ಮಾಡಿದ್ದಾರೆ. ಇದು ಆರು ವರ್ಷದ ಗರಿಷ್ಠ ಮಾಸಿಕ ಒಳಹರಿವು ಆಗಿದೆ.

ಅಮೆರಿಕದಲ್ಲಿ ಬಾಂಡ್‌ಗಳಿಂದ ಸಿಗುವ ಆದಾಯದ ಏರಿಕೆಯಿಂದಾಗಿ ಕಳೆದ ತಿಂಗಳು ₹25,743 ಕೋಟಿ ಮೌಲ್ಯದ ಷೇರುಗಳನ್ನು ವಾಪಸ್ ಪಡೆದುಕೊಂಡಿದ್ದಾರೆ ಎಂದು ಅಂಕಿ ಅಂಶಗಳು ತಿಳಿಸಿವೆ. 2024ರ ಜನವರಿಯಲ್ಲಿ ₹19,836 ಕೋಟಿ, 2023ರ ಡಿಸೆಂಬರ್‌ನಲ್ಲಿ ₹18,302 ಕೋಟಿ, ನವೆಂಬರ್‌ನಲ್ಲಿ ₹14,860 ಕೋಟಿ ಮತ್ತು ಅಕ್ಟೋಬರ್‌ನಲ್ಲಿ ₹6,381 ಕೋಟಿ ಎಫ್‌ಪಿಐ ಹೂಡಿಕೆ ಆಗಿತ್ತು.

'ಜೆಪಿ ಮಾರ್ಗನ್ ತನ್ನ ಸೂಚ್ಯಂಕದಲ್ಲಿ ಭಾರತ ಸರ್ಕಾರದ ಬಾಂಡ್‌ಗಳನ್ನು ಸೇರಿಸುವ ನಿರ್ಧಾರ ಕೈಗೊಂಡಿದೆ. ಹೀಗಾಗಿ, ಜನವರಿಯಲ್ಲಿ ಎಫ್‌ಪಿಐಗಳಿಂದ ₹19,836 ಕೋಟಿ ನಿವ್ವಳ ಒಳಹರಿವು ಬಂದಿದೆ' ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಮುಂದಿನ 18ರಿಂದ 24 ತಿಂಗಳಲ್ಲಿ ಸುಮಾರು ₹1.65 ಲಕ್ಷ ಕೋಟಿಯಿಂದ ₹3.30 ಲಕ್ಷ ಕೋಟಿಯಷ್ಟು ಒಳಹರಿವು ನಿರೀಕ್ಷಿಸಲಾಗಿದೆ. ಇದರಿಂದಾಗಿ ವಿದೇಶಿ ಹೂಡಿಕೆದಾರರಿಗೆ ಭಾರತದ ಬಾಂಡ್‌ಗಳ ಲಭ್ಯತೆ ಹೆಚ್ಚಾಗುತ್ತದೆ. ರೂಪಾಯಿ ಬಲಗೊಳ್ಳಬಹುದು ಮತ್ತು ಆರ್ಥಿಕತೆಗೆ ಉತ್ತೇಜನ ದೊರೆಯಬಹುದು ಎಂದು ಹೇಳಿದರು.

ಹೊಸ ಶಾಖೆ ಆರಂಭಿಸಿದ ಕರೂರ್ ವೈಶ್ಯ ಬ್ಯಾಂಕ್

ಚೆನ್ನೈ (ಪಿಟಿಐ): ಖಾಸಗಿ ವಲಯದ ಕರೂರ್ ವೈಶ್ಯ ಬ್ಯಾಂಕ್ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ತನ್ನ ನೂತನ ಶಾಖೆಗಳನ್ನು ಆರಂಭಿಸಿದೆ.

ಮಧುರೈನ ಉಸಿಲಂಪಟ್ಟಿ ಮತ್ತು ಚೆನ್ನೈ ಬಳಿಯ ಮಾಥುರ್ ಹಾಗೂ ಆಂಧ್ರಪ್ರದೇಶದ ನಂದ್ಯಾಲ ಜಿಲ್ಲೆಯ ಆತ್ಮಕೂರಿನಲ್ಲಿ ಹೊಸ ಶಾಖೆಗಳನ್ನು ಉದ್ಘಾಟಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಈ ಹೊಸ ಶಾಖೆಗಳ ಉದ್ಘಾಟನೆಯೊಂದಿಗೆ ಬ್ಯಾಂಕ್‌ನ ಒಟ್ಟು ಶಾಖೆಗಳ ಸಂಖ್ಯೆ 834ಕ್ಕೇರಿದೆ. 2023ರ ಡಿಸೆಂಬರ್ 31ಕ್ಕೆ ಬ್ಯಾಂಕ್‌ನ ಒಟ್ಟು ವಹಿವಾಟು ₹1.58 ಲಕ್ಷ ಕೋಟಿಯಾಗಿದ್ದು, ಡಿಸೆಂಬರ್ ತ್ರೈಮಾಸಿಕದಲ್ಲಿ ₹412 ಕೋಟಿ ನಿವ್ವಳ ಲಾಭ ಗಳಿಸಿದೆ.

ಷೇರು ಹುಡುಕಲು ಈ ಅನುಪಾತ ಗೊತ್ತಿರಲಿ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಉತ್ತಮ ಷೇರು ಹುಡುಕುವುದು ಹೇಗೆ ಎನ್ನುವುದು ಹೆಚ್ಚಿನವರ ಪ್ರಶ್ನೆ. ಆದರೆ, ಇದಕ್ಕೆ ಉತ್ತರ ಕಂಡುಕೊಳ್ಳಬೇಕು ಎಂದಾದರೆ ಹೂಡಿಕೆದಾರರಿಗೆ ಆರ್‌ಒಇ ಅನುಪಾತ ಮತ್ತು ಪಿಇ ಅನುಪಾತದ ಬಗ್ಗೆ ಗೊತ್ತಿರಲೇಬೇಕು. ಬನ್ನಿ ಷೇರು ಆಯ್ಕೆಯಲ್ಲಿ ಮಹತ್ವದ ಪಾತ್ರ ವಹಿಸುವ ಈ ಎರಡು ಪ್ರಮುಖ ಅನುಪಾತಗಳ ಬಗ್ಗೆ ತಿಳಿಯೋಣ.

ಆರ್‌ಒಇ ಅನುಪಾತ ಎಂದರೇನು?: 'ಎಕ್ಸ್‌ವೈಝೆಡ್' ಅಂತ ಒಂದು ಕಂಪನಿಯಿದ್ದು ಅದು ₹400 ಕೋಟಿ ಲಾಭ ಗಳಿಸಿದೆ ಎಂದು ಭಾವಿಸಿ. ಮತ್ತೊಂದು ಎಬಿಸಿ ಅನ್ನೋ ಕಂಪನಿಯಿದ್ದು ಅದು ₹200 ಕೋಟಿ ಲಾಭ ಸೃಷ್ಟಿಸಿದೆ ಎಂದುಕೊಳ್ಳಿ. ಹೀಗಿದ್ದಾಗ ₹200 ಕೋಟಿ ಲಾಭ ಗಳಿಸಿರುವ ಕಂಪನಿ ಎಬಿಸಿ ಬಗ್ಗೆ ಏನನ್ನೂ ಯೋಚಿಸದೆಯೇ ₹400 ಕೋಟಿ ಲಾಭ ಗಳಿಸಿರುವ 'ಎಕ್ಸ್‌ವೈಝೆಡ್' ಕಂಪನಿ ಮೇಲೆ ನಾವು ಹೂಡಿಕೆ ಮಾಡಲು ಹೋಗುತ್ತೇವೆ.

ಆದರೆ, ಹೀಗೆ ಮಾಡುವುದು ತಪ್ಪು. ಯಾವುದೇ ಕಂಪನಿ ಮೇಲೆ ಹೂಡಿಕೆ ಮಾಡುವಾಗ ಷೇರು ಹೂಡಿಕೆ ಮೇಲಿನ ಗಳಿಕೆ (ಆರ್‌ಒಇ) ಲೆಕ್ಕಾಚಾರ ಮಾಡಬೇಕು. ಉದಾಹರಣೆಗೆ ನಾವು ಉಳಿತಾಯ ಖಾತೆಯಲ್ಲಿ ಹಣ ಇಟ್ಟರೆ ಶೇ 2.5ರಿಂದ ಶೇ 3ರಷ್ಟು ಬಡ್ಡಿ ಲಾಭ ಸಿಗುತ್ತದೆ. ನಿಶ್ಚಿತ ಠೇವಣಿಯಲ್ಲಿ (ಎಫ್.ಡಿ) ಹಣ ತೊಡಗಿಸಿದರೆ ಶೇ 7ರಷ್ಟು ಬಡ್ಡಿ ಗಳಿಕೆ ಲಭಿಸುತ್ತದೆ. ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ ಶೇ 10ರಿಂದ 12ರಷ್ಟು ಲಾಭ ದಕ್ಕುತ್ತದೆ.

ಹೀಗೆಯೇ ನಾವು ಷೇರು ಮಾರುಕಟ್ಟೆಯಲ್ಲಿ ಕಂಪನಿಯೊಂದರ ಮೇಲೆ ಹೂಡಿಕೆ ಮಾಡಿದ ಹಣಕ್ಕೆ ಎಷ್ಟು ಲಾಭ ಸಿಕ್ಕಿದೆ ಎನ್ನುವುದನ್ನು ಷೇರು ಹೂಡಿಕೆ ಮೇಲಿನ ಗಳಿಕೆ ಅಥವಾ ಆರ್‌ಒಇ ತಿಳಿಸಿಕೊಡುತ್ತದೆ. ನಮ್ಮ ಹೂಡಿಕೆ ಹಣವನ್ನು ಬಳಸಿಕೊಂಡು ಕಂಪನಿ ಎಷ್ಟು ಸಂಪತ್ತು ಸೃಷ್ಟಿಸಿದೆ ಎನ್ನುವುದರ ಚಿತ್ರಣವನ್ನು ಆರ್‌ಒಇ ನೀಡುತ್ತದೆ.

ಆರ್‌ಒಇ ಸೂತ್ರ: ಕಂಪನಿಯ ನಿವ್ವಳ ಲಾಭವನ್ನು ಹೂಡಿಕೆದಾರರ ಒಟ್ಟು ಷೇರುಗಳೊಂದಿಗೆ ಭಾಗಿಸಿದಾಗ ಆರ್‌ಒಇ ಅನುಪಾತ ಸಿಗುತ್ತದೆ. (ಕಂಪನಿಯ ನಿವ್ವಳ ಲಾಭ/ಹೂಡಿಕೆದಾರರ ಒಟ್ಟು ಷೇರು = ಆರ್‌ಒಇ ಅನುಪಾತ).

ಉದಾಹರಣೆ 1: ಇಬ್ಬರು ಸ್ನೇಹಿತರು ತಲಾ ಒಂದೊಂದು ಲಕ್ಷ ಹಣ ಹೂಡಿಕೆ ಮಾಡಿ ವ್ಯಾಪಾರ ಶುರು ಮಾಡಿದ್ದಾರೆ ಎಂದು ಭಾವಿಸಿ. ಇಂತಹ ಸಂದರ್ಭದಲ್ಲಿ ಆ ವ್ಯಾಪಾರ ಉತ್ತಮವಾಗಿ ನಡೆಯುತ್ತಿದೆಯಾ, ವ್ಯಾಪಾರ ಹೆಚ್ಚಾಗುತ್ತಿದೆಯಾ ಎಂದು ತಿಳಿಯಲು ಇರುವ ಒಂದೇ ಒಂದು ಮಾನದಂಡವೆಂದರೆ ನಮ್ಮ ಹೂಡಿಕೆ ಮೇಲೆ ಎಷ್ಟು ಲಾಭ ಮಾಡಿದ್ದೇವೆ ಎನ್ನುವುದು. ₹2 ಲಕ್ಷ ಹೂಡಿಕೆ ಮೇಲೆ ₹10 ಸಾವಿರ ಲಾಭ ಗಳಿಸಿದ್ದೇವೆ ಎಂದು ಭಾವಿಸಿ. ಆಗ ಹೂಡಿಕೆ ಮೇಲಿನ ಗಳಿಕೆ ಶೇ 5ರಷ್ಟು ಆಗುತ್ತದೆ. ವ್ಯಾಪಾರ ಮಾಡಿ ಇಷ್ಟು ಕಡಿಮೆ ಪ್ರಮಾಣದ ಲಾಭ ಗಳಿಸುವ ಬದಲು ಅದೇ ಹಣವನ್ನು ನಿಶ್ಚಿತ ಠೇವಣಿಯಲ್ಲಿ ಇಡುವುದು ಉತ್ತಮವಲ್ಲವೇ?

ಉದಾಹರಣೆ 2: ಕಂಪನಿಯೊಂದರ ಹೂಡಿಕೆದಾರರ ಷೇರಿನ ಮೌಲ್ಯ ₹1,000 ಕೋಟಿಯಿದ್ದು ಆ ಕಂಪನಿ ₹200 ಕೋಟಿ ಲಾಭ ಗಳಿಸಿದೆ ಎಂದಾದರೆ ಹೂಡಿಕೆ ಮೇಲಿನ ಗಳಿಕೆ ಶೇ 20 ರಷ್ಟಾಗುತ್ತದೆ. ಅಂದರೆ ಈ ಕಂಪನಿ ಹೂಡಿಕೆ ಮೇಲೆ ಉತ್ತಮ ಗಳಿಕೆ ತಂದುಕೊಟ್ಟಿದೆ ಎಂದರ್ಥ. ಸಾಮಾನ್ಯವಾಗಿ ಶೇ 14ರಿಂದ ಶೇ 20ರಷ್ಟು ಆರ್‌ಒಇ ಇದ್ದರೆ ಒಳ್ಳೆಯದು ಎಂದು ಪರಿಗಣಿಸಲಾಗುತ್ತದೆ.



ಪಿಇ ಅನುಪಾತ ಎಂದರೇನು?: ಪಿಇ ಅನುಪಾತ ಎಂದರೆ ಪ್ರೈಸ್ ಟು ಅರ್ನಿಂಗ್ಸ್ ರೇಷಿಯೊ (ಬೆಲೆ ಮೇಲಿನ ಗಳಿಕೆ ಅನುಪಾತ). ನಿರ್ದಿಷ್ಟ ಕಂಪನಿಯೊಂದರ ಷೇರಿನ ಬೆಲೆ ಹೆಚ್ಚಿದೆಯಾ ಅಥವಾ ಕಡಿಮೆ ಇದೆಯಾ ಎಂದು ತಿಳಿಯುವುದೇ ಪಿಇ ಅನುಪಾತದ ಮೂಲಕ. ಕಂಪನಿಯ ಒಂದು ರೂಪಾಯಿ ಗಳಿಕೆಗೆ ನೀವು ಎಷ್ಟು ರೂಪಾಯಿ ಕೊಡಲು ತಯಾರಿದ್ದೀರಿ ಎನ್ನುವುದನ್ನು ಪಿಇ ಅನುಪಾತ ತಿಳಿಸಿಕೊಡುತ್ತದೆ.

ಒಂದು ಷೇರಿನ ಪಿಇ ಅನುಪಾತ 20 ಇದೆ ಎಂದು ಭಾವಿಸಿ ಆಗ ಒಂದು ರೂಪಾಯಿ ಗಳಿಕೆಗೆ ₹20 ಕೊಡಲು ತಯಾರಿದ್ದೀರಿ ಎಂದರ್ಥ. ಮತ್ತೊಂದು ಷೇರಿನ ಪಿಇ ಅನುಪಾತ 40 ಇದ್ದು ಅದರ ಖರೀದಿಗೆ ಮುಂದಾದರೆ ಒಂದು ರೂಪಾಯಿ ಗಳಿಕೆಗೆ ₹40 ಕೊಡಲು ತಯಾರಿದ್ದೀರಿ ಎಂದಾಗುತ್ತದೆ. ಒಂದು ವಲಯದ ಕಂಪನಿಯನ್ನು ಮತ್ತೊಂದು ವಲಯದ ಕಂಪನಿಯೊಂದಿಗೆ ಹೋಲಿಕೆ ಮಾಡಿ ಪಿಇ ಅನುಪಾತ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಉದಾಹರಣೆಗೆ ಮಾಹಿತಿ ತಂತ್ರಜ್ಞಾನ ವಲಯದ ಷೇರನ್ನು ಬ್ಯಾಂಕಿಂಗ್ ವಲಯದ ಷೇರಿನ ಜೊತೆ ಹೋಲಿಕೆ ಮಾಡುವಂತಿಲ್ಲ. ಮಾಹಿತಿ ತಂತ್ರಜ್ಞಾನದ ಷೇರನ್ನು ಅದೇ ವಲಯದ ಮತ್ತೊಂದು ಷೇರಿಗೆ ಹೋಲಿಕೆ ಮಾಡಬಹುದು. ಅದೇ ರೀತಿ ಒಂದು ಬ್ಯಾಂಕಿಂಗ್ ವಲಯದ ಷೇರನ್ನು ಮತ್ತೊಂದು ಬ್ಯಾಂಕಿಂಗ್ ಷೇರಿಗೆ ಹೋಲಿಕೆ ಮಾಡಬಹುದು. ಷೇರಿನ ಪ್ರಸ್ತುತ ಮಾರುಕಟ್ಟೆ ಬೆಲೆಯೊಂದಿಗೆ ಪ್ರತಿ ಷೇರಿನ ಮೇಲಿನ ಗಳಿಕೆಯನ್ನು ಭಾಗಿಸಿದಾಗ ಪಿಇ ಅನುಪಾತ ಸಿಗುತ್ತದೆ. (ಷೇರಿನ ಪ್ರಸ್ತುತ ಮಾರುಕಟ್ಟೆ ಬೆಲೆ/ ಪ್ರತಿ ಷೇರಿನ ಮೇಲಿನ ಗಳಿಕೆ = ಪಿಇ ಅನುಪಾತ).

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಉತ್ತಮ ಗಳಿಕೆ ಕಂಡ ಷೇರುಪೇಟೆ ಸೂಚ್ಯಂಕಗಳು

ಸತತ ಎರಡು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಲಯಕ್ಕೆ ಮರಳಿವೆ. ಫೆಬ್ರುವರಿ 2ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ.

72,085 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2ರಷ್ಟು ಗಳಿಸಿಕೊಂಡಿದೆ. 21,853 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 2.34ರಷ್ಟು ಜಿಗಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ (ಐಎಂಎಫ್) ಭಾರತದ ಜಿಡಿಪಿ ಬೆಳವಣಿಗೆ ಗುರಿ ಹೆಚ್ಚಳ, ಬಡ್ಡಿದರ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಅಮೆರಿಕದ ಫೆಡರಲ್ ಬ್ಯಾಂಕ್, ಮಧ್ಯಂತರ ಬಜೆಟ್‌ಗೆ ಸಿಕ್ಕ ಉತ್ತಮ ಪ್ರತಿಕ್ರಿಯೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ನಿರೀಕ್ಷಿತ ಗಳಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 11.5, ಅನಿಲ ಮತ್ತು ತೈಲ ಸೂಚ್ಯಂಕ ಶೇ 9, ಎನರ್ಜಿ ಸೂಚ್ಯಂಕ ಶೇ 8ರಷ್ಟು ಗಳಿಸಿಕೊಂಡಿವೆ. ಉಳಿದಂತೆ ನಿಫ್ಟಿ ಲೋಹ, ಆಟೊ ಮತ್ತು ರಿಯಲ್ ಎಸ್ಟೇಟ್ ತಲಾ ಶೇ 4ರಷ್ಟು ಹೆಚ್ಚಳ ಕಂಡಿವೆ. ಕಳೆದ ವಾರ ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹10,102.62 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,008.68 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಭಾರತ್ ಪೆಟ್ರೋಲಿಯಂ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಪವರ್ ಗ್ರಿಡ್ ಕಾರ್ಪೊರೇಷನ್, ಬ್ಯಾಂಕ್ ಆಫ್ ಬರೋಡಾ ಮತ್ತು ಅದಾನಿ ಪೋರ್ಟ್ ಆ್ಯಂಡ್ ಸ್ಪೆಷಲ್ ಎಕಾನಾಮಿಕ್ ಜೋನ್ ಗಳಿಕೆ ಕಂಡಿವೆ. ಪೇಟಿಎಂ, ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್ ಮತ್ತು ಲಾರ್ಸನ್ ಆ್ಯಂಡ್ ಟ್ಯೂಬ್ರೋ ಕುಸಿದಿವೆ.

ಮುನ್ನೋಟ: ಈ ವಾರ ಅಶೋಕ್ ಲೇಲ್ಯಾಂಡ್, ಬಜಾಜ್ ಕನ್ಸ್ಯೂಮರ್ ಕೇರ್ ಲಿ., ಬಜಾಜ್ ಎಲೆಕ್ಟ್ರಿಕಲ್ಸ್ ಲಿ., ಏರ್‌ಟೆಲ್, ಬಾರ್ಬಿಕ್ಯೂ ನೇಷನ್ ಹಾಸ್ಪಿಟಾಲಿಟಿ, ಐಡಿಯಾ ಫೋರ್ಜ್ ಟೆಕ್ನಾಲಜಿ, ಸಿಎಎಂಎಸ್, ಗೋ ಕಲರ್ಸ್, ಗೋದ್ರೇಜ್ ಪ್ರಾಪರ್ಟೀಸ್, ಜೆಕೆ ಟೈರ್, ನೈಕಾ, ಟಿಟಿಕೆ ಪ್ರೆಸ್ಟೀಜ್, ಅಪೋಲೋ ಟೈರ್, ಜೆಕೆ ಪೇಪರ್, ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್, ಲುಪಿನ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಒಣ ಮೆಣಸಿನಕಾಯಿ ಮಾರಾಟ ಮೇಳ: ₹1.37 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ಕಳೆದ ಮೂರು ದಿನಗಳಿಂದ ನಡೆದ '12ನೇ ಒಣಮೆಣಸಿನಕಾಯಿ ಮೇಳ'ವು ಭಾನುವಾರ ಮುಕ್ತಾಯಗೊಂಡಿದ್ದು, ಒಟ್ಟು ₹1.37 ಕೋಟಿ ವಹಿವಾಟು ನಡೆಸಿದೆ.

'ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ವತಿಯಿಂದ ಫೆ.2ರಿಂದ ಫೆ.4 ರವರೆಗೆ ಒಣ ಮೆಣಸಿನಕಾಯಿ ಮಾರಾಟ ಮೇಳ ಆಯೋಜಿಸಲಾಗಿತ್ತು.

ಮೂರು ದಿನ ನಡೆದ ಮೇಳದಲ್ಲಿ ಬ್ಯಾಡಗಿ ಡಬ್ಬಿ, ಕಡ್ಡಿ, ಗುಂಟೂರು, ದೇವನೂರು ಲೋಕಲ್, ಹಳಿಯಾಳ ಲೋಕಲ್ ಸೇರಿ ವಿವಿಧ ತಳಿಯ ಒಟ್ಟು 447 ಕ್ವಿಂಟಲ್ ಒಣ ಮೆಣಸಿನಕಾಯಿ ಬಂದಿತ್ತು. ಇದರಲ್ಲಿ 305 ಕ್ವಿಂಟಲ್ ಮಾರಾಟವಾಗುವ ಮೂಲಕ ಒಟ್ಟು ₹1.37 ಕೋಟಿ ವಹಿವಾಟು ನಡೆದಿದೆ' ಎಂದು ಮಂಡಳಿಯ ಪ್ರಧಾನ ವ್ಯವಸ್ಥಾಪಕ ಸಿದ್ದರಾಮಯ್ಯ ಬರಗಿಮಠ ತಿಳಿಸಿದರು.

'ಮೇಳದಲ್ಲಿ ಶೇಂಗಾ ಚಟ್ನಿ ಪುಡಿ, ಗುರೆಳು ಚಟ್ನಿ ಪುಡಿ, ಮಸಾಲೆ ಚಟ್ನಿ ಪುಡಿ, ಒಣ ಮೆಣಸಿನಕಾಯಿ ಪೌಡರ್ ಹಾಗೂ ಅರಿಸಿನ ಪುಡಿಯ ಮಾರಾಟವೂ ನಡೆಯಿತು.

ಧಾರವಾಡ, ಹಾವೇರಿ, ಗದಗ, ವಿಜಯಪುರ, ಬಾಗಲಕೋಟೆ ಹಾಗೂ ಬಳ್ಳಾರಿ ಜಿಲ್ಲೆಯಿಂದ 100ಕ್ಕೂ ಅಧಿಕ ರೈತರು ಮೇಳದಲ್ಲಿ ಭಾಗವಹಿಸಿದ್ದರು. ಮೇಳಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ರೈತರಿಗೂ ಉತ್ತಮ ವ್ಯಾಪಾರವಾಗಿದೆ' ಎಂದು ಹೇಳಿದರು.

ಜಾಗತಿಕ ಬ್ರ್ಯಾಂಡ್ ಗಾರ್ಡಿಯನ್‌ಶಿಪ್ ಸೂಚ್ಯಂಕ

ಮುಕೇಶ್ ಅಂಬಾನಿಗೆ 2ನೇ ಸ್ಥಾನ

ಮುಖ್ಯಾಂಶಗಳು

- 'ಬ್ರ್ಯಾಂಡ್ ಫೈನಾನ್ಸ್' ಸಂಸ್ಥೆ ಬಿಡುಗಡೆಗೊಳಿಸಿದ ಪಟ್ಟಿ
- ಕಳೆದ ಬಾರಿಯೂ ಎರಡನೇ ಸ್ಥಾನದಲ್ಲಿದ್ದ ಅಂಬಾನಿ
- ಅಗ್ರಸ್ಥಾನದಲ್ಲಿ ಚೀನಾದ ಹುವಾತೆಂಗ್ ಮಾ



ಮುಕೇಶ್ ಅಂಬಾನಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು 'ಬ್ರ್ಯಾಂಡ್ ಫೈನಾನ್ಸ್' ಸಂಸ್ಥೆ ಬಿಡುಗಡೆಗೊಳಿಸಿದ 'ಬ್ರ್ಯಾಂಡ್ ಗಾರ್ಡಿಯನ್‌ಶಿಪ್ ಸೂಚ್ಯಂಕ' ಪಟ್ಟಿಯಲ್ಲಿ ಭಾರತದ ಉದ್ಯಮಿಗಳಲ್ಲಿ ಮೊದಲ ಹಾಗೂ ಜಾಗತಿಕ ಮಟ್ಟದಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ.

ಮೈಕ್ರೊಸಾಫ್ಟ್‌ನ ಸತ್ಯ ನಾದೆಲ್ಲ, ಗೂಗಲ್‌ನ ಸುಂದರ್ ಪಿಚೈ, ಆ್ಯಪಲ್ ಕಂಪನಿಯ ಟಿಮ್ ಕುಕ್ ಮತ್ತು ಟೆಸ್ಲಾ ಕಂಪನಿಯ ಇಲಾನ್ ಮಸ್ಕ್ ಅವರನ್ನು ಅಂಬಾನಿ ಹಿಂದಿಕ್ಕಿದ್ದಾರೆ. ಚೀನಾ ಮೂಲದ ಟೆನ್‌ಸೆಂಟ್ ಕಂಪನಿಯ ಹುವಾತೆಂಗ್ ಮಾ ಅವರಿಗೆ ಪಟ್ಟಿಯಲ್ಲಿ ಅಗ್ರಸ್ಥಾನ ದೊರೆತಿದೆ.

ಸಂಬಂಧಪಟ್ಟ ಎಲ್ಲ ಭಾಗೀದಾರರು, ಉದ್ಯೋಗಿಗಳು ಮತ್ತು ಹೂಡಿಕೆದಾರರ ಅಗತ್ಯಗಳ ಜತೆ ಸಮತೋಲನ ಕಾಪಾಡಿಕೊಂಡು ಸುಸ್ಥಿರವಾಗಿ ವ್ಯಾಪಾರದ ಮೌಲ್ಯವನ್ನು ಹೆಚ್ಚಳ ಮಾಡಿದ ಸಿಇಒಗಳಿಗೆ ಜಾಗತಿಕ ಮಟ್ಟದಲ್ಲಿ ಮನ್ನಣೆ ನೀಡುವುದು ಈ ಸೂಚ್ಯಂಕದ ಉದ್ದೇಶ ಎಂದು ಸಂಸ್ಥೆಯು ಹೇಳಿದೆ.

2023ರ ಪಟ್ಟಿಯಲ್ಲೂ ಅಂಬಾನಿ ಅವರು ಜಾಗತಿಕ ಮಟ್ಟದಲ್ಲಿ ಎರಡನೇ ಸ್ಥಾನದಲ್ಲಿದ್ದರು. ಬ್ರ್ಯಾಂಡ್ ಫೈನಾನ್ಸ್ ಸಮೀಕ್ಷೆಯು ಅಂಬಾನಿ ಅವರಿಗೆ 80.3 ಸ್ಕೋರ್ ನೀಡಿದೆ. ಅಗ್ರಸ್ಥಾನ ಪಡೆದ ಮಾ ಅವರಿಗೆ 81.6 ಸ್ಕೋರ್ ಲಭಿಸಿದೆ.

ಟಾಟಾ ಸನ್ಸ್ ಚೇರ್‌ಮನ್ ಎನ್. ಚಂದ್ರಶೇಖರನ್ ಪಟ್ಟಿಯಲ್ಲಿ 5ನೇ ಸ್ಥಾನದಲ್ಲಿದ್ದಾರೆ. ಕಳೆದ ಬಾರಿ ಅವರು ಎಂಟನೇ ಸ್ಥಾನದಲ್ಲಿದ್ದರು. ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಅನೀಶ್ ಶಾ ಅವರು ಆರನೇ ಸ್ಥಾನ ಹಾಗೂ ಇನ್ಫೊಸಿಸ್‌ನ ಸಲೀಲ್ ಪಾರೇಖ್ 16ನೇ ಸ್ಥಾನದಲ್ಲಿದ್ದಾರೆ.



ಹೈದರಾಬಾದ್‌ನಲ್ಲಿ ಭಾನುವಾರ ನಡೆದ 'ಜನ ಗಣ ಮನ ಅಭಿಯಾನ'ದಲ್ಲಿ ನಾಗರಿಕರು ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಪಾಕ್ ಚುನಾವಣೆ: ಖುರೇಷಿ ಅನರ್ಹ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಚುನಾವಣಾ ಆಯೋಗವು ಮಾಜಿ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ಅವರನ್ನು ಐದು ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸಿದೆ.

ಪಾಕಿಸ್ತಾನದ ಮಾಜಿ ಅಧ್ಯಕ್ಷ ಇಮ್ರಾನ್ ಖಾನ್ ಅವರ ಆಪ್ತರೂ ಆಗಿರುವ ಖುರೇಷಿ, ದೇಶದ ರಹಸ್ಯ ಮಾಹಿತಿಗಳನ್ನು ಸೋರಿಕೆ ಮಾಡಿದ್ದ ಪ್ರಕರಣದಲ್ಲಿ 10 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಇಸ್ಲಾಮಾಬಾದ್‌ನ ವಿಶೇಷ ನ್ಯಾಯಾಲಯ ಇದೇ ಪ್ರಕರಣದಲ್ಲಿ ಇಮ್ರಾನ್ ಅವರಿಗೂ 10 ವರ್ಷ ಜೈಲು ಶಿಕ್ಷೆ ವಿಧಿಸಿತ್ತು.

'ಅಪರಾಧ ಸಾಬೀತಾಗಿರುವ ಯಾವುದೇ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ. ಆದ್ದರಿಂದ ಖುರೇಷಿ ಅವರನ್ನು ಅನರ್ಹಗೊಳಿಸಲಾಗಿದೆ' ಎಂದು ಚುನಾವಣಾ ಆಯೋಗ ಹೇಳಿರುವುದಾಗಿ 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ.

ಐದು ವರ್ಷಗಳ ಕಾಲ ರಾಜಕೀಯ ಚಟುವಟಿಕೆ ನಡೆಸದಂತೆ ಇಮ್ರಾನ್ ಖಾನ್ ಮೇಲೆ ಈ ಹಿಂದೆಯೇ ನಿರ್ಬಂಧ ಹೇರಲಾಗಿತ್ತು.

ನಮೀಬಿಯಾ ಅಧ್ಯಕ್ಷ ಕ್ಯಾನ್ಸರ್‌ನಿಂದ ನಿಧನ



ಹಾಗೆ ಜಿಂಗೋಬ್

ವಿಂಡ್ಹೋಕ್ (ಎಎಫ್‌ಪಿ): ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ನಮೀಬಿಯಾ ಅಧ್ಯಕ್ಷ ಹಾಗೆ ಜಿಂಗೋಬ್ (82) ಅವರು ಭಾನುವಾರ 'ವಿಶ್ವ ಕ್ಯಾನ್ಸರ್ ದಿನ'ವೇ ನಿಧನರಾಗಿದ್ದಾರೆ.

ಜಿಂಗೋಬ್ ಅವರಿಗೆ ಪತ್ನಿ ಮೋನಿಕಾ ಜಿಂಗೋಸ್ ಮತ್ತು ಮಕ್ಕಳು ಇದ್ದಾರೆ. ಸ್ವಾತಂತ್ರ್ಯ ನಂತರದ ನಮೀಬಿಯಾದ ಮೊದಲ ಪ್ರಧಾನಿಯಾಗಿದ್ದ ಜಿಂಗೋಬ್ ಅವರು ಎರಡನೇ ಬಾರಿಗೆ ದೇಶದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಕಳೆದ ತಿಂಗಳು ನಿಯಮಿತ ವೈದ್ಯಕೀಯ ತಪಾಸಣೆಗೆ ಒಳಗಾದಾಗ ಅವರಿಗೆ ಕ್ಯಾನ್ಸರ್ ಕಾಯಿಲೆ ಇರುವುದು ಪತ್ತೆಯಾಗಿತ್ತು ಎಂದು ಅವರ ಕಚೇರಿ ತಿಳಿಸಿದೆ. ವಿಂಡ್ಹೋಕ್‌ನ ಲೇಡಿ ಪೊಹಂಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗಲೇ ನಿಧನರಾಗಿದ್ದಾರೆ. 2013ರಲ್ಲಿ ಜಿಂಗೋಬ್ ಅವರಿಗೆ ಮಿದುಳು ಶಸ್ತ್ರ ಚಿಕಿತ್ಸೆ ಕೂಡ ಆಗಿತ್ತು.

8 ಕಂಪನಿಗಳ ಎಂ–ಕ್ಯಾಪ್ ₹2.90 ಲಕ್ಷ ಕೋಟಿ ಏರಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ಕಳೆದ ವಾರ ₹2.90 ಲಕ್ಷ ಕೋಟಿ ಏರಿಕೆಯಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ಹೆಚ್ಚು ಗಳಿಕೆ ಕಂಡಿದೆ.

ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಎಲ್‌ಐಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಹಿಂದುಸ್ತಾನ್ ಯೂನಿಲಿವರ್ ಮೌಲ್ಯ ಹೆಚ್ಚಾಗಿದೆ. ಭಾರ್ತಿ ಏರ್‌ಟೆಲ್ ಮತ್ತು ಐಟಿಸಿಯ ಮೌಲ್ಯ ಇಳಿಕೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ₹1.38 ಲಕ್ಷ ಕೋಟಿ, ಟಿಸಿಎಸ್ ₹57,867 ಕೋಟಿ, ಎಸ್‌ಬಿಐ ₹33,467 ಕೋಟಿ, ಎಲ್‌ಐಸಿ ₹26,158 ಕೋಟಿ, ಐಸಿಐಸಿಐ ಬ್ಯಾಂಕ್ ₹10,522 ಕೋಟಿ, ಇನ್ಫೊಸಿಸ್ ₹9,566 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹8,771 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹5,627 ಕೋಟಿ ಎಂ–ಕ್ಯಾಪ್ ಗಳಿಸಿವೆ.

ಐಟಿಸಿ ₹18,931 ಕೋಟಿ ಮತ್ತು ಭಾರ್ತಿ ಏರ್‌ಟೆಲ್ ₹5,231 ಕೋಟಿಯಷ್ಟು ಮಾರುಕಟ್ಟೆ ಮೌಲ್ಯ ಕಳೆದುಕೊಂಡಿವೆ.

ಎಲ್ಲ ಕಂಪನಿಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಗಳಿಕೆಯಲ್ಲಿ ಮುಂಚೂಣಿಯಲ್ಲಿದೆ. ನಂತರದ ಸ್ಥಾನಗಳಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಭಾರ್ತಿ ಏರ್‌ಟೆಲ್, ಎಲ್‌ಐಸಿ, ಎಸ್‌ಬಿಐ, ಹಿಂದುಸ್ತಾನ್ ಯೂನಿಲಿವರ್ ಮತ್ತು ಐಟಿಸಿ ಇವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹575
12 ಕ್ಕೆ ₹76
ಮೈಸೂರು
100ಕ್ಕೆ ₹577

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)
₹250-441
ದ್ವಿತಳಿ (ಬಿ.ವಿ)
₹285-566

ಬಿಜೆಪಿಯಿಂದ ಆಮ್ ಆದ್ಮಿ ಪಕ್ಷದ ಶಾಸಕರ ಖರೀದಿ ಯತ್ನ– ಆರೋಪ

ಸಚಿವೆ ಆತಿಶಿಗೆ ಪೊಲೀಸರ ನೋಟಿಸ್



ಆತಿಶಿ

ನವದೆಹಲಿ (ಪಿಟಿಐ): ಎಎಪಿ ಶಾಸಕರ ಖರೀದಿಗೆ ಬಿಜೆಪಿ ಯತ್ನಿಸುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿಯ ಅಪರಾಧ ವಿಭಾಗದ ಪೊಲೀಸರು ದೆಹಲಿಯ ಹಣಕಾಸು ಸಚಿವೆ ಆತಿಶಿ ಅವರಿಗೆ ಭಾನುವಾರ ನೋಟಿಸ್ ನೀಡಿದ್ದಾರೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೂ ಪೊಲೀಸರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಶನಿವಾರ ನೋಟಿಸ್ ನೀಡಿದ್ದರು.

ಪೊಲೀಸರು ಭಾನುವಾರ ಮಧ್ಯಾಹ್ನ 12.55ಕ್ಕೆ ಎರಡನೇ ಬಾರಿ ಆತಿಶಿ ಅವರ ನಿವಾಸಕ್ಕೆ ಭೇಟಿ ನೀಡಿದಾಗ, ಸಚಿವರ ಸಿಬ್ಬಂದಿ ನೋಟಿಸ್ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನೋಟಿಸ್ ಪ್ರಕಾರ, ಶಾಸಕರ ಖರೀದಿ ಕುರಿತು ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಇದೇ 5ರೊಳಗೆ ಸೂಕ್ತ ಮಾಹಿತಿ ಒದಗಿಸುವಂತೆ ಸಚಿವೆ ಆತಿಶಿ ಅವರಿಗೆ ಹೇಳಲಾಗಿದೆ.

‘ನೋಟಿಸ್ ನೀಡುವಾಗ ಸಚಿವರು ನಿವಾಸದಲ್ಲಿ ಇರಲಿಲ್ಲ. ಶನಿವಾರವೂ ಅವರು ಲಭ್ಯರಿರಲಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಎಪಿ ಸರ್ಕಾರವನ್ನು ಉರುಳಿಸಲು ಹಾಗೂ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಲಾ ₹25 ಕೋಟಿ ಮತ್ತು ಟಿಕೆಟ್ ನೀಡುವ ಆಮಿಷವನ್ನು ಎಎಪಿಯ ಏಳು ಶಾಸಕರಿಗೆ ಬಿಜೆಪಿ ಒಡ್ಡಿದೆ ಎಂದು ಕೇಜ್ರಿವಾಲ್ ಮತ್ತು ಆತಿಶಿ ಅವರು ಜನವರಿ 27ರಂದು ಆರೋಪಿಸಿದ್ದರು. ಈ ಆರೋಪಗಳು ಸುಳ್ಳು ಮತ್ತು ಆಧಾರರಹಿತ ಎಂದು ಬಿಜೆಪಿ ತಳ್ಳಿಹಾಕಿತ್ತು.

‘ಎಫ್‌ಐಆರ್ ಉಲ್ಲೇಖ ಇಲ್ಲ’

ತನಗೆ ಪೊಲೀಸರು ನೀಡಿರುವ ನೋಟಿಸ್‌ನಲ್ಲಿ ಎಫ್‌ಐಆರ್ ಅಥವಾ ಇತರ ನಿಬಂಧನೆಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ ಎಂದು ದೆಹಲಿ ಸಚಿವೆ ಆತಿಶಿ ಭಾನುವಾರ ಹೇಳಿದರು.

ಕೆಲ ರಾಜಕೀಯ ನಾಯಕರ ಒತ್ತಡಕ್ಕೆ ತಕ್ಕಂತೆ ಕೆಲಸ ಮಾಡುತ್ತಿರುವ ಅಪರಾಧ ವಿಭಾಗದ ಅಧಿಕಾರಿಗಳ ಮೇಲೆ ಸಹಾನುಭೂತಿ ಇದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕೇಜ್ರಿವಾಲ್ ಅವರಿಗೆ ಶನಿವಾರ, ನನಗೆ ಭಾನುವಾರ ನೋಟಿಸ್ ನೀಡಲಾಗಿದೆ. ಆದರೆ ಅದರಲ್ಲಿ ಎಫ್‌ಐಆರ್, ಐಪಿಸಿ ಅಥವಾ ಸಿಆರ್‌ಪಿಸಿ ಅಥವಾ ಪಿಎಂಎಲ್‌ಎ ಅಥವಾ ಭ್ರಷ್ಟಾಚಾರ ತಡೆ ಕಾಯ್ದೆಯ ಉಲ್ಲೇಖಗಳೇ ಇಲ್ಲ’ ಎಂದರು.

ಬಿಜೆಪಿಗೆ ತಲೆಬಾಗಲ್ಲ: ಕೇಜ್ರಿವಾಲ್



‘ನನ್ನನ್ನು ಜೈಲಿಗೆ ಕಳುಹಿಸಿದರೂ, ಜನರಿಗಾಗಿ ನಡೆಯುತ್ತಿರುವ ನನ್ನ ಸರ್ಕಾರದ ಅಭಿವೃದ್ಧಿ ಕಾರ್ಯಗಳು ನಿಲ್ಲುವುದಿಲ್ಲ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದರು.

ಇಲ್ಲಿನ ಕಿರಾರಿಯಲ್ಲಿ ಎರಡು ಶಾಲಾ ಕಟ್ಟಡಗಳ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ‘ನಾನು ಅವರ ಪಕ್ಷ ಸೇರಬೇಕು ಎಂದು ಬಿಜೆಪಿ ಬಯಸುತ್ತಿದೆ. ಆದರೆ ನಾನು ಅವರಿಗೆ ತಲೆಬಾಗುವುದಿಲ್ಲ’ ಎಂದರು.

‘ಶಾಲೆಗಳನ್ನು ನಿರ್ಮಿಸಿದ್ದಕ್ಕಾಗಿ ಮನೀಷ್ ಸಿಸೋಡಿಯಾ ಅವರನ್ನು, ಮೊಹಲ್ಲಾ ಕ್ಲಿನಿಕ್‌ಗಳನ್ನು ನಿರ್ಮಿಸಿದ್ದಕ್ಕಾಗಿ ಸತ್ಯೇಂದ್ರ ಜೈನ್ ಅವರನ್ನು ಜೈಲಿಗಟ್ಟಿದ್ದಾರೆ’ ಎಂದು ಕಿಡಿಕಾರಿದರು. ‘ಒಂದು ವೇಳೆ ನೀವು ಕೇಜ್ರಿವಾಲ್ ಅವರನ್ನು ಜೈಲಿಗೆ ಹಾಕಿದರೂ, ಶಾಲೆಗಳು ಮತ್ತು ಮೊಹಲ್ಲಾ ಕ್ಲಿನಿಕ್‌ಗಳ ನಿರ್ಮಾಣ ಹಾಗೂ ದೆಹಲಿ ಜನರಿಗೆ ಸಿಗುತ್ತಿರುವ ಉಚಿತ ಚಿಕಿತ್ಸಾ ಕೆಲಸ ಕಾರ್ಯಗಳೂ ನಿಲ್ಲುವುದಿಲ್ಲ’ ಎಂದು ಅವರು ಗುಡುಗಿದರು.

ಕೇಂದ್ರ ಬಜೆಟ್ ವಿರುದ್ಧ ಕಿಡಿ: ಕೇಂದ್ರ ಬಜೆಟ್ ಕುರಿತು ಪ್ರಸ್ತಾಪಿಸಿದ ಅವರು, ದೆಹಲಿ ಸರ್ಕಾರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಶೇ 40ರಷ್ಟು ಖರ್ಚು ಮಾಡುತ್ತಿದ್ದರೆ, ಕೇಂದ್ರ ಸರ್ಕಾರ ಈ ಕ್ಷೇತ್ರಗಳಿಗೆ ಕೇವಲ ಶೇ 4ರಷ್ಟನ್ನು ಮೀಸಲಿಟ್ಟಿದೆ ಎಂದು ಕಿಡಿಕಾರಿದರು.

‘ಪರಂಪರೆಯ ಮಹತ್ವ ಅರಿಯಲಿಲ್ಲ’

ಪ್ರಜಾವಾಣಿ ವಾರ್ತೆ



ಗುವಾಹಟಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಗುವಾಹಟಿ: ಸ್ವಾತಂತ್ರ್ಯ ನಂತರ ಆಡಳಿತ ನಡೆಸಿದ ಸರ್ಕಾರಗಳು ರಾಜಕೀಯ ಲಾಭಕ್ಕಾಗಿ ಪವಿತ್ರ ಸ್ಥಳಗಳು ಮತ್ತು ಪ್ರಾಚೀನ ನಾಗರಿಕತೆಯ ಬಗ್ಗೆ ನಾಚಿಕೆಪಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದವು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪರೋಕ್ಷವಾಗಿ ಕಾಂಗ್ರೆಸ್ ಅನ್ನು ಖಂಡಿಸಿದರು.

ಸರ್ಕಾರಗಳ ಈ ಧೋರಣೆಯನ್ನು ಕಳೆದ 10 ವರ್ಷಗಳಲ್ಲಿ ‘ವಿಕಾಸ್’ (ಅಭಿವೃದ್ಧಿ) ಮತ್ತು ‘ವಿರಾಸತ್’ (ಪರಂಪರೆ) ಅನ್ನು ಕೇಂದ್ರೀಕರಿಸಿದ ನೀತಿಗಳ ಮೂಲಕ ಬದಲಿಸಿದ್ದೇವೆ. ಯಾವುದೇ ದೇಶವು ತನ್ನ ಹಿಂದಿನ ಪರಂಪರೆಯನ್ನು ಮರೆತು ಪ್ರಗತಿ ಸಾಧಿಸಲು ಆಗದು ಎಂದರು.

ಗುವಾಹಟಿಯಲ್ಲಿ ಸುಮಾರು ₹ 11,600 ಕೋಟಿ ವೆಚ್ಚದ ವಿವಿಧ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ ಅವರು, ಬೃಹತ್ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಐತಿಹಾಸಿಕ ಮತ್ತು ಆಧ್ಯಾತ್ಮಿಕ ಸ್ಥಳಗಳನ್ನು ಆಧುನಿಕ ಸೌಕರ್ಯಗಳೊಂದಿಗೆ ಸಂಪರ್ಕಿಸುವಂತೆ ಮಾಡುವುದು ಹಾಗೂ ಆ ನೆಲೆಗಳ ಸಂರಕ್ಷಿಸುವುದು ಅತಿ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಅಭಿವೃದ್ಧಿ ಕಾರ್ಯಗಳನ್ನು ವೇಗಗೊಳಿಸುತ್ತದೆ ಎಂದು ಭರವಸೆ ನೀಡಿದರು.

‘ವಾರಾಣಸಿಯಲ್ಲಿ ಕಾಶಿ ಕಾರಿಡಾರ್ ಅಭಿವೃದ್ಧಿಯ ಬಳಿಕ ಯಾತ್ರಿಗಳ ಸಂಖ್ಯೆ ಹೆಚ್ಚಾಗಿದೆ. ಕಳೆದ ವರ್ಷ 8.50 ಕೋಟಿ ಯಾತ್ರಿಕರು ಕಾಶಿಗೆ, ಐದು ಕೋಟಿಗೂ ಹೆಚ್ಚು ಯಾತ್ರಿಕರು ಉಜ್ಜಯಿನಿಯ ಮಹಾಕಾಲ್ ಲೋಕಕ್ಕೆ ಹಾಗೂ 19 ಲಕ್ಷಕ್ಕೂ ಹೆಚ್ಚು ಭಕ್ತರು ಕೇದರಧಾಮಕ್ಕೆ ಭೇಟಿ ನೀಡಿದ್ದಾರೆ’ ಎಂದು ಅವರು ಮಾಹಿತಿ ನೀಡಿದರು.

ಅಯೋಧ್ಯೆಯಲ್ಲಿ ರಾಮಮಂದಿರ ತೆರೆದ ಬಳಿಕ, 12 ದಿನಗಳಲ್ಲಿ 24 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡಿದ್ದಾರೆ. ಇಲ್ಲಿನ ‘ಮಾ ಕಾಮಾಖ್ಯ ದಿವ್ಯ ಲೋಕ ಪರಿಯೋಜನಾ’ ಕಾರ್ಯ ಪೂರ್ಣಗೊಂಡ ಬಳಿಕ ಇಲ್ಲಿಗೂ ಭೇಟಿ ನೀಡುವ ಯಾತ್ರಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತದೆ ಎಂದರು.

ಜಾರ್ಖಂಡ್: ಇಂದು ವಿಶ್ವಾಸಮತ ಯಾಚನೆ

ರಾಂಚಿ (ಪಿಟಿಐ): ಜಾರ್ಖಂಡ್ ನೂತನ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ಸೋಮವಾರ ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚನೆ ಮಾಡಲಿದ್ದಾರೆ.

ಬಿಜೆಪಿಯವರು ಶಾಸಕರನ್ನು ಖರೀದಿಸಬಹುದು ಎಂಬ ಆತಂಕದಿಂದ ಫೆಬ್ರುವರಿ 2ರಂದು ಹೈದರಾಬಾದ್‌ಗೆ ತೆರಳಿದ್ದ ಜೆಎಂಎಂ ನೇತೃತ್ವದ ಮೈತ್ರಿಕೂಟದ 40 ಶಾಸಕರು, ವಿಶ್ವಾಸಮತ ಯಾಚನೆ ಕಾರಣ ಭಾನುವಾರ ರಾಂಚಿಗೆ ಬಂದಿಳಿದರು.

ಅವರನ್ನು ಇಲ್ಲಿನ ವಿಮಾನ ನಿಲ್ದಾಣದಿಂದ ಸರ್ಕಾರಿ ಅತಿಥಿ ಗೃಹಕ್ಕೆ ಕರೆದೊಯ್ಯಲಾಯಿತು. ಮೂರು ದಿನಗಳಿಂದ ಹೈದರಾಬಾದ್‌ನ ಹೊರವಲಯದ ಐಷಾರಾಮಿ ರೆಸಾರ್ಟ್‌ನಲ್ಲಿ ಈ ಶಾಸಕರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು.

ಹೇಮಂತ್ ಸೊರೇನ್ ಅವರು ತಮ್ಮ ಬಂಧನಕ್ಕೂ ಮುನ್ನ ಮುಖ್ಯಮಂತ್ರಿ ಹುದ್ದೆಗೆ ಜನವರಿ 31ರಂದು ರಾಜೀನಾಮೆ ನೀಡಿದ್ದರು. ಫೆಬ್ರುವರಿ 2ರಂದು ಚಂಪೈ ಸೊರೇನ್ ಅವರು ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಅಂದು ನಡೆಸಿದ ಮೊದಲ ಸಂಪುಟ ಸಭೆಯಲ್ಲಿ ಇದೇ 5ರಂದು ವಿಶ್ವಾಸಮತ ಯಾಚಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು.

ಉನ್ನತ ಮಟ್ಟದ ಸಭೆ: ಮುಖ್ಯಮಂತ್ರಿ ಅವರು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಕುರಿತು ಭಾನುವಾರ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು. ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ, ಡಿಜಿಪಿ ಹಾಗೂ ಇತರ ಅಧಿಕಾರಿಗಳು ಇದ್ದರು.

‘ಜಾರ್ಖಂಡ್ ಅನ್ನು ಅಪರಾಧ ಮುಕ್ತಗೊಳಿಸುವುದು ನಮ್ಮ ಸರ್ಕಾರದ ಆದ್ಯತೆ. ಅಪರಾಧ ನಿಯಂತ್ರಣಕ್ಕೆ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಿ’ ಎಂದು ಚಂಪೈ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಖರೀದಿ ಭಯ; ಬಿಹಾರದ ಕಾಂಗ್ರೆಸ್ ಶಾಸಕರು ಹೈದರಾಬಾದ್‌ಗೆ

ಪಟ್ನಾ (ಪಿಟಿಐ): ಮೂವರು ಶಾಸಕರನ್ನು ಹೊರತುಪಡಿಸಿ ಬಿಹಾರದ ಕಾಂಗ್ರೆಸ್‌ನ ಎಲ್ಲ ಶಾಸಕರನ್ನು ಭಾನುವಾರ ಹೈದರಾಬಾದ್‌ಗೆ ಕರೆದೊಯ್ಯಲಾಗಿದೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಖರೀದಿ ಮಾಡಬಹುದು ಎಂಬ ಭಯದಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ. ‘ಕಾಂಗ್ರೆಸ್ ಶಾಸಕರು ಪಕ್ಷ ತೊರೆಯುತ್ತಾರೆ ಎಂಬ ವದಂತಿ ಹರಡಿದೆ. ಆದರೆ, ಮತದಾರು ಕೋಪಗೊಂಡಿರುವುದರಿಂದ ಜೆಡಿಯು ಶಾಸಕರೇ ಒತ್ತಡಕ್ಕೆ ಒಳಗಾಗಿದ್ದಾರೆ’ ಎಂದು ಬಿಹಾರದ ಕಾಂಗ್ರೆಸ್ ಉಸ್ತುವಾರಿ ಮೋಹನ್ ಪ್ರಕಾಶ್ ತಿಳಿಸಿದರು.

ಬಿಹಾರದ ಕಾಂಗ್ರೆಸ್ ಮುಖಂಡರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ರಾಜಕೀಯ ಬೆಳವಣಿಗೆಗಳ ಕುರಿತು ಮಾತುಕತೆ ನಡೆಸಿದ್ದಾರೆ. ಬಿಹಾರದಲ್ಲಿ ಕಾಂಗ್ರೆಸ್‌ನ 19 ಶಾಸಕರಿದ್ದಾರೆ.

ಜಾರ್ಖಂಡ್‌ನಲ್ಲಿ ನ್ಯಾಯಯಾತ್ರೆ ರೋಡ್ ಶೋ • ರಾಹುಲ್ ಗಾಂಧಿ ಭರವಸೆ

‘ಬುಡಕಟ್ಟು ಜನರ ಹಕ್ಕುಗಳಿಗಾಗಿ ಹೋರಾಟ’

ಧನ್‌ಬಾದ್/ಬೊಕಾರೊ, ಜಾರ್ಖಂಡ್ (ಪಿಟಿಐ): ’ನೀರು, ಅರಣ್ಯ, ಭೂಮಿ ಹಕ್ಕು ಕುರಿತು ಕಾಂಗ್ರೆಸ್ ಪಕ್ಷ ಎಂದಿಗೂ ಬುಡಕಟ್ಟು ಜನರ ಹಕ್ಕುಗಳಿಗೆ ಹೋರಾಟ ನಡೆಸಲಿದೆ‘ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ಜಾರ್ಖಂಡ್‌ನಲ್ಲಿ ‘ಭಾರತ್ ಜೋಡೊ ನ್ಯಾಯಯಾತ್ರೆ’ಯ ಮೂರನೇ ದಿನವಾದ ಭಾನುವಾರ ರಾಜ್ಯದ ಧನ್‌ಬಾದ್ ಜಿಲ್ಲೆಯಲ್ಲಿ ನಡೆದ ‘ರೋಡ್ ಶೋ’ನಲ್ಲಿ ಅವರು ಮಾತನಾಡಿದರು.

’ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದನ್ನು ತಡೆಯುವುದು ಹಾಗೂ ಈ ಮೂಲಕ ದೇಶದ ನಿರುದ್ಯೋಗಿ ಯುವಜನರು, ಬುಡಕಟ್ಟು ಸಮುದಾಯದವರಿಗೆ ನ್ಯಾಯ ಒದಗಿಸುವುದೇ ಈ ನ್ಯಾಯಯಾತ್ರೆಯ ಉದ್ದೇಶ‘ ಎಂದರು.

’ಆರ್ಥಿಕ ಅಸಮತೋಲನ, ಅಧಿಕ ಮೌಲ್ಯದ ನೋಟುಗಳ ರದ್ದತಿ ಕ್ರಮ, ಜಿಎಸ್‌ಟಿ ಮತ್ತು ನಿರುದ್ಯೋಗ ಸಮಸ್ಯೆಗಳು ದೇಶದ ಯುವಜನರ ಬದುಕನ್ನು ಹಾಳುಗೆಡವಿವೆ’ ಎಂದು ರಾಹುಲ್ ಅವರು ವ್ಯಾಖ್ಯಾನಿಸಿದರು.



ಜಾರ್ಖಂಡ್‌ನ ಬೊಕಾರೊದಲ್ಲಿ ನಡೆದ ‘ಭಾರತ್ ಜೋಡೊ ನ್ಯಾಯಯಾತ್ರೆ’ ಸಂದರ್ಭದಲ್ಲಿ ಬೆಂಬಲಿಗರ ಜೊತೆ ರಾಹುಲ್‌ಗಾಂಧಿ –ಪಿಟಿಐ ಚಿತ್ರ

ರಾಹುಲ್ ವಿರುದ್ಧ ಆನಿ ರಾಜಾ ಕಣಕ್ಕೆ?: (ತಿರುವನಂತಪುರ ವರದಿ) ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಆನಿ ರಾಜಾ ಅವರನ್ನು ಕಣಕ್ಕಿಳಿಸಲು ಸಿಪಿಐ ಚಿಂತನೆ ನಡೆಸಿದೆ.

ಆನಿ ಅವರು ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರ ಪತ್ನಿ.

‘ಮೈತ್ರಿಪಕ್ಷಗಳು ಯಾತ್ರೆಯಲ್ಲಿ ಭಾಗಿ’

ರಾಹುಲ್‌ಗಾಂಧಿ ನೇತೃತ್ವದ ‘ಭಾರತ್ ಜೋಡೊ ನ್ಯಾಯಯಾತ್ರೆ’ಯು ಉತ್ತರ ಪ್ರದೇಶದಲ್ಲಿ ಸಾಗುವಾಗ ಅದರಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಾಯಕರೂ ಭಾಗಿಯಾಗುವರು ಎಂದು ಕಾಂಗ್ರೆಸ್ ಪಕ್ಷ ಭಾನುವಾರ ತಿಳಿಸಿದೆ.

ರಾಜ್ಯದಲ್ಲಿ ನ್ಯಾಯಯಾತ್ರೆ ಕಾರ್ಯಕ್ರಮಗಳ ವಿವರ ಅಂತಿಮಗೊಂಡಂತೆ ಮೈತ್ರಿಪಕ್ಷಗಳಿಗೆ ಕಳುಹಿಸಲಾಗುವುದು. ಅವುಗಳ ಭಾಗವಹಿಸುವಿಕೆ ಮೈತ್ರಿಯನ್ನು ಬಲಪಡಿಸಲಿದೆ ಎಂದು ಪಕ್ಷ ಅಭಿಪ್ರಾಯಪಟ್ಟಿದೆ.

ಕೇಂದ್ರದ ಹಸ್ತಕ್ಷೇಪ: ಖರ್ಗೆ ಟೀಕೆ

ತ್ರಿಶ್ಯೂರ್, ಕೇರಳ (ಪಿಟಿಐ): ರಾಜ್ಯಗಳ ಆಡಳಿತದಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪವು ಒಕ್ಕೂಟ ವ್ಯವಸ್ಥೆಯನ್ನು ಶಿಥಿಲಗೊಳಿಸುವುದಲ್ಲದೆ, ರಾಜ್ಯಗಳ ರಾಜಕೀಯ ಸ್ವಾಯತತ್ತೆಯನ್ನು ದುರ್ಬಲಗೊಳಿಸುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜನ ಖರ್ಗೆ ಟೀಕಿಸಿದ್ದಾರೆ.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಮಾತನಾಡುತ್ತಾ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದ ಅವರು, ‘ಮೋದಿ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಕಿರುಕುಳ ನೀಡುತ್ತಿರುವುದು ಮಾತ್ರವಲ್ಲದೆ, ಬಡವರು ಮತ್ತು ಮಹಿಳೆಯರನ್ನು ಹತ್ತಿಕ್ಕುತ್ತಿದೆ’ ಎಂದರು.



ಹಿಮಪಾತ

ಜಮ್ಮುವಿನ ಪಟ್ನಿಟಾಪ್‌ಗೆ ಭಾನುವಾರ ಭೇಟಿ ನೀಡಿದ್ದ ಪ್ರವಾಸಿಗರು ಸುರಿಯುತ್ತಿದ್ದ ಹಿಮದ ನಡುವೆಯೇ ಸಂಭ್ರಮಿಸಿದರು. ಭಾರಿ ಹಿಮಪಾತದ ಪರಿಣಾಮವಾಗಿ ಕಾಶ್ಮೀರದಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಶ್ರೀನಗರ – ಜಮ್ಮು ನಡುವಿನ ಹೆದ್ದಾರಿಯಲ್ಲಿ ಮೂರನೇ ದಿನವಾದ ಭಾನುವಾರವೂ ವಾಹನ ಸಂಚಾರ ಸ್ಥಗಿತಗೊಂಡಿತ್ತು –ಪಿಟಿಐ ಚಿತ್ರ

ಪರೀಕ್ಷಾ ಅಕ್ರಮಕ್ಕೆ ಜೈಲು; ಭಾರಿ ದಂಡ

ಮಸೂದೆ ಮಂಡನೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರಿ ಹುದ್ದೆಗಳಿಗೆ ನಡೆಯುವ ನೇಮಕಾತಿ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ಸೇರಿ ಪರೀಕ್ಷಾ ಅಕ್ರಮ ಪ್ರಕರಣಗಳಲ್ಲಿ ಗರಿಷ್ಠ 10 ವರ್ಷ ಸಜೆ ಮತ್ತು ಕನಿಷ್ಠ ₹ 1 ಕೋಟಿ ದಂಡವಿಧಿಸಲು ಅವಕಾಶವಿರುವಂತೆ ಕಾಯ್ದೆ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಈ ಕುರಿತ ಮಸೂದೆ ಸೋಮವಾರ ಲೋಕಸಭೆಯಲ್ಲಿ ಮಂಡನೆಯಾಗಲಿದೆ. ಸಿಬ್ಬಂದಿ ಮತ್ತು ಆಡಳಿತದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಮಸೂದೆ ಮಂಡಿಸುವರು. ‘ಸಾರ್ವಜನಿಕ ಪರೀಕ್ಷೆ (ಅಕ್ರಮಗಳ ತಡೆ) ಮಸೂದೆ 2024’ಯಲ್ಲಿ 20 ಪರೀಕ್ಷಾಅಕ್ರಮಗಳನ್ನು ಉಲ್ಲೇಖಿಸಿದೆ.

ನಕಲಿ ಅಭ್ಯರ್ಥಿಗಳ ಹಾಜರಿ, ಉತ್ತರ ಪತ್ರಿಕೆಗಳ ನಕಲು, ದಾಖಲೆಗಳನ್ನು ತಿರುಚುವುದು, ಮೆರಿಟ್ ಪಟ್ಟಿ ಸಿದ್ಧಪಡಿಸುವಲ್ಲಿ ಅಕ್ರಮ ಎಸಗುವುದು, ಉದ್ದೇಶಪೂರ್ವಕವಾಗಿ ಭದ್ರತಾ ವ್ಯವಸ್ಥೆ ಉಲ್ಲಂಘನೆ, ಪರೀಕ್ಷಾರ್ಥಿಗಳಿಗೆ ಸೀಟು ನಿಗದಿಪಡಿಸುವಲ್ಲಿ ಅಕ್ರಮ ಎಸಗುವುದು, ಉದ್ದೇಶಪೂರ್ವಕವಾಗಿನಿಯಮಗಳನ್ನು ಉಲ್ಲಂಘಿಸುವ ಕ್ರಮವನ್ನು ಪರೀಕ್ಷಾ ಅಕ್ರಮಗಳೆಂದು ಹೊಸ ಮಸೂದೆಯಡಿ ಪರಿಗಣಿಸಲಾಗುತ್ತದೆ.

ತಪ್ಪಿತಸ್ಥರು ಸಂಘಟಿತ ಅಪರಾಧಗಳಲ್ಲಿ ತೊಡಗಿರುವುದು ದೃಢಪಟ್ಟಲ್ಲಿ ಕನಿಷ್ಠ 5 ರಿಂದ 10 ವರ್ಷ ಸಜೆ, ₹ 1 ಕೋಟಿ ಮೀರದಂತೆ ದಂಡ ವಿಧಿಸಲು ಅವಕಾಶವಿದೆ. ಶಿಕ್ಷಣ ಸಂಸ್ಥೆಗಳೇ ಅಕ್ರಮಗಳಲ್ಲಿ ತೊಡಗಿದ್ದರೆ ಆಸ್ತಿಯ ಜಪ್ತಿ ಜೊತೆಗೆ, ಪರೀಕ್ಷಾ ವೆಚ್ಚ ವಸೂಲಿಗೂ ಕ್ರಮ ಕೈಗೊಳ್ಳಲಾಗುತ್ತದೆ. ಸಂಘಟಿತ ಅಪರಾಧದ ಪಾತ್ರ ಇಲ್ಲದಿದ್ದರೆ, 3 ರಿಂದ 5 ವರ್ಷ ಸಜೆ ಹಾಗೂ ₹ 10 ಲಕ್ಷವರೆಗೂ ದಂಡ ವಿಧಿಸಲು ಅವಕಾಶವಿದೆ.

ನೇಮಕಾತಿ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಸೋರಿಕೆ ಪ್ರಕರಣಗಳ ವಿರುದ್ಧ ಇತ್ತೀಚೆಗೆ ರಾಜಸ್ಥಾನ, ಗುಜರಾತ್, ತೆಲಂಗಾಣ, ಮಧ್ಯಪ್ರದೇಶ ರಾಜ್ಯಗಳಲ್ಲಿ ಉದ್ಯೋಗಾಕಾಂಕ್ಷಿ ಪರೀಕ್ಷಾರ್ಥಿಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು.

ಲೋಕಸಭೆಯ ಕಲಾಪ ಸಲಹಾ ಸಮಿತಿಯು (ಬಿಎಸಿ), ಈ ಮಸೂದೆಗೆ ಈ ಅಧಿವೇಶನದಲ್ಲಿಯೇ ಅಂಗೀಕಾರ ಸಿಗುವುದು ಅಗತ್ಯ. ಸಿಗದಿದ್ದರೆ ಪ್ರಸಕ್ತ ಲೋಕಸಭೆಯ ಅವಧಿಯೇ ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ, ನಂತರ ಮಸೂದೆ ರದ್ದುಗೊಳ್ಳಲಿದೆ ಎಂದು ಅಭಿಪ್ರಾಯಪಟ್ಟಿದೆ.

ಸೌತ್ ಕೆರೊಲಿನಾ: ಬೈಡನ್‌ಗೆ ಗೆಲುವು

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಆಯ್ಕೆ ಸಂಬಂಧ ಸೌತ್ ಕೆರೊಲಿನಾದಲ್ಲಿ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಜೋ ಬೈಡನ್ ಗೆಲುವು ಪಡೆದಿದ್ದಾರೆ. ಈ ಮೂಲಕ ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಮುಂದಿಟ್ಟಿದ್ದಾರೆ.

ಆಡಳಿತಾರೂಢ ಡೆಮಾಕ್ರಟಿಕ್ ಪಕ್ಷವು, ಅಭ್ಯರ್ಥಿಯ ಆಯ್ಕೆಗಾಗಿ ನಡೆಸಿದ ಮೊದಲ ಚುನಾವಣೆ ಇದು. ನವೆಂಬರ್‌ನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಮರು ಆಯ್ಕೆ ಬಯಸಿರುವ 81 ವರ್ಷದ ಬೈಡನ್, ಶನಿವಾರ ನಡೆದ ಚುನಾವಣೆಯಲ್ಲಿ ಶೇ 96.2 ಮತಗಳನ್ನು ಪಡೆದರು. ಅವರ ಎದುರಾಳಿ ಮರಿಯಾನ್ ವಿಲಿಯಮ್ಸನ್ ಕೇವಲ ಶೇ 2.1 ಮತಗಳನ್ನು ಗಳಿಸಿದರು.

ಬೈಡನ್ ಅವರ ವಯಸ್ಸು ಹಾಗೂ ಯುವ ಮತದಾರರನ್ನು ಸೆಳೆಯುವಲ್ಲಿ ಅವರು ಹೊಂದಿರುವ ಸಾಮರ್ಥ್ಯವು ಪಕ್ಷದೊಳಗೆ ಚರ್ಚೆಯ ವಿಷಯವಾಗಿದೆ. ಆದರೂ ಅವರಿಗೆ ತಕ್ಕ ಪೈಪೋಟಿ ಒಡ್ಡಬಲ್ಲ ಇನ್ನೊಬ್ಬ ಅಭ್ಯರ್ಥಿ ಪಕ್ಷದೊಳಗೆ ಬೆಳೆದು ಬಂದಿಲ್ಲ ಎಂದು ವಿಶ್ಲೇಷಿಸಲಾಗಿದೆ.

ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಆಯ್ಕೆ ಸಂಬಂಧ ಸೌತ್ ಕರೊಲಿನಾದಲ್ಲಿ ಫೆಬ್ರುವರಿ 24 ರಂದು ಚುನಾವಣೆ ನಡೆಯಲಿದೆ. ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗೆಲ್ಲುವ ನೆಚ್ಚಿನ ಅಭ್ಯರ್ಥಿ ಎನಿಸಿದ್ದಾರೆ. ಕೆಲ ದಿನಗಳ ಹಿಂದೆ ನ್ಯೂ ಹ್ಯಾಂಪ್‌ಶೈರ್‌ನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಟ್ರಂಪ್ ಅವರು ಭಾರತೀಯ ಮೂಲದ ರಾಜಕಾರಣಿ ನಿಕ್ಕಿ ಹ್ಯಾಲೆ ಅವರನ್ನು ಸೋಲಿಸಿದ್ದರು.

ಐಯುಎಂಎಲ್ ಅಧ್ಯಕ್ಷರ ಹೇಳಿಕೆ: ವಿವಾದ

ಮಲಪ್ಪುರ (ಪಿಟಿಐ): ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ರಾಜ್ಯಾಧ್ಯಕ್ಷ ಪಾಣಕ್ಕಾಡ್ ಸಯ್ಯಿದ್ ಸಾದಿಕ್ ಅಲಿ ಶಿಹಾಬ್ ತಂಗಳ್ ಅವರು ಅಯೋಧ್ಯೆ ರಾಮಮಂದಿರ ಕುರಿತು ನೀಡಿದ ಹೇಳಿಕೆ ಕೇರಳದಲ್ಲಿ ವಿವಾದಕ್ಕೆ ಕಾರಣವಾಗಿದೆ.

‘ದೇಶದಲ್ಲಿ ಬಹುಸಂಖ್ಯಾತರ ಕನಸು ಆಗಿದ್ದ ರಾಮಮಂದಿರ ನಿರ್ಮಾಣ ಆಗಿದೆ. ಈ ವಾಸ್ತವವನ್ನು ಒಪ್ಪಿಕೊಳ್ಳಬೇಕೇ ಹೊರತು, ಅದರ ವಿರುದ್ಧ ಪ್ರತಿಭಟನೆ ನಡೆಸುವ ಅಗತ್ಯವಿಲ್ಲ. ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದಲ್ಲಿ ಮಂದಿರ ನಿರ್ಮಾಣ ಆಗಿದೆ. ರಾಮಮಂದಿರ ಮತ್ತು ಮುಂದೆ ನಿರ್ಮಾಣಗೊಳ್ಳಲಿರುವ ಬಾಬರಿ ಮಸೀದಿಯು ಭಾರತದಲ್ಲಿ ಜಾತ್ಯತೀತತೆಯನ್ನು ಬಲಪಡಿಸುವ ಎರಡು ಅತ್ಯುತ್ತಮ ಉದಾಹರಣೆ ಆಗಿವೆ’ ಎಂದು ಶಿಹಾಬ್ ತಂಗಳ್ ಹೇಳಿದ್ದರು.

ಜನವರಿ 24ರಂದು ಮಂಜೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಆಡಿದ್ದ ಮಾತುಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಅವರ ಹೇಳಿಕೆಯನ್ನು ಆಡಳಿತಾರೂಢ ಎಲ್‌ಡಿಎಫ್ ಮೈತ್ರಿಕೂಟದ ಐಎನ್‌ಎಲ್ ಟೀಕಿಸಿದೆ.

‘ಗಾಂಧೀಜಿ ಕಂಡಿದ್ದ ರಾಮರಾಜ್ಯವು ಆರ್‌ಎಸ್‌ಎಸ್‌ನ ರಾಮರಾಜ್ಯಕ್ಕಿಂತ ಭಿನ್ನವಾಗಿದೆ. ಇದು ರಾಜಕೀಯ ನಾಯಕರಿಗೆ ಗೊತ್ತಿಲ್ಲದೇ ಇರುವ ವಿಚಾರವಲ್ಲ. ಐಯುಎಂಎಲ್‌ನ ಸಾಮಾನ್ಯ ಕಾರ್ಯಕರ್ತರು ಈ ಹೇಳಿಕೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ಐಎನ್‌ಎಲ್‌ನ ಮುಖಂಡ ಎನ್. ಕೆ.ಅಬ್ದುಲ್ ಅಜೀಜ್ ಹೇಳಿದ್ದಾರೆ.

ಹಿಂದೂ ಧರ್ಮಕ್ಕೆ ಸ್ವಾಗತ: ಟಿಟಿಡಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ‘ಹಿಂದೂ ಧರ್ಮ ಪಾಲಿಸಲು ಸ್ವಇಚ್ಛೆಯಿಂದ ಮುಂದೆ ಬರುವ ಅನ್ಯಧರ್ಮೀಯರನ್ನು ನಾವು ಸ್ವಾಗತಿಸುತ್ತೇವೆ’ ಎಂದು ತಿರುಮಲ ತಿರುಪತಿ ದೇವಸ್ಥಾನಮ್ (ಟಿಟಿಡಿ) ಭಾನುವಾರ ಹೇಳಿದೆ. ಅಲ್ಲದೇ, ಹಿಂದೂ ಧರ್ಮಕ್ಕೆ ಅವರು ಹೊಂದಿಕೊಳ್ಳುವಂತೆ ಮಾಡಲು ಸೂಕ್ತ ವ್ಯವಸ್ಥೆಯನ್ನೂ ತಿರುಮಲದಲ್ಲಿ ರೂಪಿಸಲಾಗುತ್ತದೆ ಎಂದು ತಿಳಿಸಿದೆ.

ಇಲ್ಲಿ ನಡೆಯುತ್ತಿರುವ ಹಿಂದೂ ಧಾರ್ಮಿಕ ಸಮಾವೇಶ ‘ಧಾರ್ಮಿಕ ಸದಸ್’ನ ಎರಡನೇ ದಿನವಾದ ಭಾನುವಾರ ಟಿಟಿಡಿ ಈ ವಿಷಯ ತಿಳಿಸಿದೆ.

ಬೇರೆ ಧರ್ಮಗಳಿಗೆ ಮತಾಂತರ ಆಗಿರುವ ಹಿಂದೂಗಳನ್ನು ‘ಘರ್ ವಾಪಸಿ’ ಮಾಡಬೇಕು ಎಂದು ಮಠಾಧಿಪತಿಯೊಬ್ಬರು ಆಗ್ರಹಿಸಿದರೆ, ಮತಾಂತರ ತಡೆಯಲು ವ್ಯವಸ್ಥೆ ರೂಪಿಸಬೇಕು ಎಂದು ಟಿಟಿಡಿಯನ್ನು ಮತ್ತೊಬ್ಬರು ಒತ್ತಾಯಿಸಿದರು.

ಹಿಂದೂ ಧರ್ಮವನ್ನು ಹೆಚ್ಚು ಜನರತ್ತ ಮತ್ತು ತಳವರ್ಗಗಳತ್ತ ಕೊಂಡೊಯ್ಯಬೇಕು. ಧರ್ಮದ ವಿವಿಧ ಪಂಥಗಳಲ್ಲಿ ಒಗ್ಗಟ್ಟು ಮೂಡಿಸಬೇಕು ಎಂಬ ವಿಷಯಗಳು ಮುಖ್ಯವಾಗಿ ಚರ್ಚೆಗೆ ಒಳಗಾದವು.

‘ಹಿಂದೂ ಸನಾತನ ಧರ್ಮವು ಜಗತ್ತಿನಲ್ಲೇ ಅತ್ಯಂತ ಹಳೆಯ ಧಾರ್ಮಿಕ ನಂಬಿಕೆಯಾಗಿದೆ. ಹಿಂದೂ ಸನಾತನ ಧರ್ಮವನ್ನು ರಕ್ಷಿಸುವ ಮತ್ತು ಪ್ರಚುರ ಪಡಿಸುವ ನಮ್ಮ ಪ್ರಮುಖ ಉದ್ದೇಶದ ಭಾಗವಾಗಿ, ಹಿಂದೂ ಜೀವನ ಕ್ರಮ ಅಳವಡಿಸಿಕೊಳ್ಳಲು ಬಯಸುವ ಅನ್ಯಧರ್ಮೀಯರಿಗೆ ಸಂಪ್ರದಾಯಗಳು ಮತ್ತು ಧಾರ್ಮಿಕ ವಿಷಯಗಳ ಕುರಿತು ತರಬೇತಿ ನೀಡುತ್ತೇವೆ’ ಎಂದು ಟಿಟಿಡಿ ಮುಖ್ಯಸ್ಥ ಭೂಮನ ಕರುಣಾಕರ ರೆಡ್ಡಿ ಹೇಳಿದರು.

‘ನಾನೂ ಜನಾಂಗೀಯ ಭೇದ ಅನುಭವಿಸಿದ್ದೇನೆ’

ಲಂಡನ್ (ಪಿಟಿಐ): ‘ನಾನು ಬಾಲ್ಯದಲ್ಲಿಯೇ ಜನಾಂಗೀಯ ಭೇದವನ್ನು ಅನುಭವಿಸಿದ್ದೇನೆ’ ಎಂದಿರುವ ಬ್ರಿಟನ್‌ನ ಭಾರತೀಯ ಮೂಲದ ಪ್ರಧಾನಿ ರಿಷಿ ಸುನಕ್ ಅವರು, ‘ನನ್ನ ಉಚ್ಚಾರಣೆ, ಹಾವ ಭಾವ ಸರಿ ಹೊಂದುವಂತೆ ಮಾಡಲು ಪೋಷಕರು ನನಗೆ ನಾಟಕದ ವಿಶೇಷ ತರಬೇತಿ ಕೊಡಿಸಿದರು’ ಎಂದಿದ್ದಾರೆ.

‘ಹೇಗೆ ಹೊಂದಿಕೊಳ್ಳಬೇಕು, ಹೇಗೆ ಮಾತನಾಡಬೇಕು ಎಂಬುದನ್ನು ಕಲಿಯಲು ನಾನು ಹೆಚ್ಚುವರಿ ತರಗತಿಗಳಿಗೆ ಹೋಗಬೇಕಾಯಿತು’ ಎಂದು ಅವರು ಸುದ್ದಿವಾಹಿನಿಗೆ ತಿಳಿಸಿದ್ದಾರೆ.

‘ನನ್ನಂತೆ ನನ್ನ ಒಡಹುಟ್ಟಿದವರೂ ಜನಾಂಗೀಯ ಭೇದ ಅನುಭವಿಸಿದ್ದಾರೆ. ಇದು ಬಹಳ ನೋವುಂಟು ಮಾಡುತ್ತದೆ’ ಎಂದು ಅವರು ಬೇಸರದಿಂದ ಹೇಳಿದ್ದಾರೆ. ‘ನಾನು ಅನುಭವಿಸಿದ್ದನ್ನು ನನ್ನ ಮಕ್ಕಳು ಈಗ ಅನುಭವಿಸುತ್ತಿಲ್ಲ ಅನಿಸುತ್ತದೆ’ ಎಂದು ತಿಳಿಸಿದ್ದಾರೆ.

‘ಯಾವುದೇ ರೀತಿಯ ಜನಾಂಗೀಯ ಭೇದ ಸರಳವಾಗಿ ಸ್ವೀಕಾರಾರ್ಹವಲ್ಲ’ ಎಂದ ಅವರು, ತಾನು ಪ್ರಧಾನಿಯಾಗಬಹುದು ಎಂದು ಕನಸಿನಲ್ಲೂ ಯೋಚಿಸಿರಲಿಲ್ಲ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಜೆಪಿ ಲೆಕ್ಕಾಚಾರ ಬುಡಮೇಲು: ಅಖಿಲೇಶ್

ಲಖನೌ (ಪಿಟಿಐ): ‘ಉತ್ತರಪ್ರದೇಶದಲ್ಲಿ ಬಿಜೆಪಿಯ ಲೆಕ್ಕಾಚಾರಗಳು ಬುಡಮೇಲಾಗಿದ್ದು, ಶೇ 90ರಷ್ಟು ದಲಿತ, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಒಗ್ಗಟ್ಟಾಗಿ ನಮಗೆ ಮತ ನೀಡಲಿದ್ದಾರೆ ಎಂದು ಸಮೀಕ್ಷೆ ತಿಳಿಸಿವೆ‘ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಭಾನುವಾರ ತಿಳಿಸಿದರು.

ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತರನ್ನು ಅಖಿಲೇಶ್ ಯಾದವ್ ಅವರು ‘ಪಿಡಿಎ’ ಎಂದು ಕರೆದಿದ್ದಾರೆ.

ಬೆಜೆಪಿಯು ಅಭ್ಯರ್ಥಿಗಳ ಆಯ್ಕೆಯಲ್ಲಿ ತೀರಾ ಹಿಂದುಳಿದಿದೆ. ಸೋಲಲು ಬಯಸದ ಕಾರಣ ಯಾರೂ ಅಭ್ಯರ್ಥಿಯಾಗಲು ಮುಂದೆ ಬರುತ್ತಿಲ್ಲ ಎಂದು ಲೇವಡಿ ಮಾಡಿದರು.

’ಛಗನ್ ಭುಜಬಲ್ ರಾಜೀನಾಮೆ ಅಂಗೀಕರಿಸಿಲ್ಲ’

ಮುಂಬೈ/ಛತ್ರಪತಿ ಸಂಭಾಜಿನಗರ (ಪಿಟಿಐ): ಸಂಪುಟ ಸಚಿವ ಹಾಗೂ ಹಿಂದುಳಿದ ಸಮುದಾಯದ ಹಿರಿಯ ಮುಖಂಡ ಛಗನ್ ಭುಜಬಲ್ ಅವರ ರಾಜೀನಾಮೆ ಅಂಗೀಕಾರವಾಗಿಲ್ಲ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ.

ಈ ವಿಚಾರದ ಬಗ್ಗೆ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಮಾತ್ರ ಸ್ಪಷ್ಟನೆ ನೀಡಬಲ್ಲರು ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರ ಸರ್ಕಾರವು ಹಿಂದುಳಿದ ಸಮುದಾಯಗಳ ಮೀಸಲಾತಿ ಕೋಟಾದೊಳಗೆ ಮರಾಠಾ ಸಮುದಾಯಕ್ಕೆ ‘ಹಿಂಬಾಗಿಲ ಪ್ರವೇಶ’ಕ್ಕೆ ಅವಕಾಶ ನೀಡುತ್ತಿದೆ ಎಂದು ಆರೋಪಿಸಿದ್ದ ಭುಜಬಲ್, ಕಳೆದ ನವೆಂಬರ್ 16ರಂದು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

‘ತಾನು ಮರಾಠಾ ಮೀಸಲಾತಿಯ ವಿರೋಧಿಯಲ್ಲ. ಆದರೆ, ಅದಕ್ಕಾಗಿ ಒಬಿಸಿ ಮೀಸಲಾತಿ ವಿಭಜಿಸುವುದನ್ನು ವಿರೋಧಿಸುತ್ತೇನೆ’ ಎಂದು ಎನ್‌ಸಿಪಿಯ ಅಜಿತ್ ಪವಾರ್ ಬಣದ ಮುಖಂಡ ಭುಜಬಲ್ ಅವರು ತಿಳಿಸಿದ್ದರು.

‘ಭುಜಬಲ್‌ರಿಂದ ಫಡಣವೀಸ್, ಪವಾರ್‌ಗೆ ಹಾನಿ’: ಮಹಾರಾಷ್ಟ್ರದ ಸಚಿವ ಛಗನ್ ಭುಜಬಲ್ ಅವರು ತಮ್ಮ ಹೇಳಿಕೆಗಳಿಂದ ಉಪಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಹಾಗೂ ಅಜಿತ್ ಪವಾರ್ ಅವರಿಗೆ ಹಾನಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಮರಾಠಾ ಮೀಸಲಾತಿ ಹೋರಾಟಗಾರ ಮನೋಜ್ ಜಾರಂಗೆ ಅವರಿಗೆ ಭಾನುವಾರ ಹೇಳಿದ್ದಾರೆ.

ಉತ್ತರಾಖಂಡ: ಯುಸಿಸಿ ಕರಡು ಅನುಮೋದನೆ

ಡೆಹ್ರಾಡೂನ್ (ಪಿಟಿಐ): ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಅಂತಿಮ ಕರಡುಪ್ರತಿಗೆ ಉತ್ತರಾಖಂಡ ಸಚಿವ ಸಂಪುಟ ಅನುಮೋದನೆ ನೀಡಿದೆ. ಈಮೂಲಕ ಸೋಮವಾರ ಆರಂಭ ಆಗುವ ವಿಧಾನಸಭೆಯ 4 ದಿನದ ವಿಶೇಷ ಅಧಿವೇಶನದಲ್ಲಿ ಮಂಡಿಸುವ ಹಾದಿ ಸುಗಮವಾಗಿದೆ.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರ ಅಧಿಕೃತ ನಿವಾಸದಲ್ಲಿ ನಡೆದ ಸಭೆಯಲ್ಲಿ ಯುಸಿಸಿ ಕರಡುಪ್ರತಿಗೆ ಅನುಮೋದನೆ ನೀಡಲಾಯಿತು.

ಜೈಪುರ ಲಿಟ್ ಫೆಸ್ಟಿವಲ್‌ನಲ್ಲಿ ಸುಧಾಮೂರ್ತಿ, ಪೆರುಮಾಳ್, ನೀಲಾಂಜನ ರಾಯ್

ಮಹಿಳೆಯರೇ ಹೆಚ್ಚು ಸಮರ್ಥರು; ಶ್ಲಾಘನೆ

• ರಾಜಲಕ್ಷ್ಮಿ ಕೋಡಿಬೆಟ್ಟು

ಜೈಪುರ: ಜೈಪುರ ಲಿಟರೇಚರ್ ಫೆಸ್ಟಿವಲ್ ಭಾನುವಾರ ಮಳೆಯ ಆಗಮನದೊಂದಿಗೆ ಬಹಳ ಉತ್ಸಾಹದಿಂದ ಆರಂಭವಾಯಿತು. ಕಾರ್ಯಕ್ಷೇತ್ರದಲ್ಲಿ ಮಹಿಳೆಯ ಸಾಮರ್ಥ್ಯ ಅನಾವರಣದ ಕುರಿತು ಬಹುತೇಕ ಏಕರೂಪಿ ನಿಲುವುಗಳು ಮೂರು ಪ್ರಮುಖ ಗೋಷ್ಠಿಗಳಲ್ಲಿ ವ್ಯಕ್ತವಾದವು.

ಕನ್ನಡದ ಲೇಖಕಿ ಸುಧಾಮೂರ್ತಿ ಅವರ ಲವಲವಿಕೆಯ ಮಾತುಗಳನ್ನು ಕೇಳಲು ಸಭಾಂಗಣ ಕಿಕ್ಕಿರಿದು ತುಂಬಿತ್ತು. ‘ಪುರುಷರು ಯಾವಾಗಲೂ ತಾವೇ ಮೇಲೆ ಎಂದ ಭಾವಿಸುತ್ತಾರೆ ಮತ್ತು ಮಹಿಳೆಯರು ಅದನ್ನು ಒಪ್ಪಿದಂತೆ ನಟಿಸುತ್ತಾರೆ. ವಾಸ್ತವವಾಗಿ ಅವರಿಗಿಂತ ಹೆಚ್ಚಿನ ಶಕ್ತಿ ಸಾಮರ್ಥ್ಯವನ್ನು ಮಹಿಳೆಯರು ಹೊಂದಿದ್ದಾರೆ. ಹೆರುವ ನೋವು ಅನುಭವಿಸಿ, ತವರಿನಲ್ಲಿಯೂ ಗಂಡ ಮನೆಯಲ್ಲಿಯೂ ಸಂಬಂಧಗಳನ್ನು ನಾಜೂಕಾಗಿ ನಿಭಾಯಿಸುತ್ತ ಜೀವನ ಸಾಗಿಸುತ್ತಾರೆ. ಅವರು ನಿಜಕ್ಕೂ ಉತ್ತಮ ಸಂವಹನ ಕಾರರಾಗಿರುತ್ತಾರೆ. ಆದ್ದರಿಂದ, ಮಹಿಳೆಯರು ತಮ್ಮೊಳಗಿರುವ ಸಾಮರ್ಥ್ಯವನ್ನು ಪ್ರಕಟಪಡಿಸಲು ಯಾವತ್ತೂ ಹಿಂಜರಿಯಬಾರದು‘ ಎಂದರು. ಅವರು ಹೇಳಿದ ಕಿವಿ ಮಾತುಗಳಿಗೆ ಪುರುಷ ಮಹಿಳೆಯರ ಭೇದವಿಲ್ಲದೆ ಚಪ್ಪಾಳೆಯ ಸುರಿಮಳೆ. ನನ್ನ ಪುಸ್ತಕದಲ್ಲಿಯೂ ತಾವು ಸಾಮಾನ್ಯರೆಂದು ಬಗೆದು ತಮ್ಮ ಬದುಕನ್ನು ಸವೆಸಿದ ಅನೇಕ ಮಹಿಳೆಯರ ಕಥೆಗಳೇ ನನ್ನ ಪುಸ್ತಕದಲ್ಲಿಯೂ ಇದೆ. ಅವರಿಗೆ ಪ್ರಶಸ್ತಿ ಫಲಕಗಳು ಬಂದಿಲ್ಲ. ಆದರೆ ಅವರ ಬದುಕು ಅನುಭವ ಶ್ರೀಮಂತವಾದುದು. ಅಂತಹ ಮಹಿಳಾ ರತ್ನಗಳ ಕಥೆಯನ್ನು ಪೋಣಿಸುವ ದಾರವಷ್ಟೇ ನಾನಾಗಿದ್ದೇನೆ.



ಜೈಪುರ ಲಿಟರೇಚರ್ ಫೆಸ್ಟಿವಲ್‌ನಲ್ಲಿ ಭಾನುವಾರ ಲೇಖಕಿ ಸುಧಾಮೂರ್ತಿ ಮಾತನಾಡಿದರು.

‘ನೀವು ಯಾವ ಪ್ರಶ್ನೆಯನ್ನಾದರೂ ಕೇಳಿ, ಅಳಿಯ ಮತ್ತು ರಾಜಕೀಯದ ವಿಚಾರವನ್ನು ಪ್ರಶ್ನೋತ್ತರದಿಂದ ಹೊರಗಿಟ್ಟುಬಿಡಿ’ ಎಂದು ಲಕ್ಷ್ಮಣ ರೇಖೆ ಎಳೆದರು.

ಮದುವೆ ಸೇರಿದಂತೆ ಎಲ್ಲ ಸಂಬಂಧಗಳ ಮುಖ್ಯ ಸೂತ್ರ ತಾಳ್ಮೆ. ಗಂಡ ಮತ್ತು ಹೆಂಡತಿಯ ವ್ಯಕ್ತಿತ್ವಗಳು ಬೇರೆ ಬೇರೆಯೇ ಆಗಿರುತ್ತದೆ. ಅದನ್ನು ಪರಸ್ಪರರು ಗೌರವಿಸಿಕೊಳ್ಳಬೇಕು. ಇವರಂತೆ ಅವರಾಗಬೇಕು, ಅವರಂತೆ ಇವರಾಗಬೇಕು ಎಂಬ ನಿರೀಕ್ಷೆಯಿದ್ದಾಗ ಜಗಳ ಸೃಷ್ಟಿಯಾಗುತ್ತದೆ ಎಂದು ಹೇಳಿದರು.

ಪರಿಸ್ಥಿತಿ ಅಷ್ಟೇನೂ ಸುಂದರವಾಗಿಲ್ಲ

‘ಬ್ಲಾಕ್ ರಿವರ್‘ ಕೃತಿಯ ಲೇಖಕಿ, ನೀಲಾಂಜನ ಎಸ್.ರಾಯ್ ಮಾತನಾಡಿ, ’ಇಂದಿನ ವೃತ್ತಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಕ್ಷೇಮಭಾವ ಬಹಳ ದುರ್ಬಲವಾಗಿದೆ ಎಂದು ಅನೇಕರಿಗೆ ಅನಿಸುತ್ತಿದೆ. ಆದರೆ ಯಾವಾಗ ಅಂತರಂಗದ ಶಕ್ತಿಯನ್ನು ವಿನಿಯೋಗಿಸಿ ಮಹಿಳೆ ತಾನಾಗಿಯೇ ಮುನ್ನುಗ್ಗುತ್ತಾಳೋ, ಆಗ ಒಂದಲ್ಲ ಒಂದೆಡೆಯಿಂದ ದಾರಿಯು ತೆರೆದುಕೊಳ್ಳುತ್ತದೆ. ಹೌದು, ಇಂದಿನ ದಿನದಲ್ಲಿ ಮೇಲ್ನೋಟಕ್ಕೆ ಎಲ್ಲವೂ ಸುಲಭವಾಗಿದೆ ಎಂದು ಅನಿಸಿದರೂ, ನಾವು ಮುಂದುವರೆದಂತೆ ಪರಿಸ್ಥಿತಿ ಅಷ್ಟೇನೂ ಸರಳವಾಗಿಲ್ಲ. ನಮ್ಮ ಹಿರಿಯ ತಲೆಮಾರಿನ ಮಹಿಳೆಯರು ಹೇಗೆ ಮುನ್ನುಗ್ಗಿ ಬದುಕು ಕಟ್ಟಿಕೊಳ್ಳಬೇಕಾದ ಸವಾಲು ಎದುರಿಸಿದ್ದರೋ, ನಾವೂ ಅಂತಹುದೇ ಸವಾಲು ಎದುರಿಸುತ್ತಿದ್ದೇವೆ. ನಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿ ಮುಂದುವರೆಯುವ ಇಚ್ಛೆ ನಮ್ಮಲ್ಲಿರಬೇಕು‘ ಎಂದು ಹೇಳಿದರು.

ಅಮ್ಮನೇ ಸ್ಫೂರ್ತಿ

ಪ್ರಸಿದ್ಧ ಕಾದಂಬರಿಕಾರ ಪೆರುಮಾಳ್ ಮುರುಗನ್ ಅವರ ಗೋಷ್ಠಿಯಲ್ಲಿ, ‘ತಮ್ಮ ಕಾದಂಬರಿಯಲ್ಲಿ ಗಟ್ಟಿಗಿತ್ತಿ ಮಹಿಳೆಯರ ಪಾತ್ರಗಳು ಕಾಣಿಸಿಕೊಂಡಿದ್ದರೆ ಅದಕ್ಕೆ ಕಾರಣ ನನ್ನ ಅಮ್ಮ. ಕೃಷಿ ಕುಟುಂಬದಲ್ಲಿ ಮಹಿಳೆಯೇ ಕೇಂದ್ರ ಬಿಂದುವಾಗಿರುತ್ತಾಳೆ. ಅಡುಗೆ ಮತ್ತು ಕೃಷಿ ಕೆಲಸಗಳನ್ನು ಸುಲಲಿತವಾಗಿ ನಿರ್ವಹಿಸುತ್ತಿದ್ದ ಅಮ್ಮನ ಸಾಮರ್ಥ್ಯವನ್ನು ನಾನು ಅಚ್ಚರಿಯಿಂದ ಗಮನಿಸುತ್ತಿದ್ದೆ. ಕೃಷಿಕರ ಮನೆಯಲ್ಲಿ ಮಹಿಳೆ ಅಡುಗೆ ಮನೆಗೆ ಸೀಮಿತವಾಗಿರಲಿಲ್ಲ. ಆಕೆ ಅಡುಗೆಯನ್ನೂ, ಮನೆಯ ಆರ್ಥಿಕ ವ್ಯವಹಾರವನ್ನೂ ನೋಡಿಕೊಳ್ಳುತ್ತಿದ್ದ ನಾಯಕಿಯಾಗಿದ್ದಳು. ಆದರೆ ಈ ನೆಮ್ಮದಿಯ ಜೀವನ ಶೈಲಿಗೆ ವಲಸೆ ಎಂಬುದು ಕಂಟಕವಾಗಿ ಎದುರಾಯಿತು. ವಲಸೆ ನನ್ನನ್ನು ಬಹುವಾಗಿ ಕಾಡಿದ ವಿಷಯ ಎಂದು ಹೇಳಿದರು.

ರಣಜಿ ಟ್ರೋಫಿ ಕ್ರಿಕೆಟ್: ಕರ್ನಾಟಕಕ್ಕೆ ಮಣಿದ ರೈಲ್ವೇಸ್ ತಂಡ • ವೈಶಾಖ ಆಲ್‌ರೌಂಡ್ ಆಟ

ಪಾಂಡೆ ಆಟಕ್ಕೆ ಒಲಿದ ರೋಚಕ ಜಯ

ಸೂರತ್(ಪಿಟಿಐ): ತಮ್ಮ ಅನುಭವಕ್ಕೆ ತಕ್ಕ ಆಟವಾಡಿದ ಮನೀಷ್ ಪಾಂಡೆ ಕರ್ನಾಟಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಇಲ್ಲಿ ರೈಲ್ವೇಸ್ ವಿರುದ್ಧ ನಡೆದ ರಣಜಿ ಪಂದ್ಯದಲ್ಲಿ ಕರ್ನಾಟಕ 1 ವಿಕೆಟ್ ಅಂತರದ ರೋಚಕ ಜಯ ಸಾಧಿಸಿತು.

ಪಂದ್ಯದ ಮೂರನೇ ದಿನವಾದ ಭಾನುವಾರ ಗೆಲುವಿಗಾಗಿ 226 ರನ್‌ಗಳ ಬೆನ್ನಟ್ಟಿದ್ದ ಕರ್ನಾಟಕ ತಂಡವು 99 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಮನೀಷ್ (ಅಜೇಯ 67; 121ಎ, 4X6, 6X1) ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ಇದರಿಂದಾಗಿ ತಂಡವು 82.4 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 229 ರನ್ ಗಳಿಸಿ ಗೆದ್ದಿತು. ಇದರೊಂದಿಗೆ ಸಿ ಗುಂಪಿನಲ್ಲಿ ಒಟ್ಟು 21 ಅಂಕಗಳನ್ನು ಗಳಿಸಿದೆ.

ಲಾಲ್‌ಭಾಯಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯವು ಮನೀಷ್ ಪಾಂಡೆ ಮತ್ತು ರೈಲ್ವೆ ಸ್ಪಿನ್ನರ್ ಆಕಾಶ್ ಪಾಂಡೆಯ (94ಕ್ಕೆ5) ನಡುವಣ ಜಿದ್ದಾಜಿದ್ದಿಗೆ ವೇದಿಕೆಯಾಯಿತು. ಇದರಿಂದಾಗಿ ಪಂದ್ಯವು ಕುತೂಹಲ ಘಟ್ಟ ತಲುಪಿತ್ತು. ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುತ್ತಿದ್ದ ಪಿಚ್‌ನಲ್ಲಿ ಕರ್ನಾಟಕದ ಪಾಂಡೆ ಮೇಲುಗೈ ಸಾಧಿಸಿದರು. ಅವರಿಗೆ ಕೆಳಕ್ರಮಾಂಕದ ಬ್ಯಾಟರ್‌ಗಳೂ ಉತ್ತಮ ಜೊತೆ ನೀಡಿದರು.

ಮನೀಷ್ ಅವರೊಂದಿಗೆ 7ನೇ ವಿಕೆಟ್ ಜೊತೆಯಾಟದಲ್ಲಿ ಶರತ್ ಶ್ರೀನಿವಾಸ್ 34 ರನ್ ಸೇರಿಸಿದರು. 8ನೇ ವಿಕೆಟ್ ಜೊತೆಯಾಟದಲ್ಲಿ ವೈಶಾಖ ಅವರೊಂದಿಗೆ ಸೇರಿಸಿದ 64 ರನ್‌ಗಳೂ ಗೆಲುವಿಗೆ ಮಹತ್ವದ್ದಾದವು. ಅಷ್ಟೇ ಅಲ್ಲ ರೈಲ್ವೇಸ್ ಬೌಲರ್‌ಗಳ ದಾಳಿಯನ್ನು ತಾಳಿಕೊಂಡ ವಿದ್ವತ್ ಕಾವೇರಪ್ಪ (8; 24ಎ, 6X1) ಮನೀಷ್‌ಗೆ ಜೊತೆ ನೀಡಿದರು. ಆದರೆ, ತಂಡದ ಗೆಲುವಿಗೆ 12 ರನ್‌ಗಳ ಅವಶ್ಯಕತೆ ಇದ್ದಾಗ ವಿದ್ವತ್ ಔಟಾಗಿದ್ದರಿಂದ ಆತಂಕ ಎದುರಾಯಿತು.

ಕೊನೆಯ ಕ್ರಮಾಂಕದ ಬ್ಯಾಟರ್ ಕೌಶಿಕ್ (ಔಟಾಗದೆ 1) ಮನೀಷ್‌ಗೆ ಜೊತೆ ನೀಡಿದರು. ಕೊನೆಯ 12 ರನ್ ಗಳಿಸಲು ಇಬ್ಬರೂ ಸೇರಿ ಒಟ್ಟು 17 ಎಸೆತಗಳನ್ನು ಎದುರಿಸಿದರು.

ತಂಡವು ಗೆಲುವಿನ ಗುರಿ ಮುಟ್ಟಿದಾಗ ಪೆವಿಲಿಯನ್‌ನಲ್ಲಿದ್ದ ಸಹ ಆಟಗಾರರು, ನೆರವು ಸಿಬ್ಬಂದಿ ಪಿಚ್‌ನತ್ತ ಓಡಿ ಬಂದು ಪಾಂಡೆ ಅವರನ್ನು ಅಭಿನಂದಿಸಿ ಕುಣಿದಾಡಿದರು. ಆದರೆ ರೈಲ್ವೇಸ್ ತಂಡದ ಸ್ಪಿನ್ನರ್ ಆಕಾಶ್ ಪಾಂಡೆ (94ಕ್ಕೆ5) ಮತ್ತು ಉಳಿದ ಸಹ ಆಟಗಾರರು ನಿರಾಸೆಯಿಂದ ಕುಸಿದರು.

ಗುರಿ ಬೆನ್ನಟ್ಟಿದ ಕರ್ನಾಟಕ ತಂಡಕ್ಕೆ ಆರಂಭದಲ್ಲಿಯೇ ಆಘಾತ ಎದುರಾಯಿತು. ಎರಡನೇ ಓವರ್‌ನಲ್ಲಿಯೇ ನಿಶ್ಚಲ್ ಅವರನ್ನು ಹಿಮಾಂಶು ಸಂಗ್ವಾನ್ ಪೆವಿಲಿಯನ್‌ಗೆ ಕಳಿಸಿದರು.

ಆರ್. ಸಮರ್ಥ್ (35; 104ಎ) ಮತ್ತು ಕೆ.ವಿ. ಅನೀಶ್ (34; 88ಎ) ಅವರಿಬ್ಬರೂ 2ನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಅನೀಶ್ ಅವರನ್ನು ಔಟ್ ಮಾಡಿದ ಮೊಹಮ್ಮದ್ ಸೈಫ್ ಅವರು ಜೊತೆಯಾಟ ಮುರಿದರು.

ನಂತರದ ಓವರ್‌ನಲ್ಲಿ ಆಕಾಶ್ ಪಾಂಡೆ ಮಿಂಚಿದರು. ಸಮರ್ಥ್ ವಿಕೆಟ್ ಗಳಿಸಿದ ಪಾಂಡೆ, ತಮ್ಮ ಇನ್ನೊಂದು ಓವರ್‌ನಲ್ಲಿ ನಿಕಿನ್ ಜೋಸ್ ಅವರನ್ನೂ ಪೆವಿಲಿಯನ್‌ಗೆ ಕಳಿಸಿದರು. ಮಯಂಕ್ ಅಗರವಾಲ್ ಗೈರುಹಾಜರಿಯಲ್ಲಿ ತಂಡವನ್ನು ಮುನ್ನಡೆಸಿದ ನಿಕಿನ್ 12 ಎಸೆತ ಎದುರಿಸಿದರೂ ಖಾತೆ ತೆರೆಯಲಿಲ್ಲ.



ಕರ್ನಾಟಕ ತಂಡದ ಬ್ಯಾಟರ್ ಮನೀಷ್ ಪಾಂಡೆ –ಪ್ರಜಾವಾಣಿ ಸಂಗ್ರಹದಿಂದ

ಮುಖ್ಯಾಂಶಗಳು

- ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಮನೀಷ್ ಪಾಂಡೆ
- ಸೊನ್ನೆ ಸುತ್ತಿದ ನಾಯಕ ನಿಕಿನ್ ಜೋಸ್
- ಆಕಾಶ್ ಪಾಂಡೆಗೆ ಐದು ವಿಕೆಟ್

ವೈಶಾಖಿಗೆ ಐದು ವಿಕೆಟ್

ಪಂದ್ಯದ ಎರಡನೇ ದಿನವಾದ ಶನಿವಾರದ ಆಟದ ಮುಕ್ತಾಯಕ್ಕೆ ರೈಲ್ವೇಸ್ ತಂಡವು 8 ವಿಕೆಟ್‌ಗಳಿಗೆ 209 ರನ್ ಗಳಿಸಿತ್ತು. ಈ ಮೊತ್ತಕ್ಕೆ ರೈಲ್ವೇಸ್ ತಂಡದ ಆಟಗಾರರು ಮತ್ತೆ 35 ರನ್ ಸೇರಿಸಿದರು. ಉಳಿದೆರಡೂ ವಿಕೆಟ್‌ಗಳನ್ನು ಗಳಿಸಿದ ವೈಶಾಖ ಐದರ ಗೊಂಚಲು ಪೂರ್ಣಗೊಳಿಸಿದರು. ಎರಡನೇ ದಿನದಾಟದಲ್ಲಿ ಮೂರು ವಿಕೆಟ್ ಗಳಿಸಿದ್ದರು. ರೈಲ್ವೇಸ್ ತಂಡವು 244 ರನ್‌ಗಳಿಗೆ ಇನಿಂಗ್ಸ್ ಮುಗಿಸಿತು.

ಸಂಕ್ಷಿಪ್ತ ಸ್ಕೋರು

ಮೊದಲ ಇನಿಂಗ್ಸ್: ರೈಲ್ವೇಸ್: 155. ಕರ್ನಾಟಕ: 174.
ಎರಡನೇ ಇನಿಂಗ್ಸ್: ರೈಲ್ವೇಸ್ 72 ಓವರ್‌ಗಳಲ್ಲಿ 244 (ಯುವರಾಜ್ ಸಿಂಗ್ ಸಾಹೇಬ್ 28, ಎಸ್.ಎ. ಅಹುಜಾ 48, ವೈಶಾಖ ವಿಜಯಕುಮಾರ್ 67ಕ್ಕೆ5, ವಿದ್ವತ್ ಕಾವೇರಪ್ಪ 46ಕ್ಕೆ2) ಕರ್ನಾಟಕ:82.4 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 229 (ಆರ್. ಸಮರ್ಥ್ 35, ಕೆ.ವಿ. ಅನೀಶ್ 34, ಮನೀಷ್ ಪಾಂಡೆ ಔಟಾಗದೆ 67, ಶರತ್ ಶ್ರೀನಿವಾಸ್ 23, ವೈಶಾಖ ವಿಜಯಕುಮಾರ್ 38, ಹಿಮಾಂಶು ಸಂಗ್ವಾನ್ 24ಕ್ಕೆ2, ಆಕಾಶ್ ಪಾಂಡೆ 94ಕ್ಕೆ5, ಮೊಹಮ್ಮದ್ ಸೈಫ್ 43ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 1 ವಿಕೆಟ್ ಜಯ.
ಮಾಹಿತಿ: ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್



ಇಸ್ಲಾಮಾಬಾದ್‌ನಲ್ಲಿ ನಡೆದ ಡೇವಿಸ್ ಕಪ್ ವಿಶ್ವಗುಂಪಿನ ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ಗೆಲುವು ಸಾಧಿಸಿದ ಭಾರತ ತಂಡದ ಆಟಗಾರರು ಮತ್ತು ತರಬೇತುದಾರರು –ಪಿಟಿಐ ಚಿತ್ರ

ಡೇವಿಸ್ ಕಪ್: ವಿಶ್ವ ಪ್ರಥಮ ಗುಂಪಿಗೆ ಭಾರತ ಪ್ರವೇಶ

ಭಾರತಕ್ಕೆ ಮಣಿದ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಯೂಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಜೋಡಿಗೆ ನಿರಾಯಾಸ ಜಯ ಹಾಗೂ ನಿಕಿ ಪೂಣಚ್ಚ ಅವರ ಚೊಚ್ಚಲ ಗೆಲುವಿನೊಂದಿಗೆ ಭಾರತ ಡೇವಿಸ್ ಕಪ್ ತಂಡ ಭಾನುವಾರ ಪಾಕಿಸ್ತಾನವನ್ನು 4–0 ಅಂತರದಿಂದ ಸೋಲಿಸಿತು.

60 ವರ್ಷಗಳ ಬಳಿಕ ಪಾಕಿಸ್ತಾನ ಪ್ರವಾಸ ಕೈಗೊಂಡಿದ್ದ ಭಾರತ ಡೇವಿಸ್ ಕಪ್ ತಂಡ ವಿಶ್ವ ಪ್ರಥಮ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಡಬಲ್ಸ್ ವಿಭಾಗದಲ್ಲಿ ಭಾಂಬ್ರಿ ಮತ್ತು ಮೈನೇನಿ ಜೋಡಿ 6-2, 7-6 (5) ಸೆಟ್‌ಗಳಿಂದ ಮುಝಾಮಿಲ್ ಮುರ್ತಾಝ ಮತ್ತು ಅಖೀಲ್ ಖಾನ್ ಅವರನ್ನು ಮಣಿಸಿ ಟೂರ್ನಿಯಲ್ಲಿ ಪಾಕಿಸ್ತಾನ ವಿರುದ್ಧ ಭಾರತದ ಪ್ರಾಬಲ್ಯ ವಿಸ್ತರಿಸಿತು.

ಬರ್ಕತ್ ಉಲ್ಲಾ ಬದಲಿಗೆ ಅಖೀಲ್ ಖಾನ್ ಕಣಕ್ಕಿಳಿದಿದ್ದರು. 'ಮಾಡು ಇಲ್ಲವೇ ಮಡಿ' ಪಂದ್ಯವಾಗಿದ್ದರಿಂದ ಅನುಭವಿ ಆಟಗಾರನನ್ನು ಕಣಕ್ಕಿಳಿಸುವ ಯೋಜನೆ ಮಾಡಿತ್ತು. ಒಂದೊಮ್ಮೆ ಪಂದ್ಯ ಸೋತಿದ್ದರೆ ಭಾರತದ ಹಾದಿ ಕಠಿಣವಾಗುತ್ತಿತ್ತು. ಆದರೆ, ಭಾಂಬ್ರಿ ಮತ್ತು ಮೈನೇನಿ ಪ್ರಬಲ ಹೋರಾಟ ಮಾಡಿದರು.

ಮೈನೇನಿ ಅವರ ಪ್ರಬಲ ಸರ್ವ್‌ಗಳು ಆತಿಥೇಯ ತಂಡಕ್ಕೆ ಭಾರಿ ಹೊಡೆತ ನೀಡಿದವು. ಅವರು ತನ್ನ ಸರ್ವ್‌ನಲ್ಲಿ ಒಂದೂ ಪಾಯಿಂಟ್ ಕಳೆದುಕೊಳ್ಳಲಿಲ್ಲ ಮತ್ತು ನೆಟ್ ಬಳಿಯ ಆಟದಲ್ಲಿಯೂ ಉತ್ತಮವಾಗಿ ಆಡಿದರು. ಭಾರತ ಆಟಗಾರರು ಉತ್ತಮ ರಿಟರ್ನ್‌ಗಳನ್ನು ನೀಡಿದರು.

28ರ ವರ್ಷದ ನಿಕಿ ಪೂಣಚ್ಚ ಅವರು ಮೊಹಮ್ಮದ್ ಶೋಯೆಬ್ ಅವರನ್ನು 6-3, 6-4ರ ನೇರ ಸೆಟ್‌ಗಳಿಂದ ಸೋಲಿಸಿದರು.

ಶೋಯೆಬ್ ತನ್ನ ಸರ್ವ್‌ನಲ್ಲಿ ಹೆಣಗಾಡಿದರು ಹಾಗೂ ತಪ್ಪುಗಳನ್ನು ನಿಯಂತ್ರಿಸಲು ಪರದಾಡಿದರು. ಎದುರಾಳಿ ಸುಲಭವಾಗಿ ಪಾಯಿಂಟ್ಸ್ ಗಳಿಸಲು ಅವಕಾಶ ನೀಡಿದರು.

ಡೇವಿಸ್ ಕಪ್ ಟೂರ್ನಿಯಲ್ಲಿ ಇದು ಭಾರತಕ್ಕೆ ಎಂಟನೇ ಜಯವಾಗಿದೆ. ಟೆನಿಸ್ ವಿಶ್ವಕಪ್ ಎಂದೇ ಹೇಳಲಾಗುವ ಈ ಟೂರ್ನಿಯ ವಿಶ್ವ ಪ್ರಥಮ ಗುಂಪಿಗೆ ಭಾರತ ಅರ್ಹತೆ ಗಿಟ್ಟಿಸಿದೆ. ಇದೇ ವರ್ಷ ಸೆಪ್ಟೆಂಬರ್‌ನಲ್ಲಿ ಪ್ರಥಮ ಗುಂಪಿನ ಸ್ಪರ್ಧೆ ನಡೆಯಲಿದೆ. ಪಾಕ್ ತಂಡವು ಎರಡನೇ ಗುಂಪಿನಲ್ಲಿ ಇರಲಿದೆ.

'ಎಲ್ಲಾ ವ್ಯವಸ್ಥೆಗಳು ಉತ್ತಮವಾಗಿದ್ದವು. ಅದ್ಭುತ ಆತಿಥ್ಯ ವಹಿಸಿದ್ದಕ್ಕಾಗಿ ಪಾಕಿಸ್ತಾನ ಟೆನಿಸ್ ಫೆಡರೇಷನ್‌ಗೆ ಧನ್ಯವಾದಗಳು' ಎಂದು ಭಾರತ ತಂಡದ ಆಟವಾಡದ ನಾಯಕ ಜೀಶಾನ್ ಅಲಿ ಹೇಳಿದರು.

ಇಂಗ್ಲೆಂಡ್ ತಂಡಕ್ಕೆ 399 ರನ್ ಗುರಿ • ಕುತೂಹಲ ಘಟ್ಟದಲ್ಲಿ ಎರಡನೇ ಟೆಸ್ಟ್ ಕ್ರಿಕೆಟ್

ಶುಭಮನ್ ಗಿಲ್ ಅಮೋಘ ಶತಕದ ಲಯ

ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ: 'ಕೋಚ್ ರಾಹುಲ್ ದ್ರಾವಿಡ್ ಮತ್ತು ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಅವರು ನನ್ನ ಮೇಲಿಟ್ಟ ವಿಶ್ವಾಸಕ್ಕೆ ಆಭಾರಿಯಾಗಿದ್ದೇನೆ. ಇವತ್ತು ಅವರ ನಿರೀಕ್ಷೆಗೆ ತಕ್ಕಂತೆ ಆಡಿದ್ದೇನೆ. ತಂಡಕ್ಕೆ ಅತ್ಯಗತ್ಯವಾಗಿದ್ದ ಸಂದರ್ಭದಲ್ಲಿ ಶತಕ ಗಳಿಸಿರುವುದು ತೃಪ್ತಿ ತಂದಿದೆ'–

ಭಾರತ ಕ್ರಿಕೆಟ್ ತಂಡದ 'ಯುವರಾಜ' ಶುಭಮನ್ ಗಿಲ್ ಅವರ ಸಂತಸದ ನುಡಿಗಳಿವು.

ಇಂಗ್ಲೆಂಡ್ ಎದುರು ಇಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ನಂತರದ ಅವರು ಈ ಮಾತು ಹೇಳಲು ಕಾರಣವಿತ್ತು. ದೀರ್ಘ ಸಮಯದಿಂದ ಲಯ ಕಂಡುಕೊಳ್ಳಲು ಪರದಾಡಿದ್ದ ಅವರು ಇಲ್ಲಿ ಅಮೋಘ ಶತಕ ಗಳಿಸಿದರು. 24 ವರ್ಷದ ಗಿಲ್ (104; 147ಎಸೆತ) ಬ್ಯಾಟಿಂಗ್ ಬಲದಿಂದ ಭಾರತ ತಂಡವು ಇಂಗ್ಲೆಂಡ್‌ಗೆ 399 ರನ್‌ಗಳ ಕಠಿಣ ಗುರಿಯೊಡ್ಡಿದೆ.

ಭಾನುವಾರ ದಿನದಾಟದ ಮುಕ್ತಾಯಕ್ಕೆ ಇಂಗ್ಲೆಂಡ್ 1 ವಿಕೆಟ್ ನಷ್ಟಕ್ಕೆ 67 ರನ್ ಗಳಿಸಿದೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಸಮಯವಿರು-ವುದರಿಂದ ಗುರಿ ಮುಟ್ಟುವ ಅವಕಾಶ ಪ್ರವಾಸಿಗರಿಗೆ ಇದೆ. ಆದರೆ, ಡಾ. ವೈಎಸ್‌ಆರ್ ಎಸಿಎ–ವಿಡಿಸಿಎ ಕ್ರೀಡಾಂಗಣದ ಪಿಚ್‌ನಲ್ಲಿ ಚೆಂಡು ಹೆಚ್ಚು ತಿರುವು ಪಡೆಯುತ್ತಿದೆ. ಅನಿರೀಕ್ಷಿತ ಬೌನ್ಸ್ ಮತ್ತು ನಿಧಾನಗತಿಯ ಎಸೆತಗಳನ್ನು ಎದುರಿಸಿ ಆಡುವುದು ಸುಲಭವಲ್ಲ. ಆದರೆ ಮೊದಲ ಟೆಸ್ಟ್‌ನಲ್ಲಿ ಗೆದ್ದಿದ್ದ ಇಂಗ್ಲೆಂಡ್ ಈ ಸರಣಿಯಲ್ಲಿ 2–0 ಮುನ್ನಡೆ ಗಳಿಸುವ ಛಲದಲ್ಲಿದೆ.

ಗಿಲ್ ಶತಕ ಸೊಬಗು: ಶನಿವಾರ ದಿನದಾಟದ ಮುಕ್ತಾಯಕ್ಕೆ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 28 ರನ್ ಗಳಿಸಿತ್ತು.

ಭಾನುವಾರ ಬೆಳಿಗ್ಗೆ ಆಟ ಮುಂದುವರಿಸಿದ ಭಾರತ ತಂಡಕ್ಕೆ ಇಂಗ್ಲೆಂಡ್ ವೇಗಿ ಜೇಮ್ಸ್ ಆ್ಯಂಡರ್ಸನ್ ಬಲವಾದ ಪೆಟ್ಟುಕೊಟ್ಟರು. ತಮ್ಮ ಆರಂಭಿಕ ಸ್ಪೆಲ್‌ನಲ್ಲಿ (4–1–6–2) ರೋಹಿತ್ ಮತ್ತು ಮೊದಲ ಇನಿಂಗ್ಸ್ ದ್ವಿಶತಕ ಸಾಧಕ ಯಶಸ್ವಿ ಜೈಸ್ವಾಲ್ ಅವರ ವಿಕೆಟ್ ಗಳಿಸಿದರು.


ಈ ಹಂತದಲ್ಲಿ ಗಿಲ್ ತಮ್ಮ ನೈಜ ಆಟ ತೋರಿಸುವ ಅವಕಾಶವನ್ನು ಕೈಬಿಡಲಿಲ್ಲ. ಈ ಸರಣಿಯ ಮೊದಲ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ವಿಫಲರಾಗಿದ್ದರು. ಆದರೆ ಇಲ್ಲಿ ಚೆಂದದ ಡ್ರೈವ್, ಸ್ವೀಪ್, ರಿವರ್ಸ್ ಸ್ವೀಪ್‌ಗಳನ್ನು ಆಡಿದರು.

ಮೂರನೇ ವಿಕೆಟ್ ಜೊತೆಯಾಟದಲ್ಲಿ ಗಿಲ್ ಅವರು ಶ್ರೇಯಸ್ ಅಯ್ಯರ್ ಜೊತೆಗೆ 81 ರನ್ ಗಳಿಸಿದರು. ಅಕ್ಷರ್ ಪಟೇಲ್ ಜೊತೆಗೆ ಐದನೇ ವಿಕೆಟ್‌ಗೆ 89 ರನ್ ಸೇರಿಸಿದರು. 132 ಎಸೆತಗಳಲ್ಲಿ ಶತಕದ ಗಡಿ ತಲುಪಿದರು. ಅದರಲ್ಲಿ 11 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳು ಸೇರಿದ್ದವು. ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅವರ 3ನೇ ಶತಕ.

ಚಹಾ ವಿರಾಮಕ್ಕೂ ಸ್ವಲ್ಪ ಮುಂಚೆ ಗಿಲ್ ವಿಕೆಟ್ ಗಳಿಸಿದ ಶೋಯಬ್ ಬಷೀರ್ ನಿಟ್ಟುಸಿರು ಬಿಟ್ಟರು.

ಅಕ್ಷರ್ ಮತ್ತು ಅಶ್ವಿನ್ (29 ರನ್) ಅವರು ತಂಡದ ಮೊತ್ತ ಹೆಚ್ಚಿಸುವಲ್ಲಿ ಕಾಣಿಕೆ ನೀಡಿದರು. ಆದರೆ ಸ್ಪಿನ್ನರ್ ಟಾಮ್ ಹಾರ್ಟ್ಲಿ (77ಕ್ಕೆ4) ಮತ್ತು ರೆಹಾನ್ ಅಹಮದ್ (88ಕ್ಕೆ3) ಅವರು ಪರಿಣಾಮಕಾರಿ ದಾಳಿ ನಡೆಸಿದರು. ಆತಿಥೇಯ ತಂಡವು 255 ರನ್‌ಗಳಿಗೆ ಇನಿಂಗ್ಸ್ ಮುಗಿಸಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡದ ಬೆನ್ ಡಕೆಟ್ (28 ರನ್) ಅವರ ವಿಕೆಟ್ ಗಳಿಸಿರುವ ಅಶ್ವಿನ್ ಭರವಸೆ ಮೂಡಿಸಿದ್ದಾರೆ. ಜಾಕ್ ಕ್ರಾಲಿ (ಬ್ಯಾಟಿಂಗ್ 29) ಮತ್ತು ರೆಹಾನ್ (ಬ್ಯಾಟಿಂಗ್ 9) ಕ್ರೀಸ್‌ನಲ್ಲಿದ್ದಾರೆ.



–ಎಎಫ್‌ಪಿ ಚಿತ್ರ

ರೂಟ್‌ಗೆ ಗಾಯ

ಇಂಗ್ಲೆಂಡ್ ತಂಡದ ಬ್ಯಾಟರ್ ಜೋ ರೂಟ್ ಅವರು ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ಗಾಯಗೊಂಡರು. ಇನಿಂಗ್ಸ್‌ನ 18ನೇ ಓವರ್‌ನಲ್ಲಿ ಶುಭಮನ್ ಗಿಲ್ ಆಡಿದ ಎಸೆತವನ್ನು ಕ್ಯಾಚ್ ಮಾಡಲು ಪ್ರಯತ್ನಿಸಿದ ಸ್ಲಿಪ್ ಫೀಲ್ಡರ್ ರೂಟ್ ಅವರ ಕೈಬೆರಳಿಗೆ ಗಾಯವಾಯಿತು.

'ರೂಟ್ ಅವರ ಬಲ ಕಿರುಬೆರಳಿಗೆ ಚೆಂಡು ಬಡಿದು ಗಾಯವಾಗಿದೆ. ಆದ್ದರಿಂದ ಅವರು ವೈದ್ಯರ ಸಲಹೆಯ ಮೇರೆಗೆ ದಿನದಾಟದಲ್ಲಿ ಕಣಕ್ಕಿಳಿಯಲಿಲ್ಲ. ಅವರು ಆಡಲು ಫಿಟ್ ಇರುವ ಬಗ್ಗೆ ಈಗಲೂ ಖಚಿತವಿಲ್ಲ' ಎಂದು ಇಂಗ್ಲೆಂಡ್ ತಂಡದ ಮೂಲಗಳು ತಿಳಿಸಿವೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 396 (112 ಓವರುಗಳಲ್ಲಿ), ಇಂಗ್ಲೆಂಡ್ 253 (55.5 ಓವರ್). ಎರಡನೇ ಇನಿಂಗ್ಸ್: ಭಾರತ 255 (78.3 ಓವರ್‌ಗಳಲ್ಲಿ) (ಶನಿವಾರ ವಿಕೆಟ್ ನಷ್ಟವಿಲ್ಲದೇ 28)
ಯಶಸ್ವಿ ಸಿ ರೂಟ್ ಬಿ ಆ್ಯಂಡರ್ಸನ್ 17 (27ಎ, 4x3)
ರೋಹಿತ್ ಬಿ ಆ್ಯಂಡರ್ಸನ್ 13 (21ಎ, 4x3)
ಶುಭಮನ್ ಗಿಲ್ ಸಿ ಫೋಕ್ಸ್ ಬಿ ಬಷೀರ್ 104 (147, 4x11, 6x2)
ಶ್ರೇಯಸ್ ಸಿ ಸ್ಟೋಕ್ಸ್ ಬಿ ಹಾರ್ಟ್ಲಿ 29 (52ಎ, 4x2)
ರಜತ್ ಸಿ ಫೋಕ್ಸ್ ಬಿ ರೆಹಾನ್ 9 (19ಎ, 4x1)
ಅಕ್ಷರ್ ಎಲ್‌ಬಿಡಬ್ಲ್ಯು 45 (84ಎ, 4x6)
ಭರತ್ ಸಿ ಸ್ಟೋಕ್ಸ್ ಬಿ ರೆಹಾನ್ 6 (28ಎ, 4x1)
ಅಶ್ವಿನ್ ಸಿ ಫೋಕ್ಸ್ ಬಿ ರೆಹಾನ್ 29 (61ಎ, 4x2, 6x1)
ಕುಲದೀಪ್ ಸಿ ಡಕೆಟ್ ಬಿ ಹಾರ್ಟ್ಲಿ 0 (5ಎ)
ಜಸ್‌ಪ್ರೀತ್ ಸಿ ಬೇಸ್ಟೊ ಬಿ ಹಾರ್ಟ್ಲಿ 0 (26ಎ)
ಮುಕೇಶ್ ಔಟಾಗದೆ 0 (2ಎ)
ಇತರೆ: 3 (ಲೆಗ್‌ಬೈ 2, ನೋಬಾಲ್ 1)
ವಿಕೆಟ್ ಪತನ: 1-29 (ರೋಹಿತ್ ಶರ್ಮಾ; 6.4), 2-30 (ಯಶಸ್ವಿ ಜೈಸ್ವಾಲ್; 8.3), 3-111 (ಶ್ರೇಯಸ್ ಅಯ್ಯರ್; 27.1), 4-122 (ರಜತ್ ಪಾಟೀದಾರ್, 30.6), 5-211 (ಶುಭಮನ್ ಗಿಲ್; 55.6), 6-220 (ಅಕ್ಷರ್ ಪಟೇಲ್; 59.6), 7-228 (ಶ್ರೀಕರ್ ಭರತ್; 64.4), 8-229 (ಕುಲದೀಪ್ ಯಾದವ್; 65.5), 9-255 (ಜಸ್‌ಪ್ರೀತ್ ಬೂಮ್ರಾ; 77.4), 10-255 (ರವಿಚಂದ್ರನ್ ಅಶ್ವಿನ್;78.3)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 10–1–29–2, ಶೋಯಬ್ ಬಷೀರ್ 15–0–58–1, ರೆಹಾನ್ ಅಹಮ್ಮದ್ 24.3–5–88–3, ಜೋ ರೂಟ್ 2–1–1–0, ಟಾಮ್ ಹಾರ್ಟ್ಲಿ 27–3–77–4
ಇಂಗ್ಲೆಂಡ್ 1 ವಿಕೆಟ್‌ಗೆ 67 (14 ಓವರ್)
ಕ್ರಾಲಿ ಔಟಾಗದೆ 29 (50ಎ, 4x3, 6x1)
ಡಕೆಟ್ ಸಿ ಭರತ್ ಬಿ ಅಶ್ವಿನ್ 28 (27ಎ, 4x6)
ರೆಹಾನ್ ಔಟಾಗದೆ 9 (8ಎ, 4x2)
ಇತರೆ: 1 (ನೋಬಾಲ್ 1)
ವಿಕೆಟ್ ಪತನ: 1-50 (ಬೆನ್ ಡಕೆಟ್; 10.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 5–1–9–0, ಮುಕೇಶ್ ಕುಮಾರ್ 2–0–19–0, ಕುಲದೀಪ್ ಯಾದವ್ 4–0–21–0, ಆರ್. ಅಶ್ವಿನ್ 2–0–8–1, ಅಕ್ಷರ್ ಪಟೇಲ್ 1–0–10–0

ಸೀನಿಯರ್ ರಾಷ್ಟ್ರೀಯ ಕುಸ್ತಿ: ವಿನೇಶಾ ಫೋಗಾಟ್‌ಗೆ ಚಿನ್ನ

ಜೈಪುರ (ಪಿಟಿಐ): ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ವಿನೇಶಾ ಫೋಗಾಟ್ ಅವರು ಭಾನುವಾರ ನಡೆದ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನ 55 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಆಡಳಿತ ನೋಡಿಕೊಳ್ಳಲು ಭಾರತ ಒಲಿಂಪಿಕ್ಸ್ ಸಂಸ್ಥೆ (ಐಒಎ) ರಚಿಸಿರುವ ತಾತ್ಕಾಲಿಕ ಸಮಿತಿಯು ಈ ಚಾಂಪಿಯನ್‌ಷಿಪ್ ಆಯೋಜಿಸಿದೆ.

ವಿನೇಶಾ ಅವರು ಮಧ್ಯ ಪ್ರದೇಶದ ಜ್ಯೋತಿ ಅವರನ್ನು 4-0 ಅಂತರದಿಂದ ಸೋಲಿಸಿದರು. ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ಪ್ರತಿನಿಧಿಸುವ 29 ವರ್ಷದ ವಿನೇಶಾ 2018ರ ಜಕಾರ್ತಾ ಏಷ್ಯನ್ ಕ್ರೀಡಾಕೂಟದಲ್ಲಿ 50 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು.

ಮತ್ತೊಂದು ಹಣಾಹಣಿಯಲ್ಲಿ, 2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತರಾದ ಹರಿಯಾಣದ ಅಂಶು ಮಲಿಕ್ 59 ಕೆಜಿ ವಿಭಾಗದಲ್ಲಿ 2020ರ ಏಷ್ಯನ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತೆ ಸರಿತಾ ಮೋರ್ (ರೈಲ್ವೆ) ಅವರನ್ನು 8-3 ಅಂತರದಿಂದ ಸೋಲಿಸಿದರು.

ಹರಿಯಾಣದ ವನಿತೆಯರು 189 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದರೆ, ಆರ್‌ಎಸ್‌ಪಿಬಿ 187 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಪುದುಚೇರಿ 81 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ.

ಪುರುಷರ ಗ್ರೀಕೊ-ರೋಮನ್ ವಿಭಾಗದಲ್ಲಿ ಆರ್‌ಎಸ್‌ಪಿಬಿ 208 ಅಂಕಗಳೊಂದಿಗೆ ವಿಜೇತರಾಗಿ ಹೊರಹೊಮ್ಮಿದರೆ, ಸರ್ವೀಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ (127 ಪಾಯಿಂಟ್ಸ್) ಮತ್ತು ಮಹಾರಾಷ್ಟ್ರ (113 ಪಾಯಿಂಟ್ಸ್) ನಂತರದ ಸ್ಥಾನಗಳಲ್ಲಿವೆ.

ಕೊನೆ ದಿನವಾದ ಸೋಮವಾರ ಪುರುಷರ ಫ್ರಿ ಸ್ಟೈಲ್ ಸ್ಪರ್ಧೆಗಳು ನಡೆಯಲಿವೆ.



ವಿನೇಶಾ ಫೋಗಾಟ್

ಪ್ಯಾರಾಲಿಂಪಿಕ್ ಸಮಿತಿ ಅಮಾನತು

ನವದೆಹಲಿ (ಪಿಟಿಐ): ನಿಗದಿತ ಸಮಯಕ್ಕೆ ಚುನಾವಣೆ ನಡೆಸದ ಕಾರಣ ಭಾರತ ಪ್ಯಾರಾಲಿಂಪಿಕ್ಸ್ ಸಮಿತಿಯನ್ನು (ಪಿಸಿಐ) ಶುಕ್ರವಾರ ಕ್ರೀಡಾ ಸಚಿವಾಲಯ ಅಮಾನತುಗೊಳಿಸಿದೆ. ಇದರಿಂದಾಗಿ ಭಾರತದಲ್ಲಿ ಪ್ಯಾರಾ ಶೂಟಿಂಗ್ ವಿಶ್ವಕಪ್ ಆತಿಥ್ಯದ ಮೇಲೆ ಅನಿಶ್ಚಿತತೆಯ ಕಾರ್ಮೋಡ ಕವಿದಿದೆ.

ಮಾರ್ಚ್ 6 ರಿಂದ 15 ರವರೆಗೆ ಇಲ್ಲಿನ ಕರ್ಣಿಸಿಂಗ್ ರೇಂಜ್‌ನಲ್ಲಿ ನಡೆಯಲಿರುವ ಪ್ಯಾರಾ ಶೂಟಿಂಗ್ ವಿಶ್ವಕಪ್ ಭಾರತಕ್ಕೆ ನಿಗದಿಪಡಿಸಿದ ಮೊದಲ ಮೆಗಾ ಪ್ಯಾರಾ ಶೂಟಿಂಗ್ ಸ್ಪರ್ಧೆಯಾಗಿದೆ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ 24 ಕೋಟಾ ಸ್ಥಾನಗಳನ್ನು ಪಡೆಯಲು ಇಲ್ಲಿ ಅವಕಾಶ ಸಿಗಲಿದೆ.

52 ದೇಶಗಳ 500 ಕ್ಕೂ ಹೆಚ್ಚು ಪಿಸ್ತೂಲ್, ರೈಫಲ್ ಮತ್ತು ಶಾಟ್‌ಗನ್‌ಗಳ ಶೂಟರ್‌ಗಳು ಸ್ಪರ್ಧಿಸುವ ನಿರೀಕ್ಷೆಯಿದೆ. ರಾಷ್ಟ್ರೀಯ ಕ್ರೀಡಾ ಸಂಹಿತೆಯ ಪ್ರಕಾರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲು ವಿಳಂಬ ಮಾಡಿದ್ದಕ್ಕಾಗಿ ಸಚಿವಾಲಯವು ಶುಕ್ರವಾರ ಪಿಸಿಐ ಮಾನ್ಯತೆ ಅಮಾನತುಗೊಳಿಸಿ ಆದೇಶ ಹೊರಡಿಸಿತ್ತು.

ಪಿಸಿಐ ನಿರ್ವಹಿಸುವ ಈ ಕಾರ್ಯಗಳನ್ನು ಕೈಗೊಳ್ಳಲು ಮತ್ತು ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆ ಸಲು ತಾತ್ಕಾಲಿಕ ಸಮಿತಿ ರಚಿಸಲು ಐಪಿಸಿಯೊಂದಿಗೆ ಸಮನ್ವಯ ಸಾಧಿಸುವಂತೆ ಸಚಿವಾಲಯವು ಭಾರತೀಯ ಕ್ರೀಡಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದೆ.

ಐಒಎಗೆ ಸಿಇಒ ನೇಮಕ– ಹಿಂದೆ ಸರಿಯುವುದಿಲ್ಲ: ಪಿ.ಟಿ. ಉಷಾ

ನವದೆಹಲಿ (ಪಿಟಿಐ): ಹೊಸದಾಗಿ ನೇಮಕಗೊಂಡ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ರಘುರಾಮ್ ಅಯ್ಯರ್ ಮೇಲೆ ಸಂಪೂರ್ಣ ವಿಶ್ವಾಸವಿದೆ ಮತ್ತು ಉನ್ನತ ಹುದ್ದೆಗೆ ಅವರನ್ನು ನೇಮಿಸಿರುವ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ. ಉಷಾ ಭಾನುವಾರ ಹೇಳಿದರು.

ರಘುರಾಮ್ ನೇಮಕವನ್ನು ಅನೂರ್ಜಿತ ಎಂದು ಘೋಷಿಸುವ ಅಮಾನತು ಆದೇಶಕ್ಕೆ ಐಒಎ ಕಾರ್ಯಕಾರಿ ಸಮಿತಿಯ ಹೆಚ್ಚಿನ ಸದಸ್ಯರು ಸಹಿ ಹಾಕಿದ್ದಾರೆ ಎಂದು ವರದಿಗಳು ಹೇಳಿದ್ದವು.

ಐಒಎ ಜನವರಿ 6 ರಂದು ರಾಜಸ್ಥಾನ ರಾಯಲ್ಸ್‌ನ ಮಾಜಿ ಅಧಿಕಾರಿ ಅಯ್ಯರ್ ಅವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಿಸಿತ್ತು. ಆದರೆ, ಕಾರ್ಯಕಾರಿ ಸಮಿತಿಯ ಹಲವಾರು ಸದಸ್ಯರು, ಸಿಇಒ ಆಗಿ ಅಯ್ಯರ್ ಅವರನ್ನೇ ಶಿಫಾರಸು ಮಾಡಲು ಉಷಾ ತಮ್ಮ ಮೇಲೆ ಒತ್ತಡ ಹೇರಿದ್ದಾರೆ ಎಂದು ಆರೋಪಿಸಿದರು.

ಈ ಆರೋಪವನ್ನು ಉಷಾ 'ನಾಚಿಕೆಗೇಡಿನದು' ಎಂದು ಟೀಕಿಸಿದ್ದರು.

ದೆಹಲಿ ಸ್ಪೋರ್ಟ್ಸ್ ಜರ್ನಲಿಸ್ಟ್ಸ್ ಅಸೋಸಿಯೇಷನ್ (ಡಿಎಸ್‌ಜೆಎ) ಮತ್ತು ಸ್ಪೋರ್ಟ್ಸ್ ಜರ್ನಲಿಸ್ಟ್ಸ್ ಫೆಡರೇಶನ್ ಆಫ್ ಇಂಡಿಯಾ (ಎಸ್‌ಜೆಎಫ್‌ಐ) ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಉಷಾ, 'ಸಿಇಒ ಅವರನ್ನು ಸರಿಯಾದ ರೀತಿಯಲ್ಲಿ ನೇಮಕ ಮಾಡಿದ್ದೇನೆ ಮತ್ತು ಅವರು ಕೆಲಸ ಮಾಡುತ್ತಿದ್ದಾರೆ. ತಪ್ಪು ಕೆಲಸ ಮಾಡಿದಾಗ, ಭಯಪಡಬೇಕು. ಸರಿಯಾಗಿ ಕೆಲಸ ಮಾಡುತ್ತಿರುವಾಗ ಅದರ ಬಗ್ಗೆ ಏಕೆ ಚಿಂತಿಸಬೇಕು' ಎಂದರು.

ಇದೇ ವೇಳೆ ಎಸ್‌ಜೆಎಫ್‌ಐ ಮತ್ತು ಡಿಎಸ್‌ಜೆಐ ವತಿಯಿಂದ ಪಿ.ಟಿ. ಉಷಾ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ಒಲಿಂಪಿಕ್ಸ್ ಆತಿಥ್ಯ: ಮಾತುಕತೆ'

ನವದೆಹಲಿ (ಪಿಟಿಐ): ಭಾರತವು 2036ರ ಒಲಿಂಪಿಕ್ಸ್ ಕ್ರೀಡಾಕೂಟದ ಆತಿಥ್ಯಕ್ಕಾಗಿ ಬಿಡ್ ಪ್ರಕ್ರಿಯೆ ಬಗ್ಗೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಮುಂಬರುವ ಒಲಿಂಪಿಕ್ ಕೂಟಗಳ ಆತಿಥ್ಯದ ವ್ಯವಹಾರಗಳ ಕಮಿಷನರ್ ಜತೆ ಮಾತುಕತೆ ನಡೆಸುತ್ತಿದ್ದೇವೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಭಾನುವಾರ ತಿಳಿಸಿದೆ.

ಕಳೆದ ವರ್ಷ ಅಕ್ಟೋಬರ್ 14ರಂದು ಮುಂಬೈನಲ್ಲಿ ನಡೆದ ಐಒಸಿ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತವು 2036ರ ಕ್ರೀಡಾಕೂಟದ ಆತಿಥ್ಯ ವಹಿಸುವುದಾಗಿ ಘೋಷಿಸಿದರು. ಆದರೆ, ಐಒಸಿ ಜತೆ ಔಪಚಾರಿಕ ಮಾತುಕತೆ ಪ್ರಾರಂಭಿಸಿದೆ ಎಂದು ಐಒಎ ಅಧಿಕೃತವಾಗಿ ಹೇಳಿರುವುದು ಇದೇ ಮೊದಲು.

ಸಂಕ್ಷಿಪ್ತ ಸುದ್ದಿ

ಪ್ರೊ ಕಬಡ್ಡಿ: ಬುಲ್ಸ್‌ಗೆ ಜಯ

ನವದೆಹಲಿ: ಸುಶೀಲ್ ಮತ್ತು ಅಕ್ಷಿತ್ ಧುಳ್ ಅವರ ಚುರುಕಾದ ದಾಳಿಯಿಂದಾಗಿ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಭಾನುವಾರ 42–37ರಿಂದ ಯು ಮುಂಬಾ ವಿರುದ್ಧ ಜಯಿಸಿತು.

ಇಲ್ಲಿ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆ 22–24ರಿಂದ ಹಿನ್ನಡೆಯಲ್ಲಿದ್ದ ಬುಲ್ಸ್ ತಂಡವು ನಂತರ ಸಾಂಘಿಕ ಆಟವಾಡಿ ಐದು ಅಂಕಗಳ ಗೆಲುವು ಸಾಧಿಸಿತು. ಸುಶೀಲ್ ಮತ್ತು ಅಕ್ಷಿತ್ ಕ್ರಮವಾಗಿ 10 ಮತ್ತು 8 ಪಾಯಿಂಟ್ಸ್ ತಂದುಕೊಟ್ಟರೆ, ಟ್ಯಾಕಲ್‌ನಲ್ಲಿ ಸುರ್ಜೀತ್ ಸಿಂಗ್ ಮತ್ತು ರಣಸಿಂಗ್ ಕ್ರಮವಾಗಿ 6 ಮತ್ತು 5 ಅಂಕಗಳೊಂದಿಗೆ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು. ಯು ಮುಂಬಾ ತಂಡದ ಜೈ ಭಗವಾನ್ 'ಸೂಪರ್ ಟೆನ್' ಸಾಧನೆ ಮಾಡಿದರು.

ಜೈಂಟ್ಸ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವು 42–30ರಿಂದ ತಮಿಳು ತಲೈವಾಸ್ ತಂಡವನ್ನು ಮಣಿಸಿತು.

ಮಹಿಳಾ ಹಾಕಿ: ಭಾರತಕ್ಕೆ ಸೋಲು

ಭುವನೇಶ್ವರ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಭಾನುವಾರ ಇಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ 1-3 ಗೋಲುಗಳಿಂದ ನೆದರ್ಲೆಂಡ್ಸ್ ವಿರುದ್ಧ ಸೋಲು ಅನುಭವಿಸಿತು.

ಭಾರತಕ್ಕೆ ಇದು ಸತತ ಎರಡನೇ ಸೋಲು. ಶನಿವಾರ ಚೀನಾ ವಿರುದ್ಧ ಪರಾಭವಗೊಂಡಿತ್ತು.

ಈ ಪಂದ್ಯದಲ್ಲಿ ಆರು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದರೂ ಅದನ್ನು ಗೋಲಾಗಿ ಪರಿವರ್ತಿಸುವಲ್ಲಿ ಭಾರತದ ಆಟಗಾರ್ತಿಯರು ವಿಫಲವಾದರು. ಭಾರತದ ಪರ ನವನೀತ್ ಕೌರ್ ಏಕೈಕ ಗೋಲು ದಾಖಲಿಸಿದರು.

ವರ್ಷಾ ಪುರಾಣಿಕ್‌ಗೆ ಡಬಲ್ ಚಿನ್ನ

ಲೇಹ್ (ಪಿಟಿಐ): ಭಾರತದ ಪ್ರಮುಖ ಐಸ್ ಸ್ಕೇಟರ್ ವರ್ಷಾ ಪುರಾಣಿಕ್ ಖೇಲೊ ಇಂಡಿಯಾ ಚಳಿಗಾಲದ ಕ್ರೀಡೆಗಳಲ್ಲಿ ಕರ್ನಾಟಕಕ್ಕೆ 'ಡಬಲ್' ಚಿನ್ನ ಪದಕ ತಂದುಕೊಟ್ಟರು.

ಮಹಿಳೆಯರ 500 ಮೀಟರ್ ಶಾರ್ಟ್ ಟ್ರ್ಯಾಕ್ ರೇಸ್ (17 ವರ್ಷದ ಮೇಲ್ಪಟ್ಟವರ ವಿಭಾಗ)ನಲ್ಲಿ ಅವರು 1 ನಿಮಿಷ 7.78 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಅವರು ಶನಿವಾರ 300 ಮೀ. ಶಾರ್ಟ್ ಟ್ರ್ಯಾಕ್ ರೇಸ್‌ನಲ್ಲಿ ಚಿನ್ನ ಗೆದ್ದಿದ್ದರು.

ಇಲ್ಲಿಯವರೆಗೆ ಇತ್ಯರ್ಥವಾದ 8 ಚಿನ್ನದ ಪದಕಗಳಲ್ಲಿ ಕರ್ನಾಟಕ ತಂಡ ನಾಲ್ಕನ್ನು ಗೆದ್ದು, ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಇಂದಿನಿಂದ ಫುಟ್‌ಬಾಲ್ ಲೀಗ್

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಆಶ್ರಯದಲ್ಲಿ ಮಹಿಳೆಯರ 'ಎ' ಡಿವಿಷನ್ ಫುಟ್‌ಬಾಲ್ ಲೀಗ್ ಇದೇ 5ರಿಂದ ಆರಂಭಗೊಂಡು 27ರವರೆಗೆ ನಡೆಯಲಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿದ್ದು, ಒಟ್ಟು 8 ತಂಡಗಳು ಸೆಣಸಲಿವೆ. ಫೆ.5ರಂದು ಬೆಳಿಗ್ಗೆ 9 ಗಂಟೆಗೆ ನಡೆಯುವ ಪಂದ್ಯದಲ್ಲಿ ಯುನೈಟೆಡ್ ಎಫ್‌ಸಿ ಕೊಡಗು ಮತ್ತು ಜಿಆರ್‌ಕೆ ಗರ್ಲ್ಸ್ ಎಫ್‌ಸಿ ಮುಖಾಮುಖಿ-ಯಾಗಲಿವೆ. 10.30ಕ್ಕೆ ಯಂಗ್‌ಸ್ಟಾರ್ಸ್– ಸ್ಲಾಮ್ಜರ್ಸ್ ಎಫ್‌ಸಿ ತಂಡಗಳು ಸೆಣಸಲಿವೆ.

ಭಾರತ 'ಎ' ತಂಡಕ್ಕೆ ಸರಣಿ ಜಯ

ಅಹಮದಾಬಾದ್ (ಪಿಟಿಐ): ಎಡಗೈ ಸ್ಪಿನ್ನರ್ ಶಮ್ಸ್ ಮುಲಾನಿ ಮೋಡಿಯ ಮುಂದೆ ಇಂಗ್ಲೆಂಡ್ ಲಯನ್ಸ್ ತಂಡವು ಭಾರತ 'ಎ' ತಂಡಕ್ಕೆ ಶರಣಾಯಿತು.

ಭಾನುವಾರ ಇಲ್ಲಿ ಮುಕ್ತಾಯವಾದ 'ಟೆಸ್ಟ್' ಪಂದ್ಯದಲ್ಲಿ ಭಾರತ 'ಎ' ತಂಡವು 134 ರನ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯನ್ನು ಅತಿಥೇಯ ಬಳಗವು 2–0ಯಿಂದ ಗೆದ್ದಿತು. ಶಮ್ಸ್ ಮುಲಾನಿ 5 ವಿಕೆಟ್ ಪಡೆದರು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 403 ರನ್‌ಗಳ ಬೃಹತ್ ಗೆಲುವಿನ ಬೆನ್ನಟ್ಟಿದ್ದ ಇಂಗ್ಲೆಂಡ್ ಲಯನ್ಸ್ ತಂಡಕ್ಕೆ 72.4 ಓವರ್‌ಗಳಲ್ಲಿ 268 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಮುಲಾನಿ ಅವರೊಂದಿಗೆ ಸಾರಾಂಶ್ ಜೈನ್ (50ಕ್ಕೆ3) ಉತ್ತಮ ಜೊತೆ ನೀಡಿದರು. ಪ್ರವಾಸಿ ಬಳಗದ ಆರಂಭಿಕ ಬ್ಯಾಟರ್ ಅಲೆಕ್ಸ್ ಲೀಸ್ (55; 96ಎ) ಮತ್ತು ಎಂಟನೇ ಕ್ರಮಾಂಕದ ಒಲಿವರ್ ರಾಬಿನ್ಸನ್ (80; 105ಎ) ಹೋರಾಟ ತೋರಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 'ಎ': 192, ಇಂಗ್ಲೆಂಡ್ ಲಯನ್ಸ್: 199. ಎರಡನೇ ಇನಿಂಗ್ಸ್: ಭಾರತ 'ಎ': 107.1 ಓವರ್‌ಗಳಲ್ಲಿ 409. ಇಂಗ್ಲೆಂಡ್ ಲಯನ್ಸ್: 72.4 ಓವರ್‌ಗಳಲ್ಲಿ 268 (ಅಲೆಕ್ಸ್ ಲೀಸ್ 55, ಒಲಿವರ್ ರಾಬಿನ್ಸನ್ 80, ಜೇಮ್ಸ್ ಕೋಲ್ಸ್ 31, ಶಮ್ಸ್ ಮುಲಾನಿ 60ಕ್ಕೆ5, ಸಾರಾಂಶ್ ಜೈನ್ 50ಕ್ಕೆ3).